ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 14 ಮಂಗಳವಾರ 2022

ಸಂಪುಟ: 43 | ಸಂಚಿಕೆ: 59 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಜೂ.20ರ ಸಂಜೆ ಮೋದಿ ಚಾಮುಂಡೇಶ್ವರಿ ದರ್ಶನ

● ನಂತರ ಜೆಎಸ್ಎಸ್ ಮಠಕ್ಕೆ ಭೇಟಿ
● ಮಾರನೇ ದಿನ ಯೋಗದ ನಂತರ ಮೈಸೂರು ರಾಜಮನೆತನದವರ ಭೇಟಿ

ಬೆಂಗಳೂರು, ಜೂ. 13(ಕೆಎಂಶಿ)–



ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲು 2 ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಭೇಟಿ ಸಂದರ್ಭದಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ, ಚಾಮುಂಡೇಶ್ವರಿ ದರ್ಶನ ಮತ್ತು ಪೂಜಾ ಕಾರ್ಯಕ್ರಮದಲ್ಲಿ ▶ 8ನೇ ಪುಟಕ್ಕೆ

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಶೇ.70ರಷ್ಟು ಮತದಾನ



ಮೈಸೂರಿನ ಮತಗಟ್ಟೆಯೊಂದರಲ್ಲಿ ಸೋಮವಾರ ಮತ ಚಲಾಯಿಸಲು ಸರತಿ ಸಾಲಿನಲ್ಲಿ ನಿಂತಿರುವ ಪದವೀಧರ ಮತದಾರರು.

ಮೈಸೂರು, ಜೂ.13 (ಆರ್‌ಕೆ)– ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ ಒಳಗೊಂಡ ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಇಂದು ನಡೆದ ಚುನಾವಣೆಯಲ್ಲಿ ಶೇ.70 ಮತದಾನ ಶಾಂತಿಯುತವಾಗಿ ನಡೆಯಿತು.

ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ಎಲ್ಲಾ 150 ಮತಗಟ್ಟೆಗಳಲ್ಲಿ ನಡೆದ ಮತದಾನ ಪ್ರಕ್ರಿಯೆಯಲ್ಲಿ ನಾಲ್ಕೂ ಜಿಲ್ಲೆಗಳ 99,467 ಮಂದಿ ಪದವೀಧರರು (ಶೇ.70) ತಮ್ಮ ಹಕ್ಕು ಚಲಾಯಿಸಿದರು. 82,386 ಪುರುಷರು, 59,450 ಮಹಿಳೆಯರು ಹಾಗೂ 24 ಇತರರು ಸೇರಿ ಒಟ್ಟು 1,41,887 ಪದವೀಧರರು ನೋಂದಾಯಿತ ಮತದಾರರಿದ್ದರು. ಬಿಜೆಪಿಯ ಎಂ.ವಿ.ರವಿಶಂಕರ್, ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ, ಜೆಡಿಎಸ್‌ನ ಹೆಚ್.ಕೆ. ರಾಮು, ಎಸ್‌ಡಿಪಿಐನ ರಫತುಲ್ಲಾ ಖಾನ್, ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ಆರ್‌ಪಿಐನ ಎನ್.ವೀರಭದ್ರಸ್ವಾಮಿ, ಬಿಎಸ್‌ಪಿಯ ಡಾ.ಬಿ.ಹೆಚ್.ಚನ್ನಕೇಶವಮೂರ್ತಿ, ರೈತ ಸಂಘದ ಪ್ರಸನ್ನ ಎನ್. ಗೌಡ ಸೇರಿದಂತೆ ಚುನಾವಣಾ ಕಣದಲ್ಲಿರುವ 19 ಅಭ್ಯರ್ಥಿಗಳೂ ಮತಗಟ್ಟೆಗಳಿಗೆ ತೆರಳಿ ಕಸರತ್ತು ನಡೆಸುತ್ತಿದ್ದುದು ಕಂಡುಬಂತು.

ದಕ್ಷಿಣ ಪದವೀಧರ ಕ್ಷೇತ್ರ	–ಶೇ.70
ವಾಯುವ್ಯ ಪದವೀಧರ ಕ್ಷೇತ್ರ	–ಶೇ.59
ವಾಯುವ್ಯ ಶಿಕ್ಷಕರ ಕ್ಷೇತ್ರ	–ಶೇ.80
ಪಶ್ಚಿಮ ಶಿಕ್ಷಕರ ಕ್ಷೇತ್ರ	–ಶೇ.84

ಕುವೆಂಪುನಗರದ ಭಾನವಿ ಆಸ್ಪತ್ರೆ ಬಳಿಯ ಸರ್ಕಾರಿ ಹೈಯರ್ ಪ್ರೈಮರಿ ಶಾಲಾ ಮತಕೇಂದ್ರದಲ್ಲಿ ಬಿಜೆಪಿಯ ಎಂ.ವಿ.ರವಿಶಂಕರ್ ಮತ್ತು ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು ಮತ ಚಲಾಯಿಸಿದರು. ಸಂಸದ ಪ್ರತಾಪ್ ಸಿಂಹ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾ ಕೇಂದ್ರದಲ್ಲಿ, ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್.ಶ್ರೀವತ್ಸ ಮತ್ತು ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಅಗ್ರಹಾರದ ಶ್ರೀಕಾಂತ ಬಾಲಿಕ ಪ್ರೌಢಶಾಲೆಯಲ್ಲಿ, ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಶಾಸಕ ಎಸ್.ಎ.ರಾಮದಾಸ್ ಚಾಮುಂಡಿಪುರಂನ ಬಾಲಬೋಧಿನಿ ಶಾಲೆಯಲ್ಲಿ ಮತ ಚಲಾಯಿಸಿದರು. ಮತದಾನ ಪ್ರಾರಂಭವಾದ ಮೊದಲ 2 ತಾಸಿನಲ್ಲಿ ಬೆಳಗ್ಗೆ 10 ಗಂಟೆವರೆಗೆ ಮೈಸೂರು ಜಿಲ್ಲೆಯಲ್ಲಿ 5,255 ಮಂದಿ (ಶೇ.9.03), ಅಪರಾಹ್ನ 12 ಗಂಟೆ ವೇಳೆಗೆ 12,032 (ಶೇ.20.68), ಮಧ್ಯಾಹ್ನ 2ರವರೆಗೆ 24,470 (ಶೇ.42.05) ಹಾಗೂ ಸಂಜೆ 4.15 ▶ 8ನೇ ಪುಟಕ್ಕೆ

ಒಟ್ಟು ಮತದಾರರು					ಚಲಾವಣೆಯಾದ ಮತ				
ಜಿಲ್ಲೆ	ಪುರುಷ	ಮಹಿಳೆ	ಇತರರು	ಒಟ್ಟು ಮತದಾರರು	ಪುರುಷ	ಮಹಿಳೆ	ಇತರರು	ಒಟ್ಟು	ಶೇಖಡ
ಮೈಸೂರು	34081	24096	09	58186	24371	14988	–	39359	67.64
ಮಂಡ್ಯ	26433	20857	12	47302	19179	13873	1	33053	69.88
ಚಾ.ನಗರ	7912	4233	02	12147	6007	2886	0	08893	73.21
ಹಾಸನ	13960	10291	01	24252	10813	7186	0	17999	74.22
ಒಟ್ಟು	82386	59450	24	141887	60425	39041	1	99467	70.00

ನಾಳೆ ಮತ ಎಣಿಕೆ

ಮೈಸೂರು ನಗರದ 43 ಸೇರಿದಂತೆ ಜಿಲ್ಲಾದ್ಯಂತ 66 ಮತಗಟ್ಟೆಗಳು, ಮಂಡ್ಯ ಜಿಲ್ಲೆಯ 45, ಹಾಸನದ 27, ಚಾಮರಾಜನಗರದ 12 ಮತಗಟ್ಟೆಗಳಲ್ಲಿ ಮತದಾನ ಶಾಂತಿಯುತವಾಗಿ ನಡೆಯಿತು. ಆ ಪೈಕಿ ಮೈಸೂರು, ಹಾಸನದಲ್ಲಿ ತಲಾ 2, ಮಂಡ್ಯದಲ್ಲಿ 13 ಮತಗಟ್ಟೆಗಳನ್ನು ಅತೀ ಸೂಕ್ಷ್ಮ ಎಂದು ಗುರ್ತಿಸಲಾಗಿದ್ದು, ಅಲ್ಲಿ ವೆಬ್ ಕ್ಯಾಮರಾ ಅಳವಡಿಸಿ ಮತದಾನ ಪ್ರಕ್ರಿಯೆಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ಎಲ್ಲಾ ಮತಗಟ್ಟೆಗಳಲ್ಲೂ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು. ಮೈಕ್ರೋ ಅಬ್ಸರ್‌ವರ್‌ಗಳು ಪ್ರತೀ ಮತಗಟ್ಟೆಯಲ್ಲಿ ಹಾಜರಿದ್ದು, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಮತದಾರರು, ಸಿಬ್ಬಂದಿ ಹೊರತುಪಡಿಸಿ ಬೇರೆಯವರು ಮತಗಟ್ಟೆ ಬಳಿ ಸುಳಿಯದಂತೆ ಎಚ್ಚರ ವಹಿಸಲಾಗಿತ್ತು. ಅಭ್ಯರ್ಥಿಗಳ ಪ್ರತಿನಿಧಿಗಳು ಮತಗಟ್ಟೆಯ 200 ಮೀ. ದೂರದಲ್ಲಿ ಟೇಬಲ್, ಕುರ್ಚಿ, ಶಾಮಿಯಾನ ಹಾಕಿಕೊಂಡು ಮತದಾರರಿಗೆ ಬೂತ್ ಸಂಖ್ಯೆ, ಮತದಾರರ ಪಟ್ಟಿಯಲ್ಲಿ ಹೆಸರು, ಇನ್ನಿತರ ಮಾಹಿತಿ ನೀಡುತ್ತಿದ್ದರು.

ಪಟ್ಟಿಯಲ್ಲಿ ಹೆಸರಿಲ್ಲದೆ ಪದವೀಧರರ ನಿರಾಸೆ

ಮೈಸೂರು, ಜೂ. 13(ಆರ್‌ಕೆ)– ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಕಾರಣ ತಮ್ಮ ಹಕ್ಕು ಚಲಾಯಿಸಲಾಗದೇ ಕೆಲವು ಮತಗಟ್ಟೆಗಳಲ್ಲಿ ಪದವೀಧರರು ನಿರಾಸೆಯಿಂದ ಹಿಂದಿರುಗಿದರು. ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಕಳೆದ 6 ತಿಂಗಳಿಂದ ದಕ್ಷಿಣ ಪದವೀಧರ ಚುನಾವಣೆ ನೋಂದಾಯಿತ ಮತದಾರರ ಹೊಸ ಪಟ್ಟಿ ತಯಾರಿಸಲಾಗಿತ್ತು. ಕೆಲವು ಪದವೀಧರರು ಪಟ್ಟಿಯಲ್ಲಿನ ಹೆಸರನ್ನು ನವೀಕರಿಸದಿರುವುದು ಹಾಗೂ ಹೊಸದಾಗಿ ಸೇರಿಸದೇ ನಿರ್ಲಕ್ಷ್ಯ ತೋರಿರುವುದು ಪಟ್ಟಿಯಲ್ಲಿ ಹೆಸರು ನಾಪತ್ತೆಯಾಗಲು ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗಾಗಿ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಲು ಬಂದಿದ್ದ ಕೆಲ ಪದವೀಧರರು ಪರಿಶೀಲಿಸಿದಾಗ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ನಿರಾಶರಾಗಿ ಹಿಂದಿರುಗುತ್ತಿದ್ದುದು ಕಂಡುಬಂತು. ಆಧಾರ್ ಕಾರ್ಡಿನಲ್ಲಿ ನಮೂದಾಗಿರುವ ವಿಳಾಸದ ವ್ಯಾಪ್ತಿಗೆ ಬರುವ ಮತಗಟ್ಟೆಗಳಲ್ಲಿ ಪದವೀಧರರಿಗೆ ಮತ ಹಾಕಲು ಅವಕಾಶ ಕಲ್ಪಿಸಲಾಗಿತ್ತು. ಆದರೆ ಈ ಹಿಂದಿನ ಚುನಾವಣೆಯಲ್ಲಿ ಮತ ಚಲಾಯಿಸಿದ್ದವರು ಆ ಮತಗಟ್ಟೆಯಲ್ಲೇ ಇರುತ್ತದೆ ಎಂದು ಭಾವಿಸಿ ಅಲ್ಲಿಗೆ ಹೋಗಿದ್ದರಾದರೂ, ಅವರ ಹೆಸರು ಬೇರೊಂದು ಬೂತ್‌ನಲ್ಲಿದೆ ಎಂಬುದನ್ನು ಖಚಿತಪಡಿಸಿಕೊಂಡು ಅಲ್ಲಿಗೆ ಹೋಗುತ್ತಿದ್ದುದು ಕಂಡುಬಂದಿತು. ಹಿಂದೆ ಒಂದೇ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಒಂದೇ ಕುಟುಂಬದ ಇಬ್ಬರು ಪದವೀಧರರ ಹೆಸರು ಬೇರೆ ಬೇರೆ ಮತಗಟ್ಟೆಗಳಲ್ಲಿ ಸೇರಿದ್ದುದೂ ಕಂಡುಬಂತು. ಕೆಲವೊಂದು ಗೊಂದಲಗಳ ನಡುವೆ ಸಂಜೆ 5 ಗಂಟೆಗೆ ಮತದಾನ ಪೂರ್ಣಗೊಂಡಿತು.



ಮತದಾರರಿಗೆ ಮಾಹಿತಿ ನೀಡಿದ ಪ್ರತಾಪ್ ಸಿಂಹ.

ಕೋವಿಡ್, ಡೆಂಗ್ಯೂ ಹೆಚ್ಚಳ ಮುನ್ನೆಚ್ಚರಿಕೆ ಕ್ರಮ ಪಾಲಿಸಿ

● ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ ● ಹಿರಿಯ ನಾಗರಿಕರು ಬೂಸ್ಟರ್ ಡೋಸ್; ಮಕ್ಕಳು ಲಸಿಕೆ ಪಡೆಯುವುದು ಅವಶ್ಯ ● ಬಿಎಂಸಿಐನಲ್ಲಿ ಸೀಕ್ವೆನ್ಸಿಂಗ್ ಲ್ಯಾಬ್ ಆರಂಭಕ್ಕೆ ಸೂಚನೆ ● ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಿದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್



ಬೆಂಗಳೂರು: ಕೋವಿಡ್ ಮತ್ತು ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಆದರೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತಪ್ಪದೇ ಅನುಸರಿಸಬೇಕು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಕೋವಿಡ್ ಸೋಂಕು ಪ್ರಕರಣ ಹೆಚ್ಚಳದ ಹಿನ್ನೆಲೆಯಲ್ಲಿ ತಾಂತ್ರಿಕ ಸಲಹಾ ಸಮಿತಿ ಹಾಗೂ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಬೆಂಗಳೂರಿನಲ್ಲಿ ಕೋವಿಡ್ ಸೋಂಕು ಪ್ರಕರಣಗಳು ಹೆಚ್ಚಿವೆ. ಆದರೆ ರೋಗದ ತೀವ್ರತೆ ಅಥವಾ ಸಾವಿನ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿಲ್ಲ. ಪರಿಸ್ಥಿತಿಯನ್ನು ಗಂಭೀರವಾಗಿ ಅವಲೋಕಿಸಲಾಗುತ್ತಿದೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ. ಯಾರೂ ▶ 8ನೇ ಪುಟಕ್ಕೆ

> ಇತರೆ ಕಾಯಿಲೆಗಳಿಂದ ಬಳಲುತ್ತಿರುವ ಹಿರಿಯ ನಾಗರಿಕರು ಬೂಸ್ಟರ್ ಡೋಸ್ ಪಡೆದುಕೊಳ್ಳಬೇಕು. ಮಕ್ಕಳು ಕೂಡ ಲಸಿಕೆ ಹಾಕಿಸಿಕೊಳ್ಳಬೇಕು. ಜತೆಗೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿ, ಭೌತಿಕ ಅಂತರ ಕಾಯ್ದುಕೊಳ್ಳಬೇಕು. ಆ ಮೂಲಕ ಸೋಂಕು ನಿಯಂತ್ರಣದಲ್ಲಿಡಲು ಸಾಧ್ಯವಿದೆ.
> –ಡಾ.ಕೆ.ಸುಧಾಕರ್

ಕೋವಿಡ್‌ನಿಂದ ಆಸ್ಪತ್ರೆ ಸೇರುವವರ ಸಂಖ್ಯೆ ಏರಿಕೆ

ನವದೆಹಲಿ: ಕೊರೊನಾ ವೈರಸ್ ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಭಾರತದಲ್ಲಿ ಇದೀಗ ಪ್ರತಿದಿನ ಸರಾಸರಿ 8 ಸಾವಿರ ಕೋವಿಡ್ ಪ್ರಕರಣ ದಾಖಲಾಗುತ್ತಿದೆ. ಮುಂಬೈನಲ್ಲಿ ಕೋವಿಡ್‌ನಿಂದ ▶ 8ನೇ ಪುಟಕ್ಕೆ

ಕೇಂದ್ರದಿಂದ ಮಹತ್ವದ ಸೂಚನೆ!



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಮತದಾನದ ಸಂದರ್ಭದಲ್ಲಿ ಸಂಸ್ಕೃತ ಪಾಠಶಾಲಾ ಮತಗಟ್ಟೆ ಬಳಿ ದೇವರಾಜ ಅರಸು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಕೌಟಿಲ್ಯ ರಘು, ಮುಡಾ ಸದಸ್ಯ ನವೀನ್‌ಕುಮಾರ್ ಕೊನೆ ಗಳಿಗೆಯಲ್ಲೂ ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್ ಪರ ಮತದಾರರಲ್ಲಿ ಮನವಿ ಮಾಡಿದರು. ಈ ವೇಳೆ ಪರಮೇಶ್‌ಗೌಡ, ರಾಜೇಂದ್ರ, ಜೋಗಿ ಮಂಜು, ಸುದರ್ಶನ್, ಪ್ರಮೋದ್, ಮಂಜುನಾಥ್, ವಿಜಯಕುಮಾರ್, ಪಾಪಣ್ಣ ಉಪಸ್ಥಿತರಿದ್ದರು.

ತಾಜ್ ಗ್ರೂಪ್‌ಗೆ ಮೈಸೂರಿನ ಲಲಿತಮಹಲ್

ಇಂದು ಸಂಪುಟ ಉಪಸಮಿತಿ ಸಭೆಯಲ್ಲಿ ಅಂತಿಮ ನಿರ್ಧಾರ

ಮೈಸೂರು, ಜೂ. 13 (ಆರ್‌ಕೆ)– ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ತಾಜ್ ಗ್ರೂಪ್‌ಗೆ ವಹಿಸುವ ಸಂಬಂಧ ನಾಳೆ (ಜೂ. 14) ಬೆಂಗಳೂರಲ್ಲಿ ನಡೆಯಲಿರುವ ಸಚಿವ ಸಂಪುಟ ಉಪಸಮಿತಿ ಸಭೆಯಲ್ಲಿ ಅಂತಿಮ ನಿರ್ಧಾರವಾಗಲಿದೆ.

ಈ ಹಿಂದೆ ಹಲವು ಬಾರಿ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ವಹಿಸುವ ಕುರಿತಂತೆ ಸಭೆಗಳು ನಡೆದಿದ್ದವಾದರೂ, ನಿರ್ಣಯ ಕೈಗೊಂಡಿರಲಿಲ್ಲ. ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ಸಭೆ ನಿಗದಿಯಾಗಿದ್ದು, ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ಪ್ರಸ್ತುತ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧೀನದಲ್ಲಿರುವ ಲಲಿತಮಹಲ್ ಪ್ಯಾಲೇಸ್ ಹೆರಿಟೇಜ್ ಹೋಟೆಲ್ ಅನ್ನು ಖಾಸಗಿ ಸಂಸ್ಥೆಗೆ ವಹಿಸುವ ಬಗ್ಗೆ ಪ್ರಸ್ತಾವನೆ ಇತ್ತು. ಕಳೆದೊಂದು ವರ್ಷದಿಂದ ನಡೆಯುತ್ತಿದ್ದ ಚರ್ಚೆಗೆ ಸಿಎಂ ನೇತೃತ್ವದಲ್ಲಿ ನಡೆಯುವ ಸಂಪುಟ ಉಪಸಮಿತಿ ಸಭೆಯಲ್ಲಿ ಸರ್ಕಾರ ನಿರ್ಧಾರ ಕೈಗೊಂಡು ತೆರೆ ಎಳೆಯುವ ಸಾಧ್ಯತೆ ಇದೆ ಎಂದು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ಮನೋಜ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಭಾರತ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಐಟಿಡಿಸಿ)ದ ವಶದಲ್ಲಿದ್ದ ಹೋಟೆಲ್ ಅನ್ನು 2018ರಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ವು ವಹಿಸಿಕೊಂಡಿತ್ತು. ನಿರ್ವಹಣೆಯನ್ನು ಖಾಸಗಿಯವರಿಗೆ ಒಪ್ಪಿಸಲು ಸರ್ಕಾರ ಆಸಕ್ತಿ ತೋರಿದ್ದು, ತಾಜ್ ಗ್ರೂಪ್ ಆಫ್ ಹೋಟೆಲ್‌ನವರು ಪಡೆಯಲು ಮುಂದೆ ಬಂದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.



ಇತ್ತೀಚೆಗಷ್ಟೇ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಸಭೆ ನಡೆಸಿ ರೂಪುರೇಷೆ ಸಿದ್ಧಪಡಿಸಿದ್ದು, ಸಿಎಂ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಆದರೆ, ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಎಂ.ಅಪ್ಪಣ್ಣ, ಮಂಗಳವಾರ ಸಭೆ ಇರುವ ವಿಷಯವೇ ನನಗೆ ಗೊತ್ತಿಲ್ಲ. ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಖಾಸಗಿ ಸಂಸ್ಥೆಗೆ ಒಪ್ಪಿಸುವ ವಿಚಾರ ಹಲವು ತಿಂಗಳಿಂದಲೂ ಚರ್ಚೆಯಾಗುತ್ತಿದೆ ಎಂದು ತಿಳಿಸಿದರು.

ಒಂದು ಸರ್ಕಾರಿ ಅಧೀನದಲ್ಲಿರುವ ಹೋಟೆಲ್ ಅನ್ನು ಖಾಸಗಿಯವರಿಗೆ ಒಪ್ಪಿಸುವುದು ಅಷ್ಟು ಸುಲಭವಲ್ಲ. ಹಲವು ನಿಯಮಾವಳಿಗಳಿವೆ. ಅದರನ್ವಯ ಪ್ರಕ್ರಿಯೆಗಳನ್ನು ನಡೆಸಬೇಕಾಗುತ್ತದೆ. ನಾಳೆ (ಜೂ. 14)ಯೇ ಸಭೆಯಲ್ಲಿ ತೀರ್ಮಾನವಾಗುವ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ ಎಂದು ಅಪ್ಪಣ್ಣ ನುಡಿದರು.

ನಾಳೆ ಸಂಪುಟ ಉಪಸಮಿತಿ ಸಭೆ ಇರುವುದು ನಿಜ. ಅದರಲ್ಲಿ ಲಲಿತಮಹಲ್ ಹೋಟೆಲ್ ವಿಷಯ ಅಜೆಂಡಾದಲ್ಲಿದೆ. ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷರು ಸಂಪುಟ ಉಪಸಮಿತಿ ಸಭೆಯ ಸದಸ್ಯರಲ್ಲದ ಕಾರಣ ಅವರಿಗೆ ಈ ವಿಷಯ ತಿಳಿದಿಲ್ಲದಿರಬಹುದು ಎಂದು ಮನೋಜ್‌ಕುಮಾರ್ ತಿಳಿಸಿದ್ದಾರೆ.

2021ರ ಜನವರಿ ಮಾಹೆಯಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನಡೆಸಿದ ವರ್ಚ್ಯುಯಲ್ ಮೀಟಿಂಗ್‌ನಲ್ಲಿ ಪಾಲ್ಗೊಂಡಿದ್ದ ತಾಜ್ ಗ್ರೂಪ್ ಮುಖ್ಯಸ್ಥರು, ಲಲಿತಮಹಲ್ ಪ್ಯಾಲೇಸ್ ಹೋಟೆಲ್ ನಡೆಸಲು ಆಸಕ್ತಿ ತೋರಿದ್ದನ್ನು ಇಲ್ಲಿ ಸ್ಮರಿಸಬಹುದು.

ರಾಜ್ಯ ಸರ್ಕಾರಿ ಸಂಸ್ಥೆ ನಡೆಸುತ್ತಿರುವ ಹೋಟೆಲ್ ಅನ್ನು ಖಾಸಗಿಯವರಿಗೆ ನೀಡಲು ನಿರ್ಧಾರವಾದಲ್ಲಿ ಸರ್ಕಾರವು ಬೇಡಿಕೆ ಪ್ರಸ್ತಾವನೆ ಅಥವಾ ಗ್ಲೋಬಲ್ ಟೆಂಡರ್ ಕರೆಯುತ್ತದೆ. ನಂತರ ಟೆಂಡರ್‌ನಲ್ಲಿ ಪಾಲ್ಗೊಂಡ ಹೆಚ್ಚಿನ ಬಿಡ್ಡುದಾರರಿಗೆ ಆಸ್ತಿಯನ್ನು ಲೀಸ್‌ಗೆ ಕೊಡುತ್ತದೆ ಎಂದು ಮೂಲಗಳು ತಿಳಿಸಿವೆ.

ಎಸ್‌ಬಿಐ ಕಸ್ಟಮರ್ ಸರ್ವೀಸ್ ಪಾಯಿಂಟ್ ಹೆಸರಲ್ಲಿ 1.10 ಲಕ್ಷ ವಂಚನೆ

ಮೈಸೂರು, ಜೂ.13–ಎಸ್‌ಬಿಐನ ಕಸ್ಟಮರ್ ಸರ್ವೀಸ್ ಪಾಯಿಂಟ್ ಸ್ಥಾಪನೆಗೆ ಅವಕಾಶ ನೀಡುವುದಾಗಿ ವ್ಯಕ್ತಿಯೊಬ್ಬರಿಂದ ಆನ್‌ಲೈನ್ ಮೂಲಕ 1.10 ಲಕ್ಷ ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿರುವ ಬಗ್ಗೆ ವರದಿಯಾಗಿದೆ.

ಟಿ.ನರಸೀಪುರ ಪಟ್ಟಣದ ವಿನಾಯಕ ಕಾಲೋನಿ ನಿವಾಸಿ ರಾಜೇಂದ್ರ (32) ವಂಚನೆಗೊಳಗಾದವರಾಗಿದ್ದು, ಇವರು ಎಸ್‌ಬಿಐ ಕಸ್ಟಮರ್ ಸರ್ವೀಸ್ ಪಾಯಿಂಟ್ ಪಡೆಯಲು ಗೂಗಲ್‌ನಲ್ಲಿ ಸರ್ಚ್ ಮಾಡಿದಾಗ https://digitalcspindia.com ಎಂಬ ವೆಬ್‌ಸೈಟ್ ಕಂಡುಬಂದಿದೆ. ಅದರಲ್ಲಿನ ಅರ್ಜಿಯನ್ನು ಭರ್ತಿ ಮಾಡಿ ಕಳುಹಿಸಿದಾಗ ಸತೀಶ್ ಎಂಬ ಹೆಸರಿನಲ್ಲಿ ಓರ್ವ ವ್ಯಕ್ತಿ ಇವರಿಗೆ ಕರೆ ಮಾಡಿ ಕಸ್ಟಮರ್ ಸರ್ವೀಸ್ ಪಾಯಿಂಟ್(ಸಿಎಸ್‌ಪಿ) ಪಡೆಯಲು 10,500 ಪಾವತಿಸಬೇಕು. ಆನಂತರ ನಿಮಗೆ ಸಿಎಸ್‌ಪಿ ಕಿಟ್ ಕಳುಹಿಸುತ್ತೇವೆ ಹಾಗೂ ಬ್ಯಾಂಕಿನಿಂದ ಮೂವರು ಸಿಬ್ಬಂದಿ ಬಂದು ನಿಮಗೆ ನಿರ್ವಹಣೆ ಬಗ್ಗೆ ತರಬೇತಿ ನೀಡುತ್ತಾರೆ ಎಂದು ತಿಳಿಸಿ, ಬ್ಯಾಂಕ್ ಖಾತೆ ಸಂಖ್ಯೆಯೊಂದನ್ನು ನೀಡಿದ್ದಾನೆ.

ಅದನ್ನು ನಂಬಿದ್ದ ರಾಜೇಂದ್ರ ಮೇ 30ರಂದು 10500 ರೂ. ಪಾವತಿಸಿದ ನಂತರ 2 ದಿನ ಬ್ಯಾಂಕ್ ಕರೆ ಮಾಡುವುದಾಗಿ ತಿಳಿಸಿ, ನಿಮಗೆ 10 ಲಕ್ಷ ರೂ. ಓಡಿ ಆಗಿದ್ದು, ಶೇ.10ರಷ್ಟು ಹಣ ಪಾವತಿಸಬೇಕು ಎಂದು 1 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಜೂ.2ರಂದು ರಾಘವೇಂದ್ರ ಅವರ ಮೊಬೈಲ್‌ಗೆ ಜಿಎಸ್‌ಟಿ ಡ್ಯೂ ಅಮೌಂಟ್ 90 ಸಾವಿರ ರೂ. ಪಾವತಿಸಬೇಕು ಎಂದು ಮೆಸೇಜ್ ಬಂದಿದ್ದು, ಅನುಮಾನಗೊಂಡ ಅವರು ಎಸ್‌ಬಿಐಗೆ ತೆರಳಿ ವಿಚಾರಿಸಿದಾಗ ಫೇಕ್ ವೆಬ್‌ಸೈಟ್ ಮೂಲಕ ಮೋಸ ಹೋಗಿರುವುದು ಮನವರಿಕೆಯಾಗಿದೆ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ದಾಪುರ ಬಳಿ ಮನೆ ಬೀಗ ಮುರಿದು 10 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಸಿದ್ದಾಪುರ, ಜೂ.13– ಹಾಡಹಗಲೇ ಮನೆ ಬೀಗ ಮುರಿದು ಸುಮಾರು 10 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಸಿದ್ದಾಪುರ ಸಮೀಪದ ಮೇಕೂರು ಹೊಸ್ಕೇರಿ ಗ್ರಾಮದಲ್ಲಿ ನಡೆದಿದೆ.

ಈ ಗ್ರಾಮದ ನಿವಾಸಿ ಕೂತಂಡ ಸುಬ್ಬಯ್ಯ ಹಾಗೂ ಅವರ ಪತ್ನಿ ಪುಷ್ಪ ಜೂ.12ರಂದು ಬೆಳಗ್ಗೆ 11.30ರಲ್ಲಿ ಮನೆಗೆ ಸಾಮಾನು ತರಲು ಪಾಲಿಬೆಟ್ಟಕ್ಕೆ ಹೋಗಿದ್ದು, ಮಧ್ಯಾಹ್ನ 1 ಗಂಟೆಗೆ ಹಿಂತಿರುಗುವಷ್ಟರಲ್ಲಿ ಅವರ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಲಾಗಿದೆ. ಖದೀಮರು ಡೈಮಂಡ್ ನೆಕ್ಲೇಸ್, ಡೈಮಂಡ್ ಓಲೆ, 12 ಗ್ರಾಂ ಕೊಕ್ಕೆ ತಾತಿ, 32 ಗ್ರಾಂನ ಕರಿಮಣಿ ಸರ, 6 ಗ್ರಾಂ ಕರಿಮಣಿ ಸರ, 40 ಗ್ರಾಂ 4 ಚಿನ್ನದ ಬಳೆ, 12 ಗ್ರಾಂ ಚಿನ್ನದ ಕಡಗ, 15 ಗ್ರಾಂ ಬಳೆ, 36 ಗ್ರಾಂ 3 ಚಿನ್ನದ ಸರ, 8 ಗ್ರಾಂ ನೆಕ್ಲೇಸ್, 12 ಗ್ರಾಂ ಪತ್ತಾಕ್, 8 ಗ್ರಾಂ ಪತ್ತಾಕ್, ಕೊಡವರ ಸಾಂಪ್ರದಾಯಿಕ ಪೀಚೆ ಕತ್ತಿ, ಸಿಟಿಜನ್ ವಾಚ್, ಮೊಬೈಲ್, ಎಟಿಎಂ ಕಾರ್ಡ್‌ಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್‌ನಲ್ಲಿ ಮಹಿಳೆ ಚಿನ್ನಾಭರಣ ಕಳವು

ಹೊಳೆನರಸೀಪುರ,ಜೂ.13–ಬಸ್ ಹತ್ತುವಾಗ ಮಹಿಳೆಯ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ದೋಚಿರುವ ಘಟನೆ ಹೊಳೆನರಸೀಪುರ ಬಸ್ ನಿಲ್ದಾಣದಲ್ಲಿ ನಡೆದಿದೆ.

ಬೆಂಗಳೂರಿನ ಯಲಹಂಕ ನ್ಯೂಟೌನ್ ನಿವಾಸಿ ಚೇತನಾ(36) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಅವರು ಸಂಬಂಧಿಕರ ಮದುವೆಗಾಗಿ ಹೊಳೆನರಸೀಪುರಕ್ಕೆ ಬಂದಿದ್ದರು. ಮದುವೆಗೆ ಹಾಜರಾದ ನಂತರ 50 ಗ್ರಾಂ ತೂಕದ ಚಿನ್ನಾಭರಣವನ್ನು ಒಂದು ಬಾಕ್ಸ್‌ಗೆ ಹಾಕಿ ಬ್ಯಾಗ್‌ನಲ್ಲಿಟ್ಟುಕೊಂಡು ಬೆಂಗಳೂರಿಗೆ ತೆರಳಲು ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ವೇಳೆ ಜನಜಂಗುಳಿಯ ನಡುವೆ ಖದೀಮರು ಅವರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಎಗರಿಸಿದ್ದಾರೆ. ಈ ಸಂಬಂಧ ಹೊಳೆನರಸೀಪುರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಪಾದಚಾರಿಗೆ ಸ್ಕೂಟರ್ ಡಿಕ್ಕಿ: ಸವಾರ ಸಾವು

ಹಾಸನ, ಜೂ.13– ಪಾದಚಾರಿಗೆ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸಾವನ್ನಪ್ಪಿದ ಘಟನೆ ಹಾಸನ–ಹೊಳೆನರಸೀಪುರ ರಸ್ತೆಯಲ್ಲಿರುವ ಶಾಹಿ ಕಾರ್ಖಾನೆ ಮುಂಭಾಗ ಜೂ.11ರಂದು ರಾತ್ರಿ ಸಂಭವಿಸಿದೆ.

ಮೂಲತಃ ಟಿ.ನರಸೀಪರ ತಾಲೂಕು ಕೆಂಪನಪುರ ಗ್ರಾಮದವರಾಗಿದ್ದು, ಹಾಲಿ ಹಾಸನ ತಾಲೂಕಿನ ಶ್ರೀರಾಮನಗರದಲ್ಲಿ ವಾಸವಿದ್ದ ಸಿದ್ದಯ್ಯ(41) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಜೂ.11ರಂದು ರಾತ್ರಿ 8.15ರ ವೇಳೆ ಹಾಸನ ಕಡೆಯಿಂದ ಹೊಳೆನರಸೀಪುರ ಕಡೆಗೆ ಸ್ಕೂಟರ್(ಕೆಎ–13, ಇಎನ್–1154)ನಲ್ಲಿ ತೆರಳುತ್ತಿದ್ದಾಗ ರಸ್ತೆ ದಾಟುತ್ತಿದ್ದ ವೆಂಕಟೇಶ್ ಎಂಬುವರಿಗೆ ಡಿಕ್ಕಿ ಹೊಡೆದಿದ್ದಾರೆ. ಈ ಅಪಘಾತದಲ್ಲಿ ಸಿದ್ದಯ್ಯ ಮತ್ತು ವೆಂಕಟೇಶ್ ಇಬ್ಬರೂ ಗಾಯಗೊಂಡಿದ್ದು, ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆ ಸಿದ್ದಯ್ಯ ಮೃತಪಟ್ಟರೆ, ತೀವ್ರ ಗಾಯಗೊಂಡಿರುವ ವೆಂಕಟೇಶ್ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಹಾಸನ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಎಸ್‌ಐಎಲ್ ಮದ್ಯದ ಮಳಿಗೆಯಲ್ಲಿ 2.24 ಲಕ್ಷ ರೂ. ನಗದು ಕಳವು

ತಿ.ನರಸೀಪುರ, ಜೂ.13– ಎಂಎಸ್‌ಐಎಲ್ ಮದ್ಯದಂಗಡಿಯ ಬೀಗ ಮುರಿದು 2.24 ಲಕ್ಷ ಕಳವು ಮಾಡಿರುವ ಘಟನೆ ತಾಲೂಕಿನ ದೊಡ್ಡೆಬಾಗಿಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಎಂಎಸ್‌ಐಎಲ್ ಮಳಿಗೆಯನ್ನು ಅದರ ಸಿಬ್ಬಂದಿ ಸೋಮಣ್ಣ ಜೂ.10 ರಂದು ರಾತ್ರಿ ಬಾಗಿಲು ಹಾಕಿಕೊಂಡು ಹೋಗಿ, ಮರುದಿನ ಬೆಳಗ್ಗೆ ಬಂದು ನೋಡಿದಾಗ ಮಳಿಗೆ ಸೆಂಟರ್ ಲಾಕ್ ಮತ್ತು ಬೀಗಗಳನ್ನು ಮುರಿದು ಕಳವು ಮಾಡಿರುವುದು ಗೊತ್ತಾಗಿದೆ. ಜೂ.10ರ ವ್ಯಾಪಾರದ ಮೊತ್ತ 2,24,700 ರೂ. ನಗದು, ಸಿಸಿ ಕ್ಯಾಮರಾದ ಡಿವಿಆರ್ ಹಾಗೂ ಮದ್ಯವನ್ನು ಕಳವು ಮಾಡಲಾಗಿದೆ. ಅಬಕಾರಿ ಅಧಿಕಾರಿಗಳು ವರದಿ ನೀಡಿದ ನಂತರ ಕಳವಾಗಿರುವ ಮದ್ಯದ ಮೌಲ್ಯ ತಿಳಿಯಬೇಕಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಟಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮುಂಡಿಬೆಟ್ಟದಲ್ಲಿ ಸ್ಕೂಟರ್ ಕಳವು

ಮೈಸೂರು, ಜೂ.13– ಚಾಮುಂಡಿಬೆಟ್ಟದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ಕಾಲೇಜು ಉಪನ್ಯಾಸಕಿಯೊಬ್ಬರ ಸ್ಕೂಟರ್ ಕಳವಾಗಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಕೆ.ಆರ್.ಪೇಟೆ ತಾಲೂಕು ಕಿಕ್ಕೇರಿ ಹೋಬಳಿ ದಬ್ಬೇಘಟ್ಟ ಗ್ರಾಮದ ಉಪನ್ಯಾಸಕಿ ಡಿ.ಎನ್.ಅರ್ಪಿತಾ(31) ಜೂ.6ರಂದು ಬೆಳಗ್ಗೆ ತಮ್ಮ ಸ್ಕೂಟರ್‌ನಲ್ಲಿ (ಕೆಎ.41, ಇಎಸ್ 2484) ಚಾಮುಂಡಿಬೆಟ್ಟಕ್ಕೆ ಬಂದು ಪಾರ್ಕಿಂಗ್ ಜಾಗದಲ್ಲಿ ಸ್ಕೂಟರ್ ನಿಲ್ಲಿಸಿ ಬೆಳಗ್ಗೆ 7 ಗಂಟೆಗೆ ದೇವಸ್ಥಾನಕ್ಕೆ ತೆರಳಿ ದರ್ಶನ ಮುಗಿಸಿಕೊಂಡು 8.50ಕ್ಕೆ ವಾಪಸ್ ಬಂದಾಗ ಪಾರ್ಕಿಂಗ್ ಜಾಗದಲ್ಲಿದ್ದ ಸ್ಕೂಟರ್ ಕಳವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಜೂ.11ರಂದು ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು, ಜೂ.13– ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ರಾಘವೇಂದ್ರ ಬಡಾವಣೆಯಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಲೋಕೇಶ್ ಎಂಬುವರು ಅವರ ಮಾವನ ಅಂತ್ಯಕ್ರಿಯೆಗಾಗಿ ಜೂ.10ರಂದು ಕುಟುಂಬ ಸಮೇತ ಮನೆಗೆ ಬೀಗ ಹಾಕಿಕೊಂಡು ತೆರಳಿದ್ದು, ಜೂ.11ರಂದು ಸಂಜೆ ವಾಪಸ್ಸಾದಾಗ ಮನೆ ಬೀಗ ಮುರಿದು 6 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥವನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂದರ್ಭ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ವಿಶೇಷಚೇತನರಿಗಾಗಿ 2ನೇ ರಾಜ್ಯಮಟ್ಟದ ವ್ಹೀಲ್‌ಚೇರ್ ರಗ್ಬಿ ಪಂದ್ಯಾವಳಿ

ಮಹಿಳಾ, ಪುರುಷ ವಿಭಾಗಗಳಲ್ಲಿ ಬೆಳಗಾವಿಗೆ ಪ್ರಥಮ ಬಹುಮಾನ

ಮೈಸೂರು,ಜೂ.13(ಆರ್‌ಕೆಬಿ)–ಅಂಗವಿಕಲರ ಕ್ರೀಡಾ ಸಂಸ್ಥೆ, ಕರ್ನಾಟಕ ರಾಜ್ಯ ವ್ಹೀಲ್‌ಚೇರ್ ರಗ್ಬಿ ಅಸೋಸಿಯೇಷನ್ ಸಹಯೋಗದಲ್ಲಿ ರಾಜ್ಯ ಮಟ್ಟದ 2ನೇ ವ್ಹೀಲ್‌ಚೇರ್ ರಗ್ಬಿ ಪಂದ್ಯಾವಳಿ ಎಸ್‌ಜೆಸಿಇ ಕಾಲೇಜು ಮೈದಾನದಲ್ಲಿ ನಡೆಸಲಾಯಿತು.

ಪಂದ್ಯಾವಳಿಯಲ್ಲಿ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ ಮತ್ತು ಮೈಸೂರು ತಂಡಗಳು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದವು. ಈ ಪೈಕಿ ಬೆಳಗಾವಿ ತಂಡ ಮೊದಲ ಬಹುಮಾನ ಪಡೆಯಿತು. ಉಳಿದಂತೆ ಬಾಗಲಕೋಟೆ ಮತ್ತು ವಿಜಯಪುರ ಕ್ರಮವಾಗಿ ಎರಡನೇ ಮತ್ತು ಮೂರನೇ ಬಹುಮಾನ ಪಡೆದವು. ಮಹಿಳಾ ವಿಭಾಗದಲ್ಲಿ ಬೆಳಗಾವಿ ಪ್ರಥಮ, ಬಾಗಲಕೋಟೆ– ದ್ವಿತೀಯ ಹಾಗೂ ಮೈಸೂರು ತಂಡ ತೃತೀಯ ಬಹುಮಾನ ಪಡೆದವು.

ಇದಕ್ಕೂ ಮುನ್ನ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಹಾಗೂ ಅರ್ಜುನ ಪ್ರಶಸ್ತಿ ವಿಜೇತರಾದ ಮಹದೇವ ಅವರು ಪಂದ್ಯಾವಳಿಗೆ ಚಾಲನೆ ನೀಡಿದರು. ಇನ್ನರ್‌ವ್ಹೀಲ್



ಕ್ಲಬ್ ಆಫ್ ಮೈಸೂರ್‌ನ ಆರ್.ಪ್ರತಿಭಾ, ರಗ್ಬಿ ಅಸೋಸಿಯೇಷನ್ ಅಧ್ಯಕ್ಷ ಮಹದೇಶ್ ಚಂದ್ರ, ಕಾರ್ಯದರ್ಶಿ ಪ್ರಭುಸ್ವಾಮಿ, ಟೀಮ್ ಮ್ಯಾನೇಜರ್ ಕಿರಣ್‌ಕುಮಾರ್, ಅಂಗವಿಕಲರ ಕ್ರೀಡಾ ಸಂಸ್ಥೆಯ ಕಾರ್ಯದರ್ಶಿ ಮಹೇಶ್‌ಗೌಡ, ಉಪಾಧ್ಯಕ್ಷ ಆರ್.ರಾಮಚಂದ್ರು ಇನ್ನಿತರರು ಉಪಸ್ಥಿತರಿದ್ದರು.

ಆಫ್ ಮ್ಯಾರಥಾನ್ ಸ್ಪರ್ಧೆ



ಮೈಸೂರು,ಜೂ.13–ನಗರದಲ್ಲಿ ಆಯೋಜಿಸಿದ್ದ ಆಫ್ ಮ್ಯಾರಥಾನ್ ಸ್ಪರ್ಧೆಯಲ್ಲಿ ನೂರಾರು ಕ್ರೀಡಾಪ್ರಿಯರು, ವಿದ್ಯಾರ್ಥಿಗಳು ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಅರಮನೆಯ ಬಲರಾಮ ದ್ವಾರದಲ್ಲಿ ಬೆಳಗ್ಗೆ 5.30ಕ್ಕೆ 2ನೇ ಆವೃತ್ತಿಯ ಮೈಸೂರು ಆಫ್ ಮ್ಯಾರಥಾನ್‌ನಲ್ಲಿ ಮೈಸೂರಿನ ಥಿಯರವ್ಸ್ ಸಂಸ್ಥೆಯ ಉದ್ಯೋಗಿಗಳು ಪಾಲ್ಗೊಂಡು ಪದಕಗಳನ್ನು ಗೆದ್ದರು. ಆಫ್ ಮ್ಯಾರಥಾನ್, 10 ಕಿ.ಮೀ ಓಟದ ಸ್ಪರ್ಧೆಯಲ್ಲಿ 1200ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ಜೂ.13–ಮೈಸೂರಿನ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರು ಮತ್ತು ಕುಟುಂಬ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಜೂ. 30ರವರೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಂಯ್ಯಾಜಿರಾವ್ ರಸ್ತೆಯ ಆಸ್ಪತ್ರೆ ಶಾಖೆಗಳಿಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.

ಡಾ.ಲೀಲಾಪ್ರಕಾಶ್‌ರ ಮೂರು ಕೃತಿಗಳು ಲೋಕಾರ್ಪಣೆ

ಮೈಸೂರು,ಜೂ.13–ಮೈಸೂರಿನ ವಿದ್ಯುತ್ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಆಶ್ರಯದಲ್ಲಿ ಜೂ.19ರಂದು ಸಂಜೆ 5 ಗಂಟೆಗೆ ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಡಾ. ಕೆ.ಲೀಲಾಪ್ರಕಾಶ್ ಅವರ ಕನ್ನಡ ಪ್ರತಿಜ್ಞಾ ಯೌಗಂಧರಾಯಣ (ಅನುವಾದ), ಲೀಲಾ ಪ್ರಿಯನ ವೇದಾಂತ ವಿಕಸನ, ಸಮಾಹಿತ (ಕವನ ಸಂಕಲನ) ಕೃತಿಗಳನ್ನು ಸಾಹಿತಿ ಡಾ. ಸಿ.ಪಿ.ಕೃಷ್ಣಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ. ಮೈಸೂರು ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್, ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಇಂದು ಬಸವರತ್ನ ಪ್ರಶಸ್ತಿ ಪ್ರದಾನ



ಡಾ.ಕೃಷ್ಣಸ್ವಾಮಿ ಜಗದೀಶ್ ಶಂಕರೇಗೌಡ ಸೋಮಶೇಖರ್ ಸಂಜೀವ್ ಶೆಟ್ಟಿ

ಮೈಸೂರು, ಜೂ. 13– ಮೈಸೂರು ಶರಣ ಮಂಡಲಿಯು ಬಸವ ಜಯಂತಿ ಅಂಗವಾಗಿ ಬಸವರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂ. 14ರಂದು ಬೆಳಗ್ಗೆ 11 ಗಂಟೆಗೆ ಶಂಕರ ಮಠದ ರಸ್ತೆಯಲ್ಲಿರುವ ಶ್ರೀ ನಟರಾಜ ಸಭಾ ಭವನದಲ್ಲಿ ಏರ್ಪಡಿಸಲಾಗಿದೆ. ಸಾನ್ನಿಧ್ಯವನ್ನು ಹೊಸಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ ವಹಿಸಲಿದ್ದು, ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಶಾಸಕ ವಾಸು ಅಧ್ಯಕ್ಷತೆ ವಹಿಸುವರು. 'ಬಸವರತ್ನ ಪ್ರಶಸ್ತಿ'ಯನ್ನು ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಡಾ. ವಿದ್ಯಾಶಂಕರ್ ಪ್ರದಾನ ಮಾಡುವರು. ಮೈಸೂರು ವಿವಿ ಪ್ರಾಚ್ಯವಸ್ತು ಸಂಶೋಧನಾಲಯದ ನಿವೃತ್ತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಪ್ರಧಾನ ಭಾಷಣ ಮಾಡಲಿದ್ದು, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಪ್ರಾಸ್ತಾವಿಕ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೋಟು ಮುದ್ರಣಾಲಯದ ವ್ಯವಸ್ಥಾಪಕ ಡಾ.ಎನ್.ಕೃಷ್ಣಸ್ವಾಮಿ, ಉಚಿತ ಕಾನೂನು ಸೇವೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಸಹಕಾರ ನೀಡುತ್ತಿರುವ ನ್ಯಾಯವಾದಿ ಸಿ.ಎಂ. ಜಗದೀಶ್, ಹಲವಾರು ಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈ.ಎನ್. ಶಂಕರೇಗೌಡ, ಕೋವಿಡ್ ಸಂದರ್ಭದಲ್ಲಿ ನೋಡಲ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಜಿ.ಎಸ್.ಸೋಮಶೇಖರ್, ಹೋಟೆಲ್ ಉದ್ಯಮಿ ಶೃಂಗಾರ್ ಸಂಜೀವ ಶೆಟ್ಟಿ ಅವರುಗಳಿಗೆ ಮಂಗಳವಾರ 'ಬಸವ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.



ದಕ್ಷಿಣ ಪದವೀಧರ ಚುನಾವಣೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಶಾಸಕ ಎಲ್.ನಾಗೇಂದ್ರ ಮೈಸೂರಿನ ಗಂಗೋತ್ರಿ ಶಾಲೆ, ಜೆ.ಸಿ.ರಸ್ತೆ ಶಾಲೆ, ಮಾತೃ ಮಂಡಳಿ ಶಾಲೆ, ವಿಜಯನಗರ ಶಾಲೆ, ಕುಂಬಾರಕೊಪ್ಪಲು ಶಾಲೆ, ಗೀತಾ ಮಂದಿರ ಶಾಲೆ, ಸಂಸ್ಕೃತ ಪಾಠಶಾಲೆ ಮತಗಟ್ಟೆಗಳಿಗೆ ಭೇಟಿ ನೀಡಿ, ಮನವಿ ಮಾಡಿದರು. ಈ ವೇಳೆ ಬಿಜೆಪಿ ಮುಖಂಡ ಜಯಪ್ರಕಾಶ್ ಇನ್ನಿತರರಿದ್ದರು.

ಆಕ್ಯೂ ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ

ಮೈಸೂರು, ಜೂ. 13– ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ ದಟ್ಟಗಳ್ಳಿ 3ನೇ ಹಂತ, ಜೆ ಬ್ಲಾಕ್, ಶ್ರೀ ಶಕ್ತಿ ಗಣಪತಿ ದೇವಸ್ಥಾನದಲ್ಲಿ ಜೂ. 22 ರಿಂದ 30 ದಿನಗಳ ಕಾಲ ಆಕ್ಯೂ ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಶಿಬಿರವು ಬೆಳಗ್ಗೆ 10.30 ರಿಂದ ಸಂಜೆ 6.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ.98451–82716, 78927–98768 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.06.2022 ಮಂಗಳವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಪೂರ್ಣಿಮಾ, ನಕ್ಷತ್ರ : ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಶಾರದಾ ವಿಲಾಸ ಕಾಲೇಜು, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ :** ರಕ್ತದಾನ ಶಿಬಿರ, ಉದ್ಘಾಟನೆ : ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಂ.ಎಲ್. ರಘುನಾಥ್, ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಅಧ್ಯಕ್ಷ ಡಾ. ಎಂ.ಎಸ್. ಜಯಂತ್, ಸದಸ್ಯ ಎಂ.ಎಸ್. ಶರತ್, ಡಾ. ಪಿ. ನಂದಪ್ರಕಾಶ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕ, ಸ್ಥಳ: ಎ.ವಿ. ಹಾಲ್, ಎಸ್‌ವಿಸಿ, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಸ್ಕೂಲ್ ಆಫ್ ಲೈಫ್ ಸೈನ್ಸಸ್ :** ವಿಜ್ಞಾನ ಸಂವಹನ ಕುರಿತು ರಾಷ್ಟ್ರೀಯ ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ. ನಿರಂಜನ ವಾನಳ್ಳಿ, ಅಧ್ಯಕ್ಷತೆ : ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಸಚಿವ ಡಾ. ಬಿ. ಮಂಜುನಾಥ್, ಗೌರವ ಅತಿಥಿಗಳು : ಇಂಡಿಯಾ ಅಲೈಯನ್ಸ್ ಸಲಹೆಗಾರ ಡಾ. ಸಂಜುಕ್ತ ಮುಖರ್ಜಿ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ಮೈಸೂರು ಶರಣ ಮಂಡಲಿ :** ಬಸವ ಜಯಂತಿ–2022, ಬಸವರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಮಾಜಿ ಶಾಸಕ ವಾಸು, ಪ್ರಶಸ್ತಿ ಪ್ರದಾನ : ಕರಾಮುವಿವಿ ಕುಲಪತಿ ಡಾ. ವಿದ್ಯಾಶಂಕರ್, ಮುಖ್ಯ ಅತಿಥಿಗಳು : ಗ್ರಾಮಾಂತರ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಧಾನ ಭಾಷಣ : ಪ್ರಾಚ್ಯವಸ್ತು ಸಂಶೋಧನಾಲಯ ನಿರ್ದೇಶಕ ಪ್ರೊ. ಎಸ್. ಶಿವರಾಜಪ್ಪ, ಪ್ರಾಸ್ತಾವಿಕ ನುಡಿ: ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸ್ಥಳ: ಶ್ರೀಹೊಸಮಠ, ಶಂಕರಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಕೇಂದ್ರ :** ಯೋಗದ ಇತಿಹಾಸ ಹಾಗೂ ಅದರ ಬಹುವಿಧದ ಉಪಯುಕ್ತತೆಗಳು ಕುರಿತು ವಿಚಾರ ಸಂಕಿರಣ, ಸ್ಥಳ: ವಿಜ್ಞಾನ ಭವನ, ಬೆಳಗ್ಗೆ 11ಕ್ಕೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022 ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆಯವರೆಗೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್:** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ತರಬೇತಿ, ಉದ್ಘಾಟನೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ : ಜನಪದ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚೆನ್ನಪ್ಪ ಹನೂರು, ಸಹ ಪ್ರಾಧ್ಯಾಪಕ ಡಾ. ಕೆ.ಸೌಭಾಗ್ಯವತಿ, ಉಪಸ್ಥಿತರು: ಗೌತಮ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 4ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ವಿದುಷಿ ಅಶ್ವಿನಿ ಕೋಳಿಕ್ಕಜೆ ಮತ್ತು ವಿದುಷಿ ಡಾ. ಮೇಧಾಭಟ್ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ನರಸಿಂಹ (ವಯೋಲಿನ್), ವಿದ್ವಾನ್ ಸಾಯಿಶಿವ (ಮೃದಂಗ), ವಿದ್ವಾನ್ ಶಮಿತ್ ಗೌಡ (ಘಟಂ), ಸ್ಥಳ: ಶ್ರೀಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇಂಡಿಯನ್ ಏರ್‌ಫೋರ್ಸ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ. ವಿನಯ್ ವಿಟ್ಠಲ್ ಅವರಿಂದ ಕೌಟಿಲ್ಯನ ಅರ್ಥಶಾಸ್ತ್ರ : ಎ ಟೈಮ್‌ಲೆಸ್ ಸ್ಟ್ರಾಟೆಜಿ ಫಾರ್ ಸ್ಟೇಟ್ ಕ್ರಾಫ್ಟ್ ಕುರಿತು ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ–ಡಾ. ಎ.ಎಸ್. ಚಂದ್ರಶೇಖರ್, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು–ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು – ಪ್ರಸ್ತುತಿ–ಡಾ.ವಿ.ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಂ.ರಾಘವೇಂದ್ರ, ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಟಿ.ಎಸ್.ಸ್ನೇಹಾ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್. 9.00 ವೃತ್ತಿ ಮಾರ್ಗದರ್ಶನ–ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿ.ರವಿಕುಮಾರ್ ಅವರೊಂದಿಗೆ ಮಾತುಕತೆ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ನಿರೂಪಣಾ ಸಾಹಿತ್ಯ–ಪ್ರೊ.ಆರ್.ವಿಶ್ವೇಶ್ವರನ್, ಪರಿಕಲ್ಪನೆ ಗೀತಾ ರಮಾನಂದ್, 10.30 ನಮ್ಮ ಆರೋಗ್ಯ–ಬಾಯಿಯ ಕ್ಯಾನ್ಸರ್, ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಪ್ರಾಯೋಜಿತ ಕಾರ್ಯಕ್ರಮ. ಭಾಗವಹಿಸುವ ತಜ್ಞರು ಡಾ. ಗಿರೀಶ್ ಎಂ.ಎಸ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ **ಮಧ್ಯಾಹ್ನ:** 12.30 ದೇವರನಾಮ–ಎಂ. ರಾಘವೇಂದ್ರ, ಶಂಕರ್, 12.45 ಆರೋಗ್ಯಕ್ಕಾಗಿ ಮುದ್ರಾ–ಡಿ.ವಿ.ಎಸ್. ಅಯ್ಯರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ "ಯೋಗ ಸುಯೋಗ" ಬಾನುಲಿ ಸರಣಿ, 3.00 ಬಾಂಬೆ ಎಸ್.ಜಯಶ್ರೀ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಭಕ್ತ ಮಾರ್ಕಂಡೇಯ", ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್ ವಾಣಿ, ಬತ್ತದ ಬೆಳೆಯಲ್ಲಿ ಸ್ವಾವಲಂಬನೆ ಹಾಗೂ ಸುಧಾರಿತ ತಳಿಗಳು ಕುರಿತು ಡಾ.ಎಂ.ಪಿ.ರಾಜಣ್ಣ ಅವರ ಭಾಷಣದ ಆಯ್ದ ಭಾಗಗಳು, 9.05 ರಾಷ್ಟ್ರಪತಿಗಳ ಬೆಂಗಳೂರು ಭೇಟಿ ಕುರಿತ ಬಾನುಲಿ ವರದಿ, 9.30 ಜಿ. ಶ್ರೀಕಾಂತ್ – ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ನಿರ್ಮಾಣ– ದಿವಾಕರ್ ಹೆಗಡೆ, 10.30 ಸವಿನೆನಪು

ಗೋವಾದಲ್ಲಿ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ

2025ರ ವೇಳೆಗೆ ಹಿಂದೂ ರಾಷ್ಟ್ರದ ಕನಸು ಸಾಕಾರ

ಹಿಂದೂಪರ ಸಂಘಟಕ ಡಾ.ಚಾರುದತ್ತ ಪಿಂಗಳೆ ವಿಶ್ವಾಸ



ಪಣಜಿ, ಜೂ.13– ಹಿಂದೂ ರಾಷ್ಟ್ರ ರಚನೆಯು 2025ರ ವೇಳೆಗೆ ಸಾಕಾರಗೊಳ್ಳಲಿದೆ ಎಂಬ ವಿಶ್ವಾಸ ದಕ್ಷಿಣ ಗೋವಾದ ದೇವಾಲಯ ಪಟ್ಟಣ ಪೋಂಡಾದಲ್ಲಿ ಭಾನುವಾರ ಚಾಲನೆ ಪಡೆದ ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನದಲ್ಲಿ ವ್ಯಕ್ತವಾಗಿದೆ.

ಹಿಂದೂ ರಾಷ್ಟ್ರ ರಚನೆಯ ಬೇಡಿಕೆಗೆ ಭಾರತದ ಸಂವಿಧಾನ ದಡಿ ಅವಕಾಶವಿದೆ. 2025ರ ವೇಳೆಗೆ ಇದು ಸಾಕಾರವಾಗಲಿದೆ ಎಂದು ಹಿಂದೂ ಜನಜಾಗೃತಿ ಸಮಿತಿ ಸಂಘಟಕ ಡಾ.ಚಾರುದತ್ತ ಪಿಂಗಳೆ ಪ್ರತಿಪಾದಿಸಿದ್ದಾರೆ.

ಇತ್ತೀಚೆಗೆ ದೇಶಾದ್ಯಂತ ನಡೆಸಿದ ಹಿಂಸಾಚಾರ ಪರಿಗಣಿಸಿ, ಇಡೀ ಆಡಳಿತ ವ್ಯವಸ್ಥೆಯು ಹಿಂದೂ ಹಿತಾಸಕ್ತಿಯಲ್ಲಿ ಉಳಿಯುವವರೆಗೆ ನಾವು ಹಿಂದೂ ರಾಷ್ಟ್ರದ ರಚನೆಗಾಗಿ ಹೋರಾಡಬೇಕಿದೆ ಎಂದು ಪಿಂಗಳೆ ಹೇಳಿದರು. ದೇಶದಲ್ಲಿ ಹಿಂದೂ ವಿರೋಧಿ ಶಕ್ತಿಗಳು ಸಂಘಟನಾತ್ಮಕವಾಗಿ ಒಂದುಗೂಡಿದೆ. ಇದು ಭಾರತವನ್ನು ಹಿಂದೂ ರಾಷ್ಟ್ರವಾಗಿ ರೂಪಿಸುವ ಕನಸ್ಸಿಗೆ ದೊಡ್ಡ ಸವಾಲು. ಹಿಂದೂ ವಿರೋಧಿ ಶಕ್ತಿಗಳನ್ನು ಹತ್ತಿಕ್ಕಲು ಮುಂದಿನ ದಿನಗಳಲ್ಲಿ ನಾವು ಸೈದ್ಧಾಂತಿಕ ಮತ್ತು ಬೌದ್ಧಿಕವಾಗಿ ನಿರಂತರ ಹೋರಾಟ ನಡೆಸುವುದು ಅನಿವಾರ್ಯ ಎಂದು ಹೇಳಿದರು.

ಕೋವಿಡ್ ತೀವ್ರತೆಯ ವರ್ಷಗಳನ್ನು ಹೊರತುಪಡಿಸಿ, ಉಳಿದಂತೆ ಈ ವಾರ್ಷಿಕ 7 ದಿನಗಳ ಅಧಿವೇಶನವು 2021ರಿಂದ ನಡೆಸಿಕೊಂಡು ಬರಲಾಗಿದೆ. ಇಂದಿನ ಅಧಿವೇಶನ ದಲ್ಲಿ ದೇಶದಾದ್ಯಂತ ಇರುವ ಸುಮಾರು 350 ಹಿಂದೂಪರ ಸಂಘಟನೆಗಳಿಂದ ಸಾವಿರಕ್ಕೂ ಮಂದಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, ಯುಎಸ್ಎ, ಯುಕೆ, ಹಾಂಗ್‌ಕಾಂಗ್, ಸಿಂಗಾಪುರ್, ನೇಪಾಳದಿಂದಲೂ ಹಿಂದೂಪರ ಚಿಂತಕರು ಅಧಿವೇಶನಕ್ಕೆ ಆಗಮಿಸಲಿದ್ದಾರೆ ಎಂದು ಅಧಿವೇಶನದ ಸಂಘಟಕರು ತಿಳಿಸಿದ್ದಾರೆ. ಜ್ಞಾನವಾಪಿ ಮಸೀದಿ ವಿಚಾರ, ಪೂಜಾ ಸ್ಥಳಗಳ ಕಾಯ್ದೆ, ಕಾಶ್ಮೀರಿ ಹಿಂದೂಗಳು, ಮಸೀದಿಗಳಲ್ಲಿ ಧ್ವನಿವರ್ಧಕಗಳು, ಹಿಜಾಬ್ ವಿಚಾರ ಸೇರಿದಂತೆ ಮೊದಲಾದ ಅಂಶಗಳು ಅಧಿವೇಶನದಲ್ಲಿ ಚರ್ಚೆಯಾಗಲಿವೆ ಎಂದು ಹೇಳಲಾಗಿದೆ.



ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಮಸ್ವಾಮಿ ವೃತ್ತ, ಮುಡಾ ರಸ್ತೆ, ಕುಕ್ಕರಹಳ್ಳಿ ರಸ್ತೆ, ಬೋಗಾದಿ ರಸ್ತೆಗಳ ಡಾಂಬರೀಕರಣ ಕಾಮಗಾರಿಯನ್ನು ಶಾಸಕ ಎಲ್.ನಾಗೇಂದ್ರ ಪರಿಶೀಲಿಸಿದರು. ಈ ವೇಳೆ ಮೈಸೂರು ಪಾಲಿಕೆ ವಲಯ ಕಚೇರಿ–3ರ ಸಹಾಯಕ ಆಯುಕ್ತ ಸತ್ಯಮೂರ್ತಿ, ಅಭಿಯಂತರರು, ಗುತ್ತಿಗೆದಾರರು ಇದ್ದರು.

ಮಾಜಿ ಶಾಸಕ ಎ.ಜಿ.ಕೊಡ್ಗಿ ನಿಧನ



ಮಂಗಳೂರು: ಮಾಜಿ ಶಾಸಕ, ಬಿಜೆಪಿ ಹಿರಿಯ ನಾಯಕ ಎ.ಜಿ. ಕೊಡ್ಗಿ(93) ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ. ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದ ಎ.ಜಿ.ಕೊಡ್ಗಿ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಕೊಡ್ಗಿ ಬೈಂದೂರು ಶಾಸಕರಾಗಿ, ಕರ್ನಾಟಕ ಬ್ಯಾಂಕ್ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಈ ಮಧ್ಯೆ 2006–08ರವರೆಗೆ ರಾಜ್ಯ ಮೂರನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಎ.ಜಿ. ಕೊಡ್ಗಿ ಕೆಲ ವರ್ಷಗಳಿಂದ ರಾಜಕಾರಣದಿಂದ ದೂರ ಸರಿದಿದ್ದರು. ಅಮಾಸೆಬೈಲ್ ಚಾರಿಟಬಲ್ ಟ್ರಸ್ಟ್ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು ಎನ್ನಲಾಗಿದೆ.

ಮೈಸೂರಲ್ಲಿ ಸುರಕ್ಷಿತ ಸೈಕಲ್ ಸವಾರಿಗೆ ಪ್ರತ್ಯೇಕ ಪಥ

● ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೆ ಪಾಲಿಕೆ ಸಜ್ಜು ● ಮೊದಲ ಹಂತದಲ್ಲಿ ವಿವಿಧ ರಸ್ತೆಗಳಲ್ಲಿ 8.5 ಕಿ.ಮೀ. ನಿರ್ಮಾಣ

–ಎಂ.ಬಿ.ಪವನ್‌ಮೂರ್ತಿ






ಉದ್ದೇಶಿತ ಸುರಕ್ಷಿತ ಸೈಕಲ್ ಪಥ ನಿರ್ಮಾಣಗೊಳ್ಳುವ ಮೈಸೂರಿನ ಬೋಗಾದಿ ಮುಖ್ಯ ರಸ್ತೆ ಇದು.

ಮೈಸೂರು,ಜೂ.13– ಮೈಸೂರಿನ ಸೈಕಲ್ ಸವಾರಿಯ ಪರಂಪರೆಗೆ ಮತ್ತಷ್ಟು ಉತ್ತೇಜನ ನೀಡಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದ್ದು, ಸೈಕಲ್ ಸವಾರರಿಗೆಂದೇ ಮೈಸೂರು ನಗರದಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೆ ಸಜ್ಜಾಗುತ್ತಿದೆ.

ಅದಕ್ಕಾಗಿ ಮೊದಲ ಹಂತದಲ್ಲಿ ನಗರದ ವಿವಿಧ ರಸ್ತೆಗಳಲ್ಲಿ ಒಟ್ಟು 8.5 ಕಿ.ಮೀ. ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೆ ಸಿದ್ಧತೆ ನಡೆಸಿದೆ. 2017 ಜೂ.4ರಂದು ಮೈಸೂರಿನಲ್ಲಿ ಸಾರ್ವಜನಿಕ ಸೈಕಲ್ ಸಹಪಾಲು (ಪಿಬಿಎಸ್) ವ್ಯವಸ್ಥೆ ಚಾಲನೆಗೆ ಬಂದಿತು. ಆ ಮೂಲಕ ಈ ವ್ಯವಸ್ಥೆ ಇದೇ ಜೂ.4ಕ್ಕೆ ಐದು ವರ್ಷಗಳನ್ನು ಪೂರೈಸಿದೆ.

ದೇಶದ ಮೊಟ್ಟಮೊದಲ ಸಾರ್ವಜನಿಕ ಸೈಕಲ್ ವಿನಿಯೋಗ ವ್ಯವಸ್ಥೆ ಇದಾಗಿದ್ದು, ಇದು ಇತ್ತೀಚಿನ ಮೈಸೂರು ಸೈಕಲ್ ಪರಂಪರೆಗೆ ವಿನೂತನ ಸ್ಪರ್ಶ ನೀಡಿತು. ಇದೀಗ ಇದರ ವಿಸ್ತೃತ ಯೋಜನೆ ಎಂಬಂತೆ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಗರದಲ್ಲಿ ನಿರ್ಮಾಣ ಗೊಳ್ಳುತ್ತಿದೆ. ಹಾಗೆಂದ ಮಾತ್ರಕ್ಕೆ ಈ ಪಥ ಕೇವಲ ಟ್ರಿಣ್ ಟ್ರಿಣ್ ಸೈಕಲ್‌ಗಳಿಗೆ ಮಾತ್ರ ಸೀಮಿತವಲ್ಲ. ಎಲ್ಲಾ ಸಾರ್ವಜನಿಕರ ಸೈಕಲ್ ಸವಾರಿಗೂ ಈ ಪಥ ಮುಕ್ತ.



ಸೈಕಲ್ ಸವಾರಿ ಮೈಸೂರು ಹೃದಯ ಭಾಗದಲ್ಲಿ ಕಷ್ಟದ ಕೆಲಸವೇ. ವಾಹನ ದಟ್ಟಣೆ ನಡುವೆ ಸೈಕಲ್ ತುಳಿಯುವುದು ಸಾಮಾನ್ಯ ಸಂಗತಿಯಲ್ಲ. ಜೊತೆಗೆ ಗುಂಡಿಮಯ ರಸ್ತೆಗಳಲ್ಲಿ ಸೈಕಲ್ ಸಂಚಾರ ಸಂಚಕಾರವೇ ಸರಿ. ಇದೀಗ ಇಂತಹ ಸನ್ನಿವೇಶ ನಿವಾರಣೆಗೆ ಪ್ರತ್ಯೇಕ ಸೈಕಲ್ ಪಥ ಸಹಕಾರಿ ಎಂಬುದು ಸೈಕಲ್ ಸವಾರರ ಅಭಿಮತ.

ಮೈಸೂರಿನ ಸೈಕಲ್ ಸಂಸ್ಕೃತಿಗೆ ಟ್ರಿಣ್ ಟ್ರಿಣ್ ಹೊಸ ಕಳೆ ನೀಡಿದೆ. ಮೋಟಾರು ವಾಹನಗಳ ಸಂಚಾರದಿಂದ ಹೊರಸೂಸುವ ಇಂಗಾಲದ ಡೈಆಕ್ಸೈಡ್ ಜಾಗತಿಕ ತಾಪಮಾನ ಏರಿಕೆಗೆ ದೊಡ್ಡ ಸವಾಲಾಗಿದೆ. ಇಂತಹ ಸನ್ನಿವೇಶದಲ್ಲಿ ಇಂಗಾಲದ ಡೈಆಕ್ಸೈಡ್ ಕಡಿತಗೊಳಿಸುವಲ್ಲಿಯೂ ಟ್ರಿಣ್ ಟ್ರಿಣ್ ಸವಾರಿ ಸಹಕಾರಿಯಾಗಿದೆ. ಮೈಸೂರು ಮಹಾ ನಗರ ಪಾಲಿಕೆ, ನಗರ ಭೂ ಸಾರಿಗೆ ನಿರ್ದೇಶನಾಲಯದ ಸಹಯೋಗದಲ್ಲಿ ಈ ಟ್ರಿಣ್ ಟ್ರಿಣ್ ವ್ಯವಸ್ಥೆ ಜಾರಿಯಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಟ್ರಿಣ್ ಟ್ರಿಣ್ ಸೈಕಲ್ ವ್ಯವಸ್ಥಾಪಕಿ ಆಶಾ ಕೆರಕಟ್ಟಿ, ನಮ್ಮ 'ಗ್ರೀನ್ ವ್ಹೀಲ್ ರೈಡ್' ಕಂಪನಿ, ಟೆಂಡರ್ ಮೂಲಕ ಟ್ರಿಣ್ ಟ್ರಿಣ್ ಸೈಕಲ್ ವ್ಯವಸ್ಥೆ ನಿರ್ವಹಣೆ ವಹಿಸಿಕೊಂಡಿದೆ. ಟ್ರಿಣ್ ಟ್ರಿಣ್ ಸೇವೆಗೆಂದು ಮೈಸೂರು ನಗರದಲ್ಲಿ 52 ಸಹಪಾಲು ಸೇವಾ ಕೇಂದ್ರಗಳಿವೆ (ಡಾಕಿಂಗ್ ಸ್ಟೇಷನ್/ ಸೈಕಲ್ ನಿಲ್ದಾಣಗಳು). ಇದನ್ನು 100 ನಿಲ್ದಾಣಗಳಿಗೆ ಹೆಚ್ಚಿಸುವ ಉದ್ದೇಶಿತ ಯೋಜನೆಯೂ ಇದೆ ಎಂದು ಹೇಳಿದರು.

ಸವಾರರು ಯಾವುದೇ ಕೇಂದ್ರದಲ್ಲಿ ಸೈಕಲ್ ಪಡೆದು ಸವಾರಿ ಪೂರ್ಣಗೊಳಿಸಿದ ಬಳಿಕ ತಮಗೆ ಸಮೀಪದ ಯಾವುದೇ ಕೇಂದ್ರಗಳಲ್ಲಿ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ನಿಲುಗಡೆ ಮಾಡಬಹುದು. ಸದ್ಯ 30 ಗೇರ್ ಸೈಕಲ್‌ಗಳು ಸೇರಿದಂತೆ ಒಟ್ಟು 450 ಸೈಕಲ್‌ಗಳು ಲಭ್ಯವಿವೆ. ಇವುಗಳನ್ನು ಸಾವಿರ ಸಂಖ್ಯೆಗೆ ಹೆಚ್ಚಿಸುವ ಮತ್ತೊಂದು ಉದ್ದೇಶಿತ ಯೋಜನೆ ಇದೆ. ಪ್ರಸ್ತುತ 16,918 ಮಂದಿ ಸದಸ್ಯತ್ವ ಪಡೆದು (2022ರ ಜೂ.12ರವರೆಗೆ) ಟ್ರಿಣ್ ಟ್ರಿಣ್ ಸೈಕಲ್ ಬಳಕೆ ಮಾಡುತ್ತಿದ್ದಾರೆ. ಪ್ರತಿದಿನ ಸುಮಾರು ಸಾವಿರ ಮಂದಿ ಈ ಸೈಕಲ್ ಸೇವೆ ಬಳಕೆ ಮಾಡುತ್ತಿದ್ದಾರೆ. ಕಾಲೇಜುಗಳ ಪುನರಾರಂಭದ ಬಳಿಕ ಇದರ ಸಂಖ್ಯೆ ಮತ್ತಷ್ಟು ಹೆಚ್ಚಳಗೊಳ್ಳಲಿದೆ ಎಂದರು.

ಒಂದೂವರೆ ದಶಕದ ಹಿಂದೆಯೇ ನಗರದ ಲಲಿತ ಮಹಲ್ ಅರಮನೆ ರಸ್ತೆಯಲ್ಲಿ ಆಡಳಿತ ತರಬೇತಿ ಸಂಸ್ಥೆ ಎದುರು ಮೊದಲ ಸೈಕಲ್ ಪಥ ನಿರ್ಮಾಣವಾಗಿತ್ತು. ಮೋಟಾರುರಹಿತ ವಾಹನಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಾಲಿಕೆಯಿಂದ ಇಲ್ಲಿ 500 ಮೀ. ಉದ್ದದ ವಿಶೇಷ ಸೈಕಲ್ ಪಥ ನಿರ್ಮಿಸಲಾಗಿತ್ತು.

ಮೈಸೂರಿಗೆ ಇನ್‌ಡೋರ್ ಸೈಕ್ಲಿಂಗ್ ಟ್ರ್ಯಾಕ್, ಸೈಕಲ್ ಪಾರ್ಕ್ ಕೂಡ ಅಗತ್ಯ...

ಮೈಸೂರಲ್ಲಿ ಸೈಕಲ್ ಸಂಸ್ಕೃತಿ ವೇಗವಾಗಿ ಬೆಳೆಯುತ್ತಿದೆ. ಹಾಗಾಗಿ ಪ್ರತ್ಯೇಕ ಸೈಕಲ್ ಪಥ ನಿರ್ಮಾಣ ಸ್ವಾಗತಾರ್ಹ. ಜೊತೆಗೆ ಮೈಸೂರಲ್ಲಿ ಇನ್‌ಡೋರ್ ಸೈಕಲ್ ಟ್ರ್ಯಾಕ್ ಮತ್ತು ಸೈಕಲ್ ಪಾರ್ಕ್ ನಿರ್ಮಿಸುವುದೂ ಅಗತ್ಯ. ಹವ್ಯಾಸಿ ಸೈಕ್ಲಿಸ್ಟ್‌ಗಳು, ವ್ಯಾಯಾಮಕ್ಕಾಗಿ ಸೈಕಲ್ ಬಳಕೆ ಮಾಡುವವರು, ಕ್ರೀಡಾ ಸೈಕ್ಲಿಸ್ಟ್‌ಗಳು ಸೇರಿದಂತೆ ವರ್ಷದಲ್ಲಿ ಸಾವಿರಕ್ಕೂ ಹೆಚ್ಚು ಸೈಕ್ಲಿಸ್ಟ್‌ಗಳು ಮೈಸೂರಲ್ಲಿ ಹೊರಹೊಮ್ಮುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇನ್‌ಡೋರ್ ಸೈಕ್ಲಿಂಗ್ ಟ್ರ್ಯಾಕ್ (ವೆಲೋಟ್ರೋಲ್) ಅಗತ್ಯವೂ ಇದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೈಕಲ್ ಪಾರ್ಕ್ ನಿರ್ಮಿಸುವುದು ರೂಢಿಯಲ್ಲಿದೆ. ಹಚ್ಚಹಸಿರಿನ ನಡುವೆ ನಿರ್ಮಿಸುವ ಸೈಕಲ್ ಪಾರ್ಕ್, ಸೈಕಲ್ ಕಲಿಯುವ ಮಕ್ಕಳು ಹಾಗೂ ವಯೋವೃದ್ಧರ ಸೈಕಲ್ ವ್ಯಾಯಾಮಕ್ಕೆ ಹೆಚ್ಚು ಸುರಕ್ಷತೆ ನೀಡಲಿದೆ. ಹೊಸದಾಗಿ ನಿರ್ಮಾಣಗೊಳ್ಳುವ ಬಡಾವಣೆಗಳಲ್ಲಿ ಪ್ರತ್ಯೇಕ ಸೈಕಲ್ ಪಥ ನಿರ್ಮಾಣ ಮಾಡುವುದು ಸೂಕ್ತ. ಇದರಿಂದ ಸೈಕಲ್ ಸಂಸ್ಕೃತಿಗೆ ಉತ್ತೇಜನ ದೊರೆಯಲಿದೆ.

–ಎನ್.ಲೋಕೇಶ್, ಕಾರ್ಯದರ್ಶಿ, ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್

ಚುನಾವಣೆ ಪ್ರಕ್ರಿಯೆ ಬಳಿಕ ಪಥ ನಿರ್ಮಾಣ ಕಾಮಗಾರಿ



ನಗರದ ಹಲವು ರಸ್ತೆಗಳಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣ ಯೋಜನೆ ಸಂಬಂಧ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು, ವರ್ಕ್ ಆರ್ಡರ್ (ಕಾರ್ಯಾದೇಶ) ಕೂಡ ಆಗಿದೆ. ದಕ್ಷಿಣ ಪದವೀಧರರ ಕ್ಷೇತ್ರದ ಪರಿಷತ್ ಚುನಾವಣೆ ಪ್ರಕ್ರಿಯೆ ಮುಗಿದ ಬಳಿಕ ಕಾಮಗಾರಿ ಆರಂಭವಾಗಲಿದೆ. ನಗರದ ವಿವಿಧ ರಸ್ತೆಗಳು ಸೇರಿದಂತೆ ಮೊದಲ ಹಂತದಲ್ಲಿ ಒಟ್ಟು 8.5 ಕೀ.ಮಿ. ಸಿಂಥೆಟಿಕ್ ಮೆಟಿ ರಿಯಲ್‌ನಲ್ಲಿ ಟ್ರ್ಯಾಕ್ (ಪಥ) ನಿರ್ಮಾಣವಾಗಲಿದೆ. ರಸ್ತೆ ಬದಿಯಲ್ಲಿ 2 ಸೈಕಲ್‌ಗಳು ಎದುರು–ಬದುರು ಸಂಚಾರ ಮಾಡಲು ಅವಕಾಶವಿರುವಂತೆ ಪಥ ನಿರ್ಮಿಸಲಾಗುವುದು. ಟ್ರಿಣ್ ಟ್ರಿಣ್ ಸೈಕಲ್‌ಗಳಿಗೆ ಮಾತ್ರವಲ್ಲ, ಎಲ್ಲಾ ಸೈಕಲ್ ಸವಾರರೂ ಈ ಪಥ ಬಳಸಿಕೊಳ್ಳಬಹುದು.

–ಜಿ.ಲಕ್ಷ್ಮೀಕಾಂತ್‌ರೆಡ್ಡಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ.

ಎಲ್ಲೆಲ್ಲಿ ಪಥ...

ಜೆಎಲ್‌ಬಿ ರಸ್ತೆಯಲ್ಲಿ 1,268 ಮೀ. (ಎಂಎನ್ ಜಂಕ್ಷನ್‌ನಿಂದ ಅಶೋಕ ವೃತ್ತದವರೆಗೆ), ಸೀತಾ ವಿಲಾಸ ರಸ್ತೆಯಲ್ಲಿ 746 ಮೀ. (ಎಂಎನ್ ಜಂಕ್ಷನ್‌ನಿಂದ ಕುಕ್ಕರಹಳ್ಳಿ ಕೆರೆ ಗೇಟ್‌ವರೆಗೆ), ಬೋಗಾದಿ ರಸ್ತೆಯಲ್ಲಿ 1,366 ಮೀ. (ಕುಕ್ಕರಹಳ್ಳಿ ಕೆರೆ ಗೇಟ್‌ನಿಂದ ಮೈಸೂರು ವಿವಿ ಮುಖ್ಯದ್ವಾರದವರೆಗೆ), ವಿಶ್ವಮಾನವ ಜೋಡಿ ರಸ್ತೆಯಲ್ಲಿ 1,124 ಮೀ. (ವಿವಿ ಕ್ಯಾಂಪಸ್‌ನಿಂದ ನಿಜಲಿಂಗಪ್ಪ ವೃತ್ತದವರೆಗೆ), ವಿಶ್ವಮಾನವ ಜೋಡಿ ರಸ್ತೆಯಲ್ಲಿ 2,159 ಮೀ. (ನಿಜಲಿಂಗಪ್ಪ ವೃತ್ತದಿಂದ ರಿಂಗ್ ರಸ್ತೆವರೆಗೆ), ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ 1,080 ಮೀ. (ಕೌಟಿಲ್ಯ ವೃತ್ತದಿಂದ ಕನ್ನೇಗೌಡ ವೃತ್ತದವರೆಗೆ), ಚಾಮರಾಜ ಜೋಡಿ ರಸ್ತೆಯಲ್ಲಿ 388 ಮೀ. (ಏಕಲವ್ಯ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗೆ), ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ 591 ಮೀ. (ಕನ್ನೇಗೌಡ ವೃತ್ತದಿಂದ ಅಶೋಕ ವೃತ್ತದವರೆಗೆ) ಸಿಂಥೆಟಿಕ್ ಪ್ರತ್ಯೇಕ ಸೈಕಲ್ ಪಥ ನಿರ್ಮಿಸಲಾಗುತ್ತಿದೆ.

ನಕ್ಕರೆ ಅದೇ ಸ್ವರ್ಗ

ಸುಬ್ಬಕ್ಕ : "ಪ್ರತಿನಿತ್ಯ ನಮ್ಮ ಮನೆಗೆ ಬರ್ತಿಯಲ್ಲಾ, ಈ ಏರಿಯಾದಲ್ಲಿ ಬೇರೆ ಮನೆಗಳು ಇಲ್ವಾ?"

ಭಿಕ್ಷುಕ : "ನನಗೂ ವಯಸ್ಸಾಯ್ತು ತಾಯಿ. ಎಲ್ಲೆಂದರಲ್ಲಿ ಸಿಕ್ಕಿದ್ದನ್ನು ತಿಂದು ಆರೋಗ್ಯ ಕೆಡಿಸಿಕೊಳ್ಳಬಾರದು ಮತ್ತು ಒಂದೇ ರೀತಿಯ ಆಹಾರ ತೆಗೆದುಕೊಳ್ಳಿ ಎಂದು ಡಾಕ್ಟರ್ ಹೇಳಿದ್ದಾರೆ!"

ಮೈಸೂರು ಮಿತ್ರ

ಮಂಗಳವಾರ, 14 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಆತ್ಮವಿಶ್ವಾಸ ನಿಧಾನವಾಗಿ ಬೆಳೆಯುವ ಗಿಡ –ಸರವಾಂಟಿಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹತ್ತು ಆಡಬಹುದು, ಒಂದು ಬರೆಯಲಾಗದು

ನಿಮ್ಮ ಪತ್ರಗಳು

ಕುಸಿದಿರುವ ಸೇತುವೆ ದುರಸ್ಥಿಗೆ ಮನವಿ



ಮಾನ್ಯರೆ,

ವಿಜಯನಗರ 4ನೇ ಹಂತ, 2ನೇ ಘಟ್ಟ ಪ್ರದೇಶದಲ್ಲಿನ ಹತ್ತಿರ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಮತ್ತು ವಾಟರ್ ಟ್ಯಾಂಕ್ ನಡುವೆ ಸಾಗುವ ರಸ್ತೆಯಲ್ಲಿ ಒಂದು ದೊಡ್ಡ ಸೂಯೇಜ್ ಮೋರಿಯು ಹಾದುಹೋಗುತ್ತದೆ. ಸ್ವಲ್ಪ ದಿನಗಳ ಹಿಂದೆ ಸುರಿದ ಮಳೆಗೆ ಸೇತುವೆ ಕುಸಿದು ಹೋಗಿದೆ. ಈಗ ಆ ರಸ್ತೆಗೆ ಜಲ್ಲಿ ಕಲ್ಲು ಹಾಕುವ ಕೆಲಸ ನಡೆಯುತ್ತಿದೆ. ಆದರೆ ಸೇತುವೆ ದುರಸ್ತಿ ಮಾಡುವುದಿಲ್ಲವೆಂದು ಕಂಟ್ರಾಕ್ಟರ್ ಹೇಳುತ್ತಾರೆ. ಬಸ್‌ಗಳಿಂದ ಹಿಡಿದು ಎಲ್ಲಾ ರೀತಿಯ ವಾಹನಗಳು ಅದರ ಮೇಲೆ ಸಾಗುತ್ತವೆ. ಅಗಲ ಕಡಿಮೆ ಇರುವ ಈ ರಸ್ತೆಯಲ್ಲಿ ದೊಡ್ಡ ವಾಹನ ಬಂದರೆ ಕಷ್ಟವಾಗುತ್ತದೆ. ಇನ್ನು ಸೇತುವೆ ಕುಸಿದಿರುವುದರಿಂದ ರಸ್ತೆ ಕಾಮಗಾರಿ ಅರ್ಧಂಬರ್ಧ ಆಗಿರುವುದರಿಂದ ಜನ ಓಡಾಡಲು ಹೆದರಿಕೆಯಾಗುತ್ತದೆ. ಸ್ವಲ್ಪ ಯಾಮಾರಿದರೂ ಸೂಯೇಜ್ ಮೋರಿಗೆ ಬೀಳುವುದು ಖಂಡಿತ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಕಾಮಗಾರಿ ನಡೆಸುವ ಮೊದಲು ಸೇತುವೆ ಕಟ್ಟಿಸಿ ತದನಂತರದಲ್ಲಿ ರಸ್ತೆ ಪೂರ್ಣಗೊಳಿಸಬೇಕೆಂದು ಸ್ಥಳೀಯರ ಮನವಿ. ಸಾಧ್ಯವಾದರೆ ಕೆಎಸ್‌ಆರ್‌ಟಿಸಿ ಬಸ್‌ಗಳು ಬೇರೆ ರಸ್ತೆಯಲ್ಲಿ ಹೋಗುವಂತೆ ಕ್ರಮಕೈಗೊಳ್ಳಬೇಕು. ಏಕೆಂದರೆ ಸೇತುವೆಯ ರಸ್ತೆಯು ಸಣ್ಣ ವಾಹನಗಳು ಓಡಾಡಲು ಮಾತ್ರ ಸೂಕ್ತವಾಗಿದೆ.

–ಪೂರ್ಣಿಮಾ, ವಿಜಯನಗರ 4ನೇ ಹಂತ. ಮೈಸೂರು.

ಮುಂದಿನ ರಾಷ್ಟ್ರಪತಿ ಹುದ್ದೆಗೆ ಡಾ.ಸುಧಾಮೂರ್ತಿ ಆಯ್ಕೆಯಾಗಲಿ

ಮಾನ್ಯರೆ,



ಇತ್ತೀಚೆಗೆ ದೇಶದ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಚುನಾವಣೆಯ ಬಗ್ಗೆ ದೆಹಲಿ ಮೂಲದಿಂದ ಸುದ್ದಿ ಪ್ರಸಾರವಾಗಿದೆ. ಮುಂದಿನ ತಿಂಗಳು ಈ ಹುದ್ದೆಗೆ ಜೂನ್ 24 ಒಳಗೆ ಹೊಸಬರು ಆಯ್ಕೆಯಾಗಬೇಕಾಗಿದೆ. ಈ ಸುದ್ದಿಯಲ್ಲಿ ಎರಡು ಪ್ರಮುಖ ಹುದ್ದೆಗಳಿಗೆ ಪ್ರಧಾನವಾಗಿ ಹೆಸರು ಡಾ.ಸುಧಾಮೂರ್ತಿ, ಆರಿಫ್ ಮೊಹಮದ್ ಖಾನ್, ವೆಂಕಯ್ಯನಾಯ್ಡು, ನಿರ್ಮಲ ಸೀತಾರಾಮನ್, ಗುಲಾಂ ನಬಿ ಅಜಾದ್ ಹೆಸರು ಕೇಳಿ ಬರುತ್ತಿವೆ. ಇವರಲ್ಲಿ ಡಾ.ಸುಧಾಮೂರ್ತಿ ಅವರು ದೇಶದಲ್ಲಿ ಭಾರೀ ಹೆಸರು ಮಾಡಿದ್ದಾರೆ ಹಾಗೂ ಇವರು ಹಲವು ರಾಜ್ಯಗಳಲ್ಲಿ ಪ್ರವಾಸ ಮಾಡಿ ಕಡುಬಡವರಿಗೆ ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಕೋವಿಡ್ ಸಮಯದಲ್ಲಿ ಸಾಕಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಹೀಗಿರುವಾಗ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಡಾ. ಸುಧಾಮೂರ್ತಿ ಅವರನ್ನು ರಾಷ್ಟ್ರಪತಿ ಹುದ್ದೆಗೆ ಆಯ್ಕೆ ಮಾಡಿದರೆ ದೇಶಕ್ಕೆ ಹಾಗೂ ರಾಜ್ಯಕ್ಕೆ ಒಳ್ಳೆಯ ಭವಿಷ್ಯವಿದೆ ಹಾಗೂ ಒಳ್ಳೆಯದಾಗುತ್ತದೆ ಎಂಬುದು ನನ್ನ ಅನಿಸಿಕೆ.

–ಸಿದ್ದಲಿಂಗೇಗೌಡ. ಹೈರಿಗೆ ಗ್ರಾಮ, ಹೆಚ್.ಡಿ. ಕೋಟೆ ತಾ.

ಪಠ್ಯಪುಸ್ತಕ ರಂಪಾಟ ಕೊನೆಯಾಗಲಿ!

ಮಾನ್ಯರೆ,

ಪಠ್ಯಪುಸ್ತಕ ಪರಿಷ್ಕರಣೆ ಕುರಿತ ವಿವಾದ ರಾಜಕೀಯ ಪಕ್ಷಗಳ ಪಾಲಿಗೆ ದಾಳವಾಗುತ್ತಿರುವುದು ವಿಪರ್ಯಾಸ. ಟಿವಿ, ಸಾಮಾಜಿಕ ಜಾಲತಾಣಗಳಲ್ಲೂ ಈ ವಿಚಾರಗಳ ಜಗ್ಗಾಟ ಅವಿರತ ನಡೆಯುತ್ತಿದೆ. ಮಕ್ಕಳು ಹಾಗೂ ಶಿಕ್ಷಕರ ಬೌದ್ಧಿಕ ವಿಕಾಸವಾಗಲು ನೆರವಾಗಬೇಕಾದ ಪಠ್ಯಪುಸ್ತಕಗಳು ಹಾಗೂ ಅದರಲ್ಲಿನ ವಿಷಯಾಂಶಗಳು ಪ್ರಸ್ತುತ ರಾಜಕೀಯ ರಂಪಾಟದಿಂದ ಕಲುಷಿತವಾಗುತ್ತಿರುವುದು ಸರಿಯಲ್ಲ. ಬೋಧಿಸುವ ಶಿಕ್ಷಕರಿಗೆ ಹಾಗೂ ಕಲಿಯುವಂತಹ ಮಕ್ಕಳಿಗೆ ಪಠ್ಯಪುಸ್ತಕದ ಮೇಲೆ ಪ್ರೀತಿ, ಗೌರವ, ಅಭಿಮಾನಗಳು ಮೂಡಬೇಕು. ಶಿಕ್ಷಕರು ಸ್ವಚ್ಛ ಮನಸ್ಸಿನಿಂದ ಪಾಠ ಮಾಡಲು ಹಾಗೂ ಮಕ್ಕಳು ಖುಷಿಯಿಂದ ಪಾಠವನ್ನು ಆಲಿಸಬೇಕೆಂದರೆ, ಸಮಾಜದಲ್ಲಿ ಅಂತ ಸ್ವಾಸ್ಥ್ಯ ವಾತಾವರಣ ಸೃಷ್ಟಿಯಾಗಬೇಕು. ಪಠ್ಯದ ವಾಸ್ತವಾಂಶಗಳ ಕುರಿತು ತಲೆಕೆಡಿಸಿಕೊಳ್ಳಲು ಸರ್ಕಾರವಿದೆ. ಚಿಂತಕರ ಸಮಿತಿಗಳು ಇದ್ದೇ ಇರುತ್ತವೆ. ಹೀಗಾಗಿ ಗೊಂದಲಗಳನ್ನು ಸೃಷ್ಟಿ ಮಾಡುವುದನ್ನು ಬಿಟ್ಟು, ಮಕ್ಕಳ ಹಾಗೂ ಶಿಕ್ಷಕರ ಹಿತದೃಷ್ಟಿಯಿಂದಾದರೂ ಸಮಾಜದಲ್ಲಿ ಒಡಕು ಮೂಡಿಸಲು ಪ್ರಯತ್ನಿಸುತ್ತಿರುವ ಮನಸ್ಸುಗಳು ಈ ಬಗ್ಗೆ ಅನಗತ್ಯ ರಾಜಕೀಯವನ್ನು ಕೈಬಿಟ್ಟು ಒಂದಾದಾಗ ಮಾತ್ರವೇ ಬೌದ್ಧಿಕ ವಲಯ ತಿಳಿಯಾಗಲು ಸಾಧ್ಯ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಇನ್ನಿಬ್ಬರು!

ಮಾನ್ಯರೆ,

'ನೋಟುಗಳಲ್ಲಿ ಕಲಾಂ, ಠಾಗೋರ್ ಚಿತ್ರಗಳು' (ಮಿತ್ರ, ಮುಖಪುಟ, ಜೂನ್ 6). ಆರ್.ಬಿ.ಐ. ಚಿಂತನೆ ಸ್ತುತ್ಯ ಮತ್ತು ಸ್ವಾಗತಾರ್ಹ. ಆದರೆ ಇನ್ನಿಬ್ಬರು ಮಹನೀಯರು ಮರೆತುಹೋದದ್ದು ಹೇಗೆ? ಅವರೆಂದರೆ, 'ನವಯುಗಾಚಾರ್ಯ' ಸ್ವಾಮಿ ವಿವೇಕಾನಂದರು ಮತ್ತು ಸಂವಿಧಾನ ರೂವಾರಿ ಡಾ. ಬಿ.ಆರ್. ಅಂಬೇಡ್ಕರ್‌ರು, ಅವರ ಭಾವಚಿತ್ರಗಳೂ ನೋಟುಗಳ ಮೇಲೆ ಕಂಗೊಳಿಸಲಿ! (ಗಾಂಧಿಯಂತೂ ಇದ್ದೇ ಇರುತ್ತಾರೆ)

– ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

ಅರಿವಿಲ್ಲದ ಐಡೆಂಟಿಟಿ



ಯಾರು ಎಷ್ಟೇ ಶಂಖ ಊದಿದರೂ ವ್ಯವಸ್ಥೆ ಬದಲಾಗುವುದಿಲ್ಲ. ವ್ಯವಸ್ಥೆ ಬದಲಾದರೂ ಅದು ಹೊರಡಿಸುವ 'ಬಲವಿದ್ದವನಿಗೆ ಜಯ' ಎನ್ನುವ ಗಾದೆ ಮಾತಿನ ಫರ್ಮಾನು ಮಾತ್ರ ಪರ್ಮಿಟ್ಟಿಲ್ಲದ ಹಳೆಯ ಲಾರಿಯಂತೆ ಸದ್ದು ಮಾಡುತ್ತಲೇ ಓಡುತ್ತಿರುತ್ತದೆ. ಆದರೆ ಅದು ಓಡುವ ರಸ್ತೆಯ ಮಧ್ಯ ಭಾಗದಲ್ಲಿ ಉಬ್ಬುತಗ್ಗುಗಳಿರುತ್ತವೆ. ಅದನ್ನು ದಾಟಿಕೊಂಡು ಓಡುವುದೇ ಮನುಷ್ಯನ ಐಡೆಂಟಿಟಿಯ ಸಶೇಷ. ಅದೇ ಈ ದಿನದ ವಿಶೇಷ. ವಾಸ್ತವದ ಸುಡು ಬೇಸಿಗೆಯಲ್ಲಿ ಬೆಂದು ಬೆಂಡಾದ ಮನುಷ್ಯ ಅದರ ವಿರುದ್ಧ ಮೊಂಡಾಗುತ್ತಾನೆ ಅಂದರೆ ಸರತಿಯ ಸಾಲಿನಲ್ಲಿ ನಿಂತ ನಮಗೆ ವ್ಯವಸ್ಥೆಯ ಕಡು ವಾಸ್ತವ ಕಾಣುವ ಹೊತ್ತಿಗೆ ಬದುಕು ಬಯಲಾಗಿರುತ್ತದೆ. ಇಂಥದ್ದನ್ನು ತಡಕೊಳ್ಳ ಲಾರದೆಯೇ ನಮ್ಮ ಹಿರಿಯರು ಗಾದೆ ಮಾತುಗಳನ್ನು ಕಟ್ಟುತ್ತಾರೆ. ಹಾಗೆ ಕಟ್ಟಿಹೋದ ಸಾವಿರ ಸಾವಿರ ಗಾದೆ ಮಾತುಗಳಲ್ಲಿ ನಮ್ಮ ಕಾಲಕ್ಕೆ ಹೆಚ್ಚು ಒಪ್ಪುವ ಮಾತೆಂದರೆ "ಬಲವಿದ್ದವನಿಗೆ ಜಯ", "ಬಾಯಿದ್ದವನು ಬರಗಾಲದಲ್ಲೂ ಬದುಕಿದ" ಎನ್ನುವ ಮಾತು. ಈ ಮಾತು ವಶೀಕರಣ ಶಕ್ತಿಯಂತೆ ನಮ್ಮನ್ನು ಮತ್ತು ನಮ್ಮ ಭ್ರಮೆಗಳನ್ನು ನವೀಕರಿಸಿ ಕೊಲ್ಲುತ್ತದೆ. ಇವತ್ತು ಯಾರೂ ಸನ್ಯಾಸಿಗಳಲ್ಲ; ಅವರವರ ಯೋಗ್ಯತೆಗೆ ತಕ್ಕಂತೆ ಎಲ್ಲರಿಗೂ ಅವಕಾಶಗಳು ದೊರಕಬೇಕು ಎನ್ನುವ ಬಯಕೆಯಲ್ಲೇ ಬದುಕು ಪ್ರಾರಂಭಿಸುತ್ತಾರೆ. ಪ್ರತಿಯೊಬ್ಬರೂ ತಮ್ಮಲ್ಲಿರುವ ಏನೋ ಒಂದು ಪ್ರತಿಭೆಯನ್ನೋ, ಕೈಚಳಕವನ್ನೋ, ಪಾಂಡಿತ್ಯವನ್ನೋ, ಇತರರಲ್ಲಿ ಇಲ್ಲದ ಇನ್ನಾವುದೋ ವಿಶೇಷತೆಯನ್ನೋ, ಅಭಿವ್ಯಕ್ತಿಸಿ ತಮ್ಮ ಇರುವಿಕೆಯನ್ನು ಸಮಾಜ ವಿಶೇಷವಾಗಿ ಗಮನಿಸುವಂತೆ ಮಾಡುತ್ತಾರೆ.

ಹೆಂಗಸರ ಗುಂಪಲ್ಲೇ ನಿಂಗಮ್ಮನಂತಹ ಮಹಿಳಾ ಬಸ್ ಡ್ರೈವರ್‌ಗಳು ಬಸ್ಸಿನ ಸ್ಟಿಯರಿಂಗ್ ಹಿಡಿದು ಗಂಡಸರ ಸಮಕ್ಕೆ ನಾನೂ ಬಸ್ಸು ಓಡಿಸುತ್ತೇನೆ ನೋಡಿ ಅಂತ ತನ್ನ ಅಪರೂಪದ ಆಸಕ್ತಿಯನ್ನು ಪ್ರಚುರಪಡಿಸುತ್ತಾಳೆ. ನಿನಗಿಂತ ನಾನೇನು ಕಮ್ಮಿ ಅಂತ ಮತ್ತೊಬ್ಬ ಹೆಣ್ಣು ಮಗಳು ವಿಮಾನವನ್ನೇ ಹಾರಿಸಿಬಿಡುತ್ತಾಳೆ. ಪ್ಯಾರಾಸೇಲಿಂಗ್ ಮಾಡಿದ ಮತ್ತೊಬ್ಬಳು ಮಗುವೊಂದನ್ನು ಹೆಗಲ ಮೇಲೆ ಕಟ್ಟಿಕೊಂಡು ಹಕ್ಕಿಯಂತೆ ಹಾರಿ ಯಶಸ್ವಿಯಾಗಿ ಬಾನಿನಿಂದ ಕೆಳಗಿಳಿಯುತ್ತಾಳೆ. ಯುದ್ಧ ವಿಮಾನವನ್ನೇ ಓಡಿಸಿ ಗೆಲುವಿನ ನಗೆನಕ್ಕ ಹೆಣ್ಣು ಮಕ್ಕಳು ಈಗ ವಿಶೇಷ. ಆಂತರಿಕ್ಷದಲ್ಲಿ ಚಂದ್ರನ ಮೇಲೆ ವಾಕಿಂಗ್ ಮಾಡಿದ ಮಹಿಳೆ ನಾನೇನು ಕಮ್ಮಿ ಎಂದು ತನ್ನ ವಿಶೇಷ ಸಾಮರ್ಥ್ಯದ ವಿಸ್ತಾರವನ್ನು ಚರಿತ್ರಾರ್ಹವಾಗಿ ಜಗತ್ತಿಗೆ ದಾಖಲಿಸುತ್ತಾಳೆ. ಭೀಮಸೇನ, ನಳಮಹಾರಾಜರಂತೆ ಅಡುಗೆ ಮಾಡಲು ನಾನೂ ಸೈ ಎನ್ನುತ್ತಾ ಕೈಯ್ಯಲ್ಲಿ ಸೌಟು ಹಿಡಿದು ಫೈವ್‌ಸ್ಟಾರ್ ರುಚಿಕಟ್ಟಿನ ಅಡಿಗೆ ಮನೆ ಸೇರಿಕೊಂಡ ವಿಶ್ವವಿಖ್ಯಾತ ಅಡುಗೆ ಭಟ್ಟರು ಬಳೆಯಿಲ್ಲದ ತಮ್ಮ ಕೈ ತೋರಿಸಿ ಹೆಂಗಸರಿಗಿಂತ ನಮ್ಮ ಕೈಯ್ಯ ರುಚಿ ಯಾವುದಕ್ಕೆ ಕಮ್ಮಿ ಅಂತ ಹೇಳಿ ಅಡುಗೆಯ ಐಡೆಂಟಿಟಿಯಲ್ಲೇ ಬದುಕು ಕಟ್ಟಿಕೊಂಡವರು ಎಷ್ಟಿಲ್ಲ? ಹೇಗಿದೆ ನೋಡಿ? ಐಡೆಂಟಿಟಿಯ ಪಕ್ಕಾ ಪ್ರಸೆಂಟೇಷನ್ನು.

ಸಿನಿಮಾ ಹೀರೋಯಿಂದ ಹಿಡಿದು, ಆಡಳಿತದ ಚುಕ್ಕಾಣಿಯ ತನಕ ಪುರುಷ ಸಂಕುಲದ ಎಲ್ಲರೂ ತಮ್ಮ ತಮ್ಮ ಶ್ರಮದ ಜೊತೆಗೆ ತಮಗಿರುವ ವಿಶೇಷ ಪಾಂಡಿತ್ಯವನ್ನೋ, ಸಂಘಟನಾ ಶಕ್ತಿಯನ್ನೋ, ವ್ಯವಹಾರ ಚತುರತೆಯನ್ನೋ, ಕಲಾಭಿವ್ಯಕ್ತಿಯ ಬಗೆಬಗೆಯ ವಿನ್ಯಾಸಗಳನ್ನೋ, ತಮ್ಮ ಪ್ರತಿಭೆಯ ಅನಂತ ಸಾಧ್ಯತೆಗಳನ್ನೋ ಹೊಟ್ಟೆಪಾಡಿಗೆ ದುಡಿಸಿಕೊಂಡರೂ ತಮ್ಮಲ್ಲಿರುವ ಏನೋ ಒಂದು ವಿಶೇಷತೆಯನ್ನು ಸಮಾಜದ ಗಮನಕ್ಕೆ ತಂದು ರಿಜಿಸ್ಟರ್ಡ್ ಆಗಲು ಪ್ರಯತ್ನಿಸುತ್ತಲೇ ಇರುತ್ತಾರೆ. ನೂರು ಜನ ಉಪನ್ಯಾಸಕರ ಪೈಕಿ ಯಾವನೋ ಒಬ್ಬ ನಾನು ವಿದ್ಯಾರ್ಥಿಸ್ನೇಹಿ ಅಂತಲೋ, ಜ್ಞಾನದಾಹಿ ಅಂತಲೋ, ಅದ್ಭುತ ವಾಗ್ಮಿ ಅಂತಲೋ! ಡೆಕೋರೇಟ್ ಮಾಡಿಕೊಂಡು ಈ ಕಾರಣಕ್ಕೆ ನೋಡಿ! ನಾನು ಈ ನೂರು ಜನರ ಮಧ್ಯೆ ವಿಶೇಷ ಎಂಬ ತನ್ನದೇ ಐಡೆಂಟಿಟಿಯ ಮುದ್ರೆ ಒತ್ತಲು ಪ್ರತಿದಿನ ಪರದಾಡುತ್ತಾನೆ.

ಸಿನಿಮಾ ನಟರು, ನಿರ್ದೇಶಕರು, ರಂಗಕಲಾವಿದರಂಥಾ ಜಗತ್ತಿಗೆ ಬುದ್ಧಿ ಹೇಳುವ ರಂಗಸಮಾಜಗಳು ಕೂಡ ನಾವು ಕ್ಲಾಸಿಗೆ, ನೀವು ಮಾಸಿಗೆ ಅಂತ ಅವರವರೇ ತಮ್ಮ ಪ್ರತಿಭೆಯ ವಿವಿಧ ವಿನ್ಯಾಸಗಳನ್ನು ಗುಡ್ಡೆ ಮಾಂಸ ಹಂಚಿಕೊಂಡಂತೆ ಹಂಚಿಕೊಂಡುಬಿಟ್ಟಿರುತ್ತಾರೆ. ಇನ್ನು ಆಯಕಟ್ಟಿನ ಜಾಗದಲ್ಲಿ ಕುಳಿತ ಅಧಿಕಾರಶಾಹಿ ಜನ, ನಾನೆಷ್ಟು ಜನಸ್ನೇಹಿ ಎಂಬುದನ್ನು ಸಾಬೀತುಪಡಿಸಿಕೊಳ್ಳುವ ನೆಪದಲ್ಲಿ ತಮ್ಮ ಜನಪ್ರಿಯತೆಯ ಐಡೆಂಟಿಟಿಯನ್ನು ಹುಡುಕುತ್ತಿರುತ್ತಾರೆ. ಹೀಗೆ ನಾನೆಷ್ಟು ಸಮಾಜಮುಖಿ ಎಂಬಂತೆ ತನ್ನನ್ನು ತಾನು ಡೆಕೋರೇಟ್ ಮಾಡಿಕೊಳ್ಳುತ್ತಿರುವ ಹಿಂದಿರುವ ಅಸಲೀಯತ್ತನ್ನು ಗಮನಿಸಿದರೆ ಇಂಥ ದೊಂದು ಸಾರ್ವಜನಿಕ ಸಂಭ್ರಮದ ಮುಂದೆ ತಮ್ಮನ್ನು ತಾವು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುವುದಿದೆಯಲ್ಲ! ಅದೇ ಜೀವನ ಸೌಂದರ್ಯ. ಆದರೆ ಅದು ಎಲ್ಲರಿಗೂ ದಕ್ಕುವುದಿಲ್ಲ. ಇನ್ನು ಕೆಲವರು ಈ ಐಡೆಂಟಿಟಿ ಕ್ರೈಸಿಸ್‌ನ ಉಸಾಬರಿಯೇ ಬೇಡವೆಂದು ತಮ್ಮಷ್ಟಕ್ಕೆ ತಾವು ದುಡ್ಡು ಮಾಡುತ್ತಾ, ಆಸ್ತಿ ಖರೀದಿಸುತ್ತಾ ಐನೂರು ವರ್ಷಗಳವರೆಗೆ ತಲೆಮಾರುಗಳ ಲೆಕ್ಕದಲ್ಲಿ ಭ್ರಮೆಯಲ್ಲೇ ಬದುಕಿಬಿಟ್ಟಿರುತ್ತಾರೆ. ದುಡ್ಡು ಮಾಡುವುದೂ ಒಂದು ದೊಡ್ಡ ಕಲೆಯೇ! ನೋಡು ನಾನದರಲ್ಲಿ ಎಷ್ಟು ನಿಷ್ಣಾತ! ಎಷ್ಟು ದುಡ್ಡು ಮಾಡಿದರೂ ಯಾರಿಗೂ ಗೊತ್ತಾಗದಂತೆ ನನಗೆ ಬಚ್ಚಿಡುವ ಕಲೆ ಗೊತ್ತು ಎಂದು ಮೀಸೆಯ ತುದಿಯಲ್ಲೇ ನಕ್ಕವರ ಸಂಖ್ಯೆಯೇನು ಕಡಿಮೆಯೇ! ಅದೂ ಜಾಸ್ತಿಯೇ ಇದೆ. ಆದರೆ ಈ ಐಡೆಂಟಿಟಿಯ ಸಂಭ್ರಮಗಳು ದಕ್ಕುವ ಅಥವಾ ದಕ್ಕದಿರುವ ಮೊದಲ ಸತ್ಯ ಗೊತ್ತಾಗಿದ್ದು ಮಾತ್ರ ನಮ್ಮ ಹಾಡುಹಳ್ಳಿಯ ಜನಪದರಿಗೆ, ಆಗ ಹುಟ್ಟಿದ್ದೇ ಈ 'ಬಲವಿದ್ದವನಿಗೆ ಜಯ' ಎಂಬ ಗಾದೆ ಮಾತು.

ಒಟ್ಟಾರೆ ನಮ್ಮ ಕಾಲದ ಬಹುದೊಡ್ಡ ಇರಾದೆ ಎಂದರೆ ಸಕ್ಸಸ್‌ಬಲ್ ಐಡೆಂಟಿಟಿಗಾಗಿ ಪ್ರತಿಯೊಬ್ಬರೂ ಹಂಬಲಿಸುವುದೇ ನಿತ್ಯಮಂತ್ರ. ಒಬ್ಬ ಕಳ್ಳ ಕೂಡ ಪೋಲೀಸರಿಗೆ ಸಿಕ್ಕಿಕೊಂಡ ಕಳ್ಳನ ಮುಂದೆ ಕುಳಿತು ತಾನು ಪೋಲೀಸರಿಗೆ ಸಿಕ್ಕಿಕೊಳ್ಳದೆ ಅವರನ್ನೇ ಹೇಗೆ ಯಾಮಾರಿಸಿದೆ ನೋಡು? ಸಿ.ಸಿ. ಕ್ಯಾಮರಾ ಇದ್ದರೂ ಹೇಗೆ ಬಚಾವಾದೆ ನೋಡು? ಎಂದು ತನ್ನ ಚಾಲಾಕಿತನದ ಪರಾಕ್ರಮ ಕೊಚ್ಚಿಕೊಂಡು ಕಳ್ಳರ ಗುಂಪಿನಲ್ಲೇ ತನ್ನ ಐಡೆಂಟಿಟಿಗಾಗಿ ಹಪಹಪಿಸುತ್ತಿರುತ್ತಾನೆ. ಅಂದರೆ ಪ್ರತಿನಿತ್ಯದ ತಮ್ಮ ದುಡಿಮೆಯ ಭಾಗದಲ್ಲಿ ಲಾಭಗಳನ್ನೋ, ಅನುಕೂಲಗಳನ್ನೋ ನಿರೀಕ್ಷಿಸುವ ಜೊತೆಗೆ ಇದು ನನ್ನೊಬ್ಬನದ್ದೇ ವಿಶೇಷ ವೈವಿಧ್ಯ ಎಂಬುದನ್ನು ತೋರಿಸಲಿಕ್ಕೆ ಪರದಾಡುವವರ ಗುಂಪಿನಲ್ಲಿ ಯಾರಿಲ್ಲ? ಯಾರುಂಟು ಅಂತ ಕೇಳಿದರೆ ಭಿಕ್ಷೆ ಬೇಡುವವನಿಂದ ಹಿಡಿದು ಜಗತ್ತಿನ ಅತಿ ದೊಡ್ಡ ಸಿರಿವಂತನವರೆಗೆ ಎಲ್ಲರೂ ಕ್ಯೂನಲ್ಲಿ ನಿಂತವರೆ! ಉತ್ಸಾಹ ಕಳಕೊಂಡ ಕೆಲವರನ್ನುಳಿದು.

> **ಐಡೆಂಟಿಟಿ ಎಂಬ ಆತ್ಮತೃಪ್ತಿಗಾಗಿ, ತನ್ನೊಳಗೇ ಕೇಂದ್ರೀಕೃತವಾದ ಶಕ್ತಿ ಸಂಚಯನವನ್ನು ಪ್ರದರ್ಶಿಸಲೆಂದೇ ಜಗತ್ತಿನಲ್ಲಿ ಪ್ರತಿದಿನದ ರಂಗಪ್ರವೇಶ ನಡೆದಿದೆ. ದೊಡ್ಡ ನಾಯಕರ ಮನೆಯ ಮುಂದೆ ಯುವನಾಯಕನೊಬ್ಬ ಹೂಗುಚ್ಛವಿಡಿದು ನಿಲ್ಲದೆ ಹೋದರೆ ಆತನಿಗೆ ಮುಂದೊಂದು ದಿನ ಯಾವುದೇ ಚಿಕ್ಕ ಅಧಿಕಾರವೂ ದೊರೆಯುವುದಿಲ್ಲ. ಬಲವಿಲ್ಲದವರು, ನಾಲಗೆಯಿದ್ದರೂ ದನಿಯಿಲ್ಲದವರು, ಚಾಲಾಕಿತನ ಮಾಡಲು ಆಗದಿದ್ದವರ ಕಣ್ಣಲ್ಲಿ ಮೋಡ ಕಟ್ಟುತ್ತದೆ. ಕಟ್ಟಿದ ಕಾಚಕ್ಕಿಯೆಲ್ಲ ರಾಗಿಯ ತೆನೆಯಾಗಲ್ಲ, ಎಲ್ಲರ ಮಾತು ಮುತ್ತಾಗಲ್ಲ, ಎಲ್ಲ ನಕ್ಷತ್ರಗಳು ನಾವಾಗಲ್ಲ, ಸಾವಿರ ಜಾತಿಯ ಹೂವಿನಲ್ಲೆಲ್ಲ ಒಂದೇ ಪರಿಮಳ ತುಂಬೇ ಇಲ್ಲ. ಈ ಬದುಕು ವೈವಿಧ್ಯಮಯ, ನಿತ್ಯನೂತನ.**

ಹತ್ತು ರೂಪಾಯಿ ಭಿಕ್ಷೆಯನ್ನೂ ಸಂಪಾದಿಸಲು ಆಗದೆ ತನ್ನ ಕೊರತೆಗಳನ್ನೂ, ಕಷ್ಟಗಳನ್ನೂ ಡಿಸೈನ್ ಡಿಸೈನ್ ಆಗಿ ವಿವರಿಸಿಕೊಳ್ಳುವ ಕಲೆ ಗೊತ್ತಿಲ್ಲದ ಅಸಹಾಯಕ ಭಿಕ್ಷುಕನ ಮುಂದೆ ಮತ್ತೊಬ್ಬ ಭಿಕ್ಷುಕ ಎಂಥಾ ಸೂಪರ್ ಸ್ಪೆಷಾಲಿಟಿ ವೆರೈಟಿಯಲ್ಲಿ ಜನರ ಮನಸ್ಸನ್ನು ಕರಗಿಸುತ್ತೇನೆ ನೋಡು! ಎಂದು ತನ್ನ ಪ್ರತಿಭಾ ಸಂಪನ್ನತೆಯಿಂದ ಅವನೆದುರು ಇಪ್ಪತ್ತು ರೂಪಾಯಿ ಭಿಕ್ಷೆ ಸಂಪಾದಿಸಿ ಬೀಗುತ್ತಾನಲ್ಲ, ಆ ಉತ್ಸಾಹ ಮತ್ತು ಸಕ್ಸಸ್ಸೇ 'ಬಾಯಿದ್ದವನು ಬರಗಾಲದಲ್ಲೂ ಗೆದ್ದ' ಎಂಬುದರ ಕರಾಮತ್ತು. ನಾಲಿಗೆಯ ಬಲವಿಲ್ಲದೆ ಸೋತ ಭಿಕ್ಷುಕನ ಎದುರು ಗೆದ್ದವನು ತನ್ನ ಅಂಗೈಯಲ್ಲಿ ಗಾಂಧಿ ತಲೆಯ ನೂರರ ನೋಟನ್ನು ಬೀಳಿಸದಂತೆ ಆಡಿಸುತ್ತಾನಲ್ಲ, ಅದೇ ಅವನಲ್ಲಿನ ವಿಶೇಷ ಐಡೆಂಟಿಟಿ. ಒಟ್ಟಾರೆ ಈ ಐಡೆಂಟಿಟಿ ಎಂಬ ಆತ್ಮತೃಪ್ತಿಗಾಗಿ, ತನ್ನೊಳಗೇ ಕೇಂದ್ರೀಕೃತವಾದ ಶಕ್ತಿ ಸಂಚಯನವನ್ನು ಪ್ರದರ್ಶಿಸಲೆಂದೇ ಜಗತ್ತಿನಲ್ಲಿ ಪ್ರತಿದಿನದ ರಂಗಪ್ರವೇಶ ನಡೆದಿದೆ. ದೊಡ್ಡ ನಾಯಕರ ಮನೆಯ ಮುಂದೆ ಯುವನಾಯಕನೊಬ್ಬ ಹೂಗುಚ್ಛವಿಡಿದು ನಿಲ್ಲದೆ ಹೋದರೆ ಆತನಿಗೆ ಮುಂದೊಂದು ದಿನ ಯಾವುದೇ ಚಿಕ್ಕ ಅಧಿಕಾರವೂ ದೊರೆಯುವುದಿಲ್ಲ. ಅದಕ್ಕಾಗಿ ಸರತಿಯ ಸಾಲಿನಲ್ಲಿ ಸಾವಿರ ಜನರಿದ್ದರೂ ಅವಾರಲ್ಲೂ ಇರದ ಏನೋ ಒಂದು ವಿಶೇಷ ಪ್ರತಿಭೆಯಿಂದ ದೊಡ್ಡವರ ಗಮನ ಸೆಳೆದುಬಿಡುವ ತಂತ್ರಗಳನ್ನು ಹಗಲಿರುಳು ಅವನು ಮಾಡುತ್ತಿರುತ್ತಾನೆ. ಹಾಗೆ ಯೋಚಿಸುವ ತಂತ್ರಗಾರನೊಬ್ಬ ಆಡಳಿತ ಯಂತ್ರದಲ್ಲಿ ಜಾಗ ಗಿಟ್ಟಿಸಿಯೇ ಬಿಡುತ್ತಾನೆ. ನಾನು ನಿಮ್ಮ ಕಟ್ಟಾ ಬೆಂಬಲಿಗ ಎಂಬುದಕ್ಕೆ ಸಾಕ್ಷಿ ಮರಾಮೆಗಳನ್ನು ಒದಗಿಸಲು ಏನೇನು ಕ್ರಿಯಾಶೀಲತೆ ಬೇಕೋ ಅಷ್ಟೆಲ್ಲವನ್ನೂ ಮಾಡುತ್ತಿರುತ್ತಾನೆ. ಆದರೆ ಸರತಿಯ ಸಾಲಿನಲ್ಲಿ ನಿಂತ ಅನೇಕರಿಗೆ ಏನೂ ದಕ್ಕುವುದಿಲ್ಲ. ಕೆಲವರಿಗೆ ಮಾತ್ರ ಅಧಿಕಾರ, ಹಣ, ಕೀರ್ತಿ, ಅಂತಸ್ತು ಐಡೆಂಟಿಟಿ ಎಲ್ಲವೂ ಒದಗಿಬರುತ್ತದೆ. ಮತ್ತದೇ ಬಲವಿದ್ದವನು ಗೆಲ್ಲುತ್ತಾನೆ. ಬಾಯಿದ್ದವನು ಬದುಕುತ್ತಾನೆ. ಕ್ಯೂನಿಂದ ಬೇರ್ಪಟ್ಟು ಕಟ್ಟಿಕೊಂಡ ಹೊಸ ಐಡೆಂಟಿಟಿಯಲ್ಲಿ ಬೀಗುತ್ತಾನೆ.

ಆಗ ಬಲವಿಲ್ಲದವರು, ನಾಲಗೆಯಿದ್ದರೂ ದನಿಯಿಲ್ಲದವರು, ಚಾಲಾಕಿತನ ಮಾಡಲು ಆಗದಿದ್ದವರ ಕಣ್ಣಲ್ಲಿ ಮೋಡ ಕಟ್ಟುತ್ತದೆ. ಅವನಂತೆ ನಾನೂ ಬ್ಯಾನರ್ ಕಟ್ಟಿದೆ, ಪೋಸ್ಟರ್ ಹಚ್ಚಿದೆ, ಪಾಂಫ್ಲೆಟ್ ಹಂಚಿದೆ. ಆದರೆ ನನಗೇಕೆ ಹೀಗೆ? ಅವನೇಕೆ ಹಾಗೆ? ಎಂಬ ಅಂತರಂಗದ ಪ್ರಶ್ನೆಗಳು ಏಳುತ್ತವೆ? ದಶಕಗಳ ಲೆಕ್ಕದಲ್ಲಿ ಮೊಳೆ ಜೋಡಿಸಿದ ಪತ್ರಕರ್ತನೊಬ್ಬ ಇನ್ನೂ ಜೋಡಿಸುತ್ತಲೇ ಇರುತ್ತಾನೆ. ಅದು ಅವನ ಅಕ್ಷರ ಪ್ರತಿಭೆ; ಅವನ ಪಕ್ಕದಲ್ಲೇ ಮೊಳೆ ಜೋಡಿಸಿದವನು, ಮುಂದೊಂದು ದಿನ ಉದ್ಯಮಿಯಾಗುತ್ತಾನೆ. ಕಾರಣ ಇಷ್ಟೆ, ಅವನು ಅಕ್ಷರ ವಿನ್ಯಾಸದಲ್ಲೇ ತನ್ನ ಪಾಂಡಿತ್ಯ ಪ್ರದರ್ಶನ ಮಾಡಿ ಅಲ್ಲೇ ತನ್ನ ಐಡೆಂಟಿಟಿ ಹುಡುಕ ಹೊರಟರೆ ಮತ್ತೊಬ್ಬ ಅಕ್ಷರ ವಿನ್ಯಾಸದ ಜೊತೆಗೆ ವ್ಯವಹಾರ ಚಾತುರ್ಯವನ್ನೂ ವಿಸ್ತರಿಸಿಕೊಳ್ಳುತ್ತಾನೆ. ಅದಕ್ಕೆ ಅವನಿನ್ನೂ ಹಂಗಾಮಿ. ಈತ ಉದ್ಯಮಿ. ಹೇಗೆ ಡ್ರೈವರ್ ಆಗಿದ್ದವನು, ಮುಂದೊಂದು ದಿನ ಅದೇ ಗಾಡಿಗೆ ಮಾಲೀಕನಾಗುತ್ತಾನೋ ಹಾಗೆ ವೈದ್ಯರಾದವರೂ ನರ್ಸಿಂಗ್ ಹೋಂ ಮಾಲೀಕರಾಗುತ್ತಾರೆ. ಐಡೆಂಟಿಟಿಯ ಧಾವಂತವಿಲ್ಲದವರು ತನ್ನ ಹಳೇ ಸಹೋದ್ಯೋಗಿ ಡಾಕ್ಟರ್‌ನ ನರ್ಸಿಂಗ್ ಹೋಂನಲ್ಲೇ ಸ್ಟೆಥಾಸ್ಕೋಪ್ ಹಿಡಿದು ರಾತ್ರಿಪಾಳಿಯಲ್ಲಿ ರೋಗಿಗಳ ನಾಡಿ ಪರೀಕ್ಷೆ ಮಾಡುತ್ತಿರುತ್ತಾರೆ. ಅಂದರೆ ಸೃಷ್ಟಿಯ ನಿಯಮ ಇಷ್ಟೆ, ಕಟ್ಟಿದ ಕಾಚಕ್ಕಿಯೆಲ್ಲ ರಾಗಿಯ ತೆನೆಯಾಗಲ್ಲ, ಎಲ್ಲರ ಮಾತು ಮುತ್ತಾಗಲ್ಲ, ಎಲ್ಲ ನಕ್ಷತ್ರಗಳು ನಾವಾಗಲ್ಲ, ಸಾವಿರ ಜಾತಿಯ ಹೂವಿನಲ್ಲೆಲ್ಲ ಒಂದೇ ಪರಿಮಳ ತುಂಬೇ ಇಲ್ಲ. ಈ ಬದುಕು ವೈವಿಧ್ಯಮಯ, ನಿತ್ಯನೂತನ.

ನಾವೂ ಕೂಡ ಗುಪ್ತರ ಸುವರ್ಣಯುಗದಲ್ಲಿಯೇ ಹುಟ್ಟಿದ್ದಿದ್ದರೆ ಹುಣಸೆಪಚ್ಚಿಯಂತೆ ಚಿನ್ನದ ನಾಣ್ಯಗಳನ್ನು ಚೆಡ್ಡಿ ಜೇಬಿನಲ್ಲಿ ತುಂಬಿಕೊಂಡು ಅಡ್ಡಾಡಬಹುದಿತ್ತು ಎಂಬುದು ಭ್ರಮೆ! ಹರಿದ ಕಾಗದದ ನೋಟನ್ನು ಬ್ಯಾಂಕಿನಲ್ಲಿ ಎಕ್ಸ್‌ಚೇಂಜ್ ಮಾಡಿಸಲು ಕ್ಯೂ ನಿಂತಿರುವುದು ವಾಸ್ತವ. ಅದೇ ನಮ್ಮ ಸ್ಥಿತಿಪ್ರಜ್ಞೆ, ಭ್ರಮೆ ಸುಖ ಕೊಡುತ್ತದೆ ನಿಜ, ಆದರೆ ಸ್ಥಿತಿಪ್ರಜ್ಞೆ ಎಚ್ಚರ ಕಲಿಸುತ್ತದೆ. ಸದಾ ಸ್ಥಿತಿಪ್ರಜ್ಞೆಯಲ್ಲಿದ್ದವನ ಕಿಲಾಡಿತನ ಅವನ ಐಡೆಂಟಿಟಿಗೆ ಸಾಣೆ ಹಿಡಿದು ಅವನು ಬಯಸಿದ್ದನ್ನು ಕಲ್ಪಿಸುತ್ತದೆ. ಪಾಪ ಅದೇ ವಾಸ್ತವದ ಕಟುಸತ್ಯ ಗೊತ್ತಿರದ ಅಮಾಯಕರು ಅದೆಷ್ಟೇ ದುಡಿದರೂ, ಅದೆಷ್ಟೇ ಪ್ರಾಮಾಣಿಕವಾಗಿ ತಮ್ಮನ್ನು ತಾವು ಡೆಕೋರೇಟ್ ಮಾಡಿಕೊಂಡರೂ ಅದು ಮೈತುಂಬುವುದಿಲ್ಲ. ಮಾಡಿದ ಕೆಲಸ ಕಾಳು ಕಟ್ಟುವುದಿಲ್ಲ. ಆದರೂ ಸತತ ಸೋಲುಗಳ ನಡುವೆಯೂ ಅವರು ಸೋಲೊಪ್ಪುವುದಿಲ್ಲ. ಮತ್ತದೇ ರಂಗಭೂಮಿ, ಮತ್ತದೇ ಪಾತ್ರ, ಮತ್ತದೇ ಪ್ರೇಕ್ಷಕರ ಮುಂದೆ ಎರಡನೇ ಷೋಗಾಗಿ ಗೆಜ್ಜೆ ಕಟ್ಟುತ್ತಾರೆ. ಗೆದ್ದೇ ಗೆಲ್ಲುತ್ತೇವೆಂಬ ಭ್ರಮೆಯಲ್ಲಿ; sorry, ಭ್ರಮೆಯಲ್ಲ; ವಾಸ್ತವದಲ್ಲಿ ಹೆಜ್ಜೆ ಹಾಕುತ್ತೇವೆ. ಬಾಯಲ್ಲಿ ಮಾತ್ರ ಇಲ್ಲಿ 'ಬಲವಿದ್ದವನಿಗೆ ಜಯ, ಬಾಯಿದ್ದವನು ಬರಗಾಲದಲ್ಲೂ ಗೆದ್ದ' ಎಂಬ ಡೈಲಾಗ್ ಹೊಡೆಯುತ್ತಿರುತ್ತೇವೆ. ಅದಕ್ಕೆ ಹೇಳೋದು ಭ್ರಮೆ ಮತ್ತು ವಾಸ್ತವಗಳ ವ್ಯತ್ಯಾಸ ತಿಳಿಯದೆ ಗೊಂದಲದಲ್ಲಿರುವ ಅನೇಕರು ಇಲ್ಲಿ ಹೇಳುವ ಮಾತೇನು ಗೊತ್ತ?

ಯಾರು ಏನಾಗಬೇಕಿತ್ತೋ ಅವರು ಅದಾಗದೇ!
ಯಾರು ಏನಾಗಬಾರದಿತ್ತೋ ಅವರೇ ಎಲ್ಲವೂ ಆಗಿಹೋಗಿ!
ಎಲ್ಲವೂ ಆಗಬೇಕಾದವರೂ ಏನೇನೂ ಆಗದೇ ಹೋದಾಗ
ಹಾಡಿಕೊಂಡ ಹಾಡೇ . . . .
ನಾವು ಭಾರತೀಯರು ನಾವೇ ಭಾರತೀಯರು.
ಹಾಗೇ ಉಳಿದು ಹೋದವರ ಕಥೆಯೇ ಭರತಖಂಡದ ಚರಿತ್ರೆ

ಈಗ ಹೇಳಿ ನಮಗೆ ಬೇಕಿರುವುದು ನಮ್ಮನ್ನು ಅತಂತ್ರಕ್ಕೆ ತಳ್ಳುವ ಭ್ರಮೆಯೋ ಅಥವಾ ವಾಸ್ತವದ ಸತ್ಯಕತೆಯೋ? ಯಾವುದಿರಲಿ ಹೇಳಿ ಆಯ್ಕೆ ನಮ್ಮದೇ? ಏನಂತೀರಿ.

ಕೇಂದ್ರ ಸಚಿವ ನಿತಿನ್ ಗಡ್ಕರಿ ದೆಹಲಿಗೆ ವಾಪಸ್



ಮೈಸೂರಿನ ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದ ಗಡ್ಕರಿ ಕುಟುಂಬ

ಮೈಸೂರು, ಜೂ. 13(ಆರ್‌ಕೆ)– ಆರು ದಿನಗಳ ಮೈಸೂರು ಮತ್ತು ಕೊಡಗು ಜಿಲ್ಲೆಯ ಪ್ರವಾಸದ ನಂತರ ಕೇಂದ್ರ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಸೋಮವಾರ ಮಧ್ಯಾಹ್ನ ಕುಟುಂಬದ ಸದಸ್ಯರೊಂದಿಗೆ ದೆಹಲಿಗೆ ಹಿಂದಿರುಗಿದರು.

ಜೂನ್ 8ರಂದು ಚಾರ್ಟರ್ಡ್ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದ್ದ ಅವರು, ಅಂದು ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಮರು ದಿನ ಕೊಡಗಿಗೆ ಭೇಟಿ ನೀಡಿದ್ದ ಅವರು, ಸೋಮವಾರ ಮಧ್ಯಾಹ್ನ ಮೈಸೂರಿಗೆ ಬಂದು ಸುತ್ತೂರು ಮಠದಲ್ಲಿ ಕುಟುಂಬ ಸದಸ್ಯರೊಂದಿಗೆ ಊಟ ಮುಗಿಸಿದ ನಂತರ ಮಧ್ಯಾಹ್ನ 2.15 ಗಂಟೆ ವೇಳೆಗೆ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ನವದೆಹಲಿಗೆ ಪ್ರಯಾಣ ಬೆಳೆಸಿದರು. ಸಂಸದ ಪ್ರತಾಪ್ ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡ ಕೇಬಲ್ ಮಹೇಶ ಹಾಗೂ ಇತರರು ಸುತ್ತೂರು ಮಠದಲ್ಲಿ ಸಚಿವರೊಂದಿಗೆ ಉಪಸ್ಥಿತರಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾತಿ ಜನಗಣತಿ



ಬೆಂಗಳೂರು: ಹಿಂದುಳಿದ ವರ್ಗಗಳ ಓಲೈಕೆಗೆ ಪ್ರಯತ್ನಿಸುತ್ತಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಜಾತಿ ಸಮೀಕ್ಷೆಯನ್ನು ಒಪ್ಪಿಕೊಳ್ಳುವುದಾಗಿ ಎಸ್‌ಸಿ ಭೋವಿ ಸಮುದಾಯಕ್ಕೆ ಭರವಸೆ ನೀಡಿದ್ದಾರೆ.

ಬನ್ನೇರುಘಟ್ಟದಲ್ಲಿ ನಡೆದ ಭೋವಿ ಸಮುದಾಯದ ಸಮಾವೇಶದಲ್ಲಿ ಮಾತನಾಡಿದ ಸಿದ್ದರಾಮಯ್ಯ, ನಾನು ಸಿಎಂ ಆಗಿದ್ದಾಗ ರೂ. 162 ಕೋಟಿ ಅಂದಾಜು ವೆಚ್ಚದಲ್ಲಿ ಸಾಮಾಜಿಕ–ಆರ್ಥಿಕ ಸಮೀಕ್ಷೆಯನ್ನು ಆಯೋಗ ಮಾಡಿತ್ತು. ನಂತರ ಬಂದ ಸರ್ಕಾರಗಳು ಇದನ್ನು ಇನ್ನೂ ಒಪ್ಪಿಕೊಂಡಿಲ್ಲ. ಮತ್ತೆ ಅಧಿಕಾರಕ್ಕೆ ಬಂದರೆ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ ಎಂದರು. ಎಲ್ಲ ಚುನಾವಣೆಗಳಲ್ಲೂ ಸಮುದಾಯ ಬೆಂಬಲ ನೀಡಿರುವುದಾಗಿ ತಿಳಿಸಿದ ಸಿದ್ದರಾಮಯ್ಯ, ಭೋವಿ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದೇನೆ ಎಂದರು. ಆರ್ಯ–ದ್ರಾವಿಡ ಮೂಲದ ತಮ್ಮ ಅಂಶವನ್ನು ತಳ್ಳಿಹಾಕಿದ ಅವರು, ನಾನು ಈ ಸತ್ಯವನ್ನು ಬಹಿರಂಗಪಡಿಸಿದಾಗ, ನನ್ನನ್ನು ಹಿಂದೂ ವಿರೋಧಿ ಮತ್ತು ಆರ್‌ಎಸ್‌ಎಸ್ ವಿರೋಧಿ ಎಂದು ಬ್ರ್ಯಾಂಡ್ ಮಾಡಲಾಯಿತು ಆದರೆ ಇದರ ಬಗ್ಗೆ ಎಲ್ಲರೂ ಬಲವಾಗಿ ಮಾತನಾಡಬೇಕು ಎಂದರು. ಬಡ್ತಿಯಲ್ಲಿ ಮೀಸಲಾತಿ, ಎಸ್‌ಸಿಪಿ/ಟಿಎಸ್‌ಪಿ ಯೋಜನೆಗಳಿಗೆ ಹಣ ಹೆಚ್ಚಳ ಮತ್ತು ಹಣವನ್ನು ಖರ್ಚು ಮಾಡಲು ವಿಫಲರಾದ ಅಧಿಕಾರಿಗಳನ್ನು ಶಿಕ್ಷಿಸುವ ಕಾನೂನು ಸೇರಿದಂತೆ ಸಿಎಂ ಆಗಿದ್ದಾಗ ಅವರು ಮಾಡಿದ ಕೆಲಸಗಳನ್ನು ತಿಳಿಸಿದರು.



ಸೋಮವಾರ ನಡೆದ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮಾತೃ ಮಂಡಳಿ ಶಾಲೆ ಬಳಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ರವೀಂದ್ರ, ಚಿಕ್ಕವೆಂಕಟು, ಆಶ್ರಯ ಸಮಿತಿ ಸದಸ್ಯ ಮಹೇಶ್, ವಾರ್ಡ್ ಅಧ್ಯಕ್ಷ ಮಂಜು,ಕಿರಣ್ ಬೋಲಾರ್, ಗಿರೀಶ್, ಗೋಪಾಲ, ಹರೀಶ್, ವೇಣು, ನಾಗೇಶ್, ಶ್ರೀನಿವಾಸ್, ಪ್ರಮೀಳಾ, ಕವಿತಾ ಇನ್ನಿತರರಿದ್ದರು.

ಮೇಕೆದಾಟು ಯೋಜನೆಗೆ ವಿರೋಧಿಸಿ ಪ್ರಧಾನಿಗೆ ಪತ್ರ ಬರೆದ ತ.ನಾಡು ಸಿಎಂ



ನವದೆಹಲಿ: ಕರ್ನಾಟಕದ ಮೇಕೆದಾಟು ಡ್ಯಾಂ ನಿರ್ಮಾಣಕ್ಕೆ ತಮಿಳುನಾಡು ಪದೇ ಪದೆ ಅಡ್ಡಗಾಲು ಹಾಕುತ್ತಲೇ ಇದ್ದು ಇದೀಗ ಪ್ರಧಾನಿ ನರೇಂದ್ರ ಮೋದಿಗೆ ತಮಿಳುನಾಡು ಸಿಎಂ ಸ್ಟಾಲಿನ್ ಪತ್ರ ಬರೆದಿದ್ದಾರೆ.

ಮೇಕೆದಾಟು ಡ್ಯಾಂ ನಿರ್ಮಾಣ ವಿರೋಧಿಸಿ ತಮಿಳುನಾಡು ಸಿಎಂ ಸ್ಟಾಲಿನ್ ಪತ್ರ ಬರೆದಿದ್ದಾರೆ. ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ಬರೆವವರೆಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ಚರ್ಚೆ ನಡೆಸಬಾರದು. ಮೇಕೆದಾಟು ಡ್ಯಾಮ್ ಬಗ್ಗೆ ಚರ್ಚೆ ನಡೆಸಬಾರದು ಜಲಶಕ್ತಿ ಇಲಾಖೆಗೆ ಸೂಚನೆ ನೀಡಬೇಕೆಂದು ಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿಗೆ ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅಂತಿಮ ಘಳಿಗೆವರೆಗೂ ಬಿರುಸಿನ ಮತಯಾಚನೆ





ಮೈಸೂರು,ಜೂ.13(ಎಂಟಿವೈ, ಎಂಕೆ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ವಿವಿಧ ಪಕ್ಷ ಹಾಗೂ ಪಕ್ಷೇತರ ಬೆಂಬಲಿಗರು, ಕಾರ್ಯಕರ್ತರು ಅಂತಿಮ ಘಳಿಗೆವರೆಗೂ ಮತಯಾಚನೆ ಮಾಡಿದರು.

ಚುನಾವಣೆಯನ್ನು ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪ್ರತಿಷ್ಠೆಯಾಗಿ ಪರಿಗಣಿಸಿದ್ದವಲ್ಲದೆ, ಮೂರು ಪಕ್ಷಗಳ ಘಟಾನುಘಟಿ ನಾಯಕರು ತಮ್ಮ ಅಭ್ಯರ್ಥಿಗಳ ಪರವಾಗಿ ಬೆಂಬಲ ಯಾಚಿಸಿದ್ದರು. ಈ ಚುನಾವಣೆಯನ್ನು ಶತಾಯ ಗತಾಯ ಗೆಲ್ಲಲೇಬೇಕು ಎಂದು ಮೂರು ಪಕ್ಷಗಳು, ಪಕ್ಷೇತರರು ಪಣತೊಟ್ಟು, ಪ್ರತಿಷ್ಠೆಯಾಗಿ ಸ್ವೀಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ನಡೆದ ಚುನಾವಣೆಯಲ್ಲಿ ಮೂರು ಪಕ್ಷಗಳ ಕಾರ್ಯಕರ್ತರು ಸಾರ್ವತ್ರಿಕ ಚುನಾವಣೆಯನ್ನು ಮೀರಿಸುವಂತೆ ಅಂತಿಮ ಘಳಿಗೆಯಲ್ಲಿ ಮತದಾರರ ಓಲೈಸಲು ಕಸರತ್ತು ನಡೆಸಿದರು.

ಮತಗಟ್ಟೆಗಳತ್ತ ಸುತ್ತು: ಮೈಸೂರು ನಗರದಲ್ಲಿ ಸ್ಥಾಪಿಸಿದ್ದ 32 ಮತಗಟ್ಟೆಗಳಿಗೂ ಭೇಟಿ ನೀಡಿದ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿತ ನಾಯಕರು ಕಾರ್ಯಕರ್ತರನ್ನು ಹುರಿದುಂಬಿಸಿದರಲ್ಲದೆ, ಮೊದಲ ಪ್ರಾಶಸ್ತ್ಯ ಮತ ನೀಡುವಂತೆ ಮನವೊಲಿಸುವ ಪ್ರಯತ್ನ ನಡೆಸಿದರು. ಮಾದರಿ ಮತ ಪತ್ರ ನೀಡಿ ಮತದಾನ ಮಾಡುವ ವಿಧಾನ ಕುರಿತು ಅರಿವು ಮೂಡಿಸಿದರು. ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರವಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಹಿರಿಯ ಮುಖಂಡ ಕೆ.ಮರೀಗೌಡ, ನಗರ ಪಾಲಿಕೆ ಸದಸ್ಯರು ಸೇರಿದಂತೆ ಹಲವು ಮುಖಂಡರು ಮತಯಾಚಿಸಿದರು.

> **ಮತದಾರರಿಗೆ ಟೋಕನ್ ಮೂಲಕ ಹಣ ನೀಡಲಾಗುತ್ತಿದೆ**
>
> ದಕ್ಷಿಣ ಪದವೀಧರರ ಚುನಾವಣೆಯಲ್ಲೂ ಹಣದ ಆಮಿಷವೊಡ್ಡಲಾಗುತ್ತಿದೆ. ತಮ್ಮ ಪಕ್ಷದ ಅಭ್ಯರ್ಥಿಗೆ ಮತ ಹಾಕುವಂತೆ ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಆಮಿಷವೊಡ್ಡುತ್ತಿವೆ. ಟೋಕನ್ ನೀಡಿ, ಮತ ಹಾಕಿದ ನಂತರ ಒಬ್ಬೊಬ್ಬರಿಗೆ 2 ಸಾವಿರ ರೂ. ನೀಡಲಾಗುತ್ತಿದೆ. ಹೆಚ್.ಡಿ.ಕೋಟೆ ತಾಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರಿಗೆ ಹೀಗೆ ಟೋಕನ್ ವಿತರಣೆ ಮಾಡಿದ್ದಾರೆ. ಮತಗಟ್ಟೆ ಬಳಿ ಟೋಕನ್ ತೋರಿಸಿದವರಿಗೆ 2 ಸಾವಿರ ರೂ. ನೀಡುವ ಮೂಲಕ ಭ್ರಷ್ಟಾಚಾರಕ್ಕೆ ಮಣೆ ಹಾಕುತ್ತಿದ್ದಾರೆ.
>
> -ಚಿಕ್ಕಬೋರೇಗೌಡ, ಪ್ರಧಾನ ಕಾರ್ಯದರ್ಶಿ, ರೈತ ಸಂಘ

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ, ನಗರ ಪಾಲಿಕೆ ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಪ್ರಮೀಳಾ ಭರತ್, ಸೌಮ್ಯ ಉಮೇಶ್ ಸೇರಿದಂತೆ ಹಲವು ನಾಯಕರು ಕಡೆ ಹಂತದ ಮತಯಾಚಿಸಿದರು. ಕೆಲವೆಡೆ ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ಒಟ್ಟಾಗಿ ನಿಂತು ಮತಯಾಚಿಸುವ ಮೂಲಕ ಗಮನ ಸೆಳೆದರು.

ಗ್ರಾಮೀಣ ಪ್ರದೇಶದಲ್ಲಿ ಬಲು ಜೋರು: ಚುನಾವಣೆ ನಗರ ಪ್ರದೇಶಕ್ಕಿಂತ ತಾಲೂಕು ಕೇಂದ್ರಗಳಲ್ಲಿ ಹೆಚ್ಚು ಕಾವು ಪಡೆದುಕೊಂಡಿತ್ತು. ಜಿಲ್ಲೆಯ ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಸರಗೂರು, ನಂಜನಗೂಡು, ತಿ.ನರಸೀಪುರ ತಾಲೂಕಿನ ಮತಗಟ್ಟೆ ಮುಂದೆ ಅಭ್ಯರ್ಥಿಗಳ ಬೆಂಬಲಿಗರು ಅಂತಿಮ ಹಂತದ ಓಲೈಕೆಯಲ್ಲಿ ತೊಡಗಿದ್ದು ಕಂಡು ಬಂದಿತು. ಮತಗಟ್ಟೆ ಬಳಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ, ರೈತಸಂಘ, ಎಸ್‌ಡಿಪಿಐ, ಬಿಎಸ್ಪಿ ಹಾಗೂ ಪಕ್ಷೇತರ ಅಭ್ಯರ್ಥಿ ವಿನಯ್ ಬೆಂಬಲಿಗರು ಮತದಾನ ಮಾಡಲು ಬರುವ ಪದವೀಧರರತ್ತ ಮುಗಿಬಿದ್ದು, ತಮ್ಮ ಅಭ್ಯರ್ಥಿಗೆ ಮತ ಹಾಕುವಂತೆ ದುಂಬಾಲು ಬೀಳುತ್ತಿದ್ದ ದೃಶ್ಯ ಕಂಡು ಬಂದಿತು.

ಮತಗಟ್ಟೆ ಬಳಿ ಪೆಂಡಾಲ್ ಹಾಕಿಕೊಂಡು ಭಿತ್ತಿ ಪತ್ರ ನೀಡುವ ಮೂಲಕ ಮತಯಾಚಿಸಿದರು. ಎಲ್ಲಿಯೂ ಅಹಿತಕರ ಘಟನೆ ನಡೆದ ಬಗ್ಗೆ ವರದಿಯಾಗಿಲ್ಲ.

ಕಾರ್ಯಕರ್ತರಿಗೆ ಭರ್ಜರಿ ಸೇವೆ ಅಭ್ಯರ್ಥಿಗಳ ಬೆಂಬಲಿಗರಿಗೆ ಆಯಾ ಪಕ್ಷಗಳ ಮುಖಂಡರಿಂದ ಭರ್ಜರಿ ಆತಿಥ್ಯ ನೀಡಲಾಯಿತು. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚಿಸುತ್ತಿದ್ದ ಕಾರ್ಯಕರ್ತರಿಗೆ ಪೆಂಡಾಲ್‌ನಲ್ಲಿಯೇ ಊಟ, ಉಪಾಹಾರ, ಪಾನೀಯ, ಕಾಫಿ–ಟಿ, ಹಾಲು, ಹಣ್ಣು ಸೇರಿದಂತೆ ತರಾವರಿ ತಿಂಡಿ–ತಿನಿಸನ್ನು ಪೂರೈಸುವ ಮೂಲಕ ಉಪಚರಿಸಿದರು.

ಹಸಿರು ಸೀರೆಯಲ್ಲಿ ಮಿಂಚಿದ ಜೆಡಿಎಸ್ ಕಾರ್ಯಕರ್ತರು: ಮತಗಟ್ಟೆಗಳ ಬಳಿ ಹಸಿರು ಸೀರೆತೊಟ್ಟ ಜೆಡಿಎಸ್‌ನ ಮಹಿಳಾ ಕಾರ್ಯಕರ್ತರು ಎಲ್ಲರ ಗಮನ ಸೆಳೆದರು. ಮತ ನೀಡಲು ಬರುತ್ತಿದ್ದ ಮತದಾರರನ್ನು ಕರೆದು ಮಾಹಿತಿ ನೀಡುತ್ತಿದ್ದ ಜೆಡಿಎಸ್ ಕಾರ್ಯಕರ್ತರು ಸಮವಸ್ತ್ರ ಧರಿಸಿ ಮಿಂಚಿದರು.

ಟೋಕನ್ ವ್ಯವಸ್ಥೆ ಕೆಲವೆಡೆ ಮತದಾನ ಮಾಡಲು ಬಂದ ಪದವೀಧರ ಮತದಾರರಿಗೆ ಅಭ್ಯರ್ಥಿಗಳ ಬೆಂಬಲಿಗರು ಟೋಕನ್ ನೀಡುತ್ತಿದ್ದರು. ಮತದಾನದ ನಂತರ ಆ ಟೋಕನ್ ವಾಪಸ್ ನೀಡಿದರೆ ಉಡುಗೊರೆ ಅಥವಾ ಹಣ ನೀಡಲಾಗುತ್ತದೆ ಎಂದು ಕಾರ್ಯಕರ್ತರು ಮಾತನಾಡಿಕೊಳ್ಳುತ್ತಿದ್ದರು.

ಮೈಸೂರು ಜಿಲ್ಲೆಯ ಮತದಾನದ ವಿವರ

ತಾಲೂಕು	ಪುರುಷ	ಮಹಿಳೆ	ಇತರರು	ಒಟ್ಟು ಮತದಾರರು	ಚಲಾವಣೆಯಾದ ಮತ: ಪುರುಷ	ಮಹಿಳೆ	ಇತರರು	ಒಟ್ಟು	ಶೇಖಡ
ಪಿರಿಯಾಪಟ್ಟಣ	1,836	896	–	2,732	1,476	606	–	2,082	76.21
ಕೆ.ಆರ್.ನಗರ	3,040	1,807	–	4,847	2,251	1,204	–	3,455	71.28
ಹುಣಸೂರು	2,295	1,381	–	3,676	1,843	950	–	2,793	75.98
ಹೆಚ್.ಡಿ.ಕೋಟೆ	1,848	714	–	2,562	1,451	494	–	1,945	75.92
ನಂಜನಗೂಡು	2,370	1,332	–	3,702	1,810	921	–	2,731	73.77
ಮೈಸೂರು	7,125	5,094	1	12,520	4,620	2,691	–	7,311	59.83
ಟಿ.ನರಸೀಪುರ	3,070	1,703	3	4,776	2,110	1,043	–	3,153	66.02
ಮೈಸೂರು ನಗರ	12,497	11,169	5	23,671	8,810	7,079	–	15,889	67.12
ಒಟ್ಟು	34,081	24,096	9	58,186	24,371	14,988	–	39,359	67.64

ಮಂಡ್ಯ ಜಿಲ್ಲೆಯ ಮತದಾನದ ವಿವರ

ತಾಲೂಕು	ಪುರುಷ	ಮಹಿಳೆ	ಇತರರು	ಒಟ್ಟು ಮತದಾರರು	ಚಲಾವಣೆಯಾದ ಮತ: ಪುರುಷ	ಮಹಿಳೆ	ಇತರರು	ಒಟ್ಟು	ಶೇಖಡ
ಕೆ.ಆರ್.ಪೇಟೆ	2,123	1,203	–	3,326	1,602	851	–	2,453	73.75
ನಾಗಮಂಗಲ	1,678	1,281	–	2,959	1,264	933	–	2,197	74.25
ಪಾಂಡವಪುರ	2,145	1,560	–	3,705	1,696	1,142	–	2,838	76.60
ಮಂಡ್ಯ	8,441	7,479	5	15,925	5,841	4,719	1	10,568	66.36
ಮದ್ದೂರು	5,586	4,773	1	10,360	4,216	3,311	–	7,527	72.65
ಶ್ರೀರಂಗಪಟ್ಟಣ	1,837	1,466	2	3,307	1,357	928	–	2,280	68.94
ಮಳವಳ್ಳಿ	4,623	3,093	4	7,720	3,501	1,989	–	5,190	67.23
ಒಟ್ಟು	26,433	20,857	12	47,302	19,179	13,873	1	33,050	69.88

ಚಾ.ನಗರ ಜಿಲ್ಲೆಯ ಮತದಾನದ ವಿವರ

ತಾಲೂಕು	ಪುರುಷ	ಮಹಿಳೆ	ಇತರರು	ಒಟ್ಟು ಮತದಾರರು	ಚಲಾವಣೆಯಾದ ಮತ: ಪುರುಷ	ಮಹಿಳೆ	ಇತರರು	ಒಟ್ಟು	ಶೇಖಡ
ಗುಂಡ್ಲುಪೇಟೆ	1,632	744	–	2,381	1,222	494	–	1,716	72.07
ಚಾಮರಾಜನಗರ	2595	1533	2	4130	1910	1015	–	2925	70.82
ಯಳಂದೂರು	853	452	–	1305	717	353	–	1070	81.99
ಕೊಳ್ಳೇಗಾಲ	1651	1010	–	2661	1251	681	–	1932	78.60
ಹನೂರು	1176	494	–	1670	907	343	–	1250	74.85
ಒಟ್ಟು	7912	4233	2	12147	6007	2886	–	8893	73.21

ಹಾಸನ ಜಿಲ್ಲೆಯ ಮತದಾನದ ವಿವರ

ತಾಲೂಕು	ಪುರುಷ	ಮಹಿಳೆ	ಇತರರು	ಒಟ್ಟು ಮತದಾರರು	ಚಲಾವಣೆಯಾದ ಮತ: ಪುರುಷ	ಮಹಿಳೆ	ಇತರರು	ಒಟ್ಟು	ಶೇಖಡ
ಬೇಲೂರು	1169	721	–	1890	949	546	–	1495	79.10
ಅರಸೀಕೆರೆ	1842	1161	–	3003	1531	873	–	2404	80.05
ಹಾಸನ	4505	3976	1	8482	3273	2606	–	5879	69.31
ಆಲೂರು	534	280	–	814	437	232	–	669	82.19
ಸಕಲೇಶಪುರ	760	586	–	1346	568	408	–	976	72.51
ಅರಕಲಗೂಡು	1263	665	–	1928	1056	484	–	1540	79.88
ಹೊಳೆನರಸೀಪುರ	1236	782	–	2018	918	610	–	1598	79.19
ಚನ್ನರಾಯಪಟ್ಟಣ	2651	2120	–	4771	2011	1427	–	3438	72.06
ಒಟ್ಟು	13960	10291	1	24252	10813	7186	–	17999	74.22


ಪ್ರಮುಖರಿಂದ ಮತ ಚಲಾವಣೆ...



ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು



ಸಂಸದ ಶ್ರೀನಿವಾಸ್ ಪ್ರಸಾದ್



ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್




ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಮುಖಂಡರಿಂದ ಮತ ಚಲಾವಣೆ...



ಸಂಸದ ಪ್ರತಾಪ್ ಸಿಂಹ



ಶಾಸಕ ಎಸ್.ಎ.ರಾಮದಾಸ್



ಪಕ್ಷೇತರ ಅಭ್ಯರ್ಥಿ ಪ್ರಸನ್ನ ಎನ್.ಗೌಡ



ಬಿಜೆಪಿ ಮುಖಂಡ ಆರ್. ರಘು ಕೌಟಿಲ್ಯ



ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ



ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ

ಗೆಲುವಿನ ನಿರೀಕ್ಷೆಯಲ್ಲಿ ಅಭ್ಯರ್ಥಿಗಳು

ಮೈಸೂರು, ಜೂ. 13(ಆರ್‌ಕೆ)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣಾ ಮತದಾನ ಪ್ರಕ್ರಿಯೆ ಮುಗಿದಿದ್ದು, ಕಣದಲ್ಲಿರುವ ಪ್ರಮುಖ ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳೂ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

ಎಂ.ವಿ. ರವಿಶಂಕರ್: ಮೈಸೂರು ನಗರ ಹಾಗೂ ಜಿಲ್ಲೆ ಸೇರಿದಂತೆ ಕ್ಷೇತ್ರದಾದ್ಯಂತ ಉತ್ತಮ ಮತದಾನವಾಗಿದ್ದು, ಬಿಜೆಪಿ ಪರ ಅಲೆ ಇರುವ ಕಾರಣ ತಾವು ಮೊದಲ ಪ್ರಾಶಸ್ತ್ಯದ



ಮತಗಳಿಂದಲೇ ಗೆಲುವು ಸಾಧಿಸುತ್ತೇನೆಂಬ ವಿಶ್ವಾಸವಿದೆ ಎಂದು ಬಿಜೆಪಿ ಅಭ್ಯರ್ಥಿ ಎಂ.ವಿ. ರವಿಶಂಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಜನಪ್ರಿಯ ಯೋಜನೆಗಳು, ರಾಜ್ಯ ಸರ್ಕಾರದ ಸಾಧನೆಗಳ ಜೊತೆಗೆ ಬಿಜೆಪಿ ಪರ ಪದವೀಧರರ ಒಲವು ಇರುವುದರಿಂದ ದಕ್ಷಿಣ ಪದವೀಧರರ ಚುನಾವಣೆಯಲ್ಲಿ ತಾವು ಜಯಶೀಲರಾಗುವುದು ನಿಶ್ಚಿತ ಎಂದ ಅವರು, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಪಕ್ಷದ ಕಾರ್ಯಕರ್ತರು, ಮುಖಂಡರೆಲ್ಲರೂ ಒಂದಾಗಿ ಕೆಲಸ ಮಾಡಿರುವುದರಿಂದ ಈ ಬಾರಿ ಗೆಲುವಿನ ಆಶಾಭಾವನೆ ಹೆಚ್ಚಾಗಿದೆ ಎಂದು ರವಿಶಂಕರ್ ನುಡಿದರು.

ಹೆಚ್.ಕೆ. ರಾಮು: ಹಲವು ಜನಪರ ಕಾರ್ಯಕ್ರಮ ನೀಡಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಆಡಳಿತ, ಪಕ್ಷದ ಶಾಸಕರು, ವಿಧಾನಪರಿಷತ್ ಸದ



ಸ್ಯರು, ಪಕ್ಷದ ಕಾರ್ಯಕರ್ತರ ಪರಿಶ್ರಮ ಹಾಗೂ ಸರ್ಕಾರಿ ನೌಕರರ ಸಂಘದಲ್ಲಿ ತಾನು ಮಾಡಿದ ಕೆಲಸಗಳು ನನ್ನ ಗೆಲುವಿಗೆ ಸಹಕಾರಿಯಾಗುತ್ತವೆಯಲ್ಲದೆ, ಪದವೀಧರರಿಗೆ ಸ್ಪಂದಿಸಿರುವ ನನ್ನನ್ನು ಕೈಬಿಟ್ಟಿಲ್ಲ ಎಂದು ಜೆಡಿಎಸ್ ಅಭ್ಯರ್ಥಿ ಹೆಚ್.ಕೆ. ರಾಮು ತಿಳಿಸಿದ್ದಾರೆ.

ಪ್ರತಿಯೊಬ್ಬ ಪದವೀಧರರನ್ನು ಸಂಪರ್ಕಿಸಿ ಮತ ಯಾಚಿಸಿದ್ದೇನೆ. ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆ ಮತಗಳು ಬರುತ್ತವೆ ಹಾಗೆಯೇ ಚಾಮರಾಜನಗರ ಜಿಲ್ಲೆಯಲ್ಲೂ ಜೆಡಿಎಸ್ ಪರ ಮತದಾರರು ಒಲವು ತೋರಿದ್ದು, ಮೊದಲ ಪ್ರಾಶಸ್ತ್ಯದ ಮತಗಳಲ್ಲೇ ಗೆಲುವು ಸಾಧ್ಯ ಎಂದು ಅವರು ನುಡಿದರು.

ಮಧು ಜಿ. ಮಾದೇಗೌಡ: ಮೈಸೂರು ಹಾಗೂ ಮಂಡ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಮತ ಚಲಾವಣೆಯಾಗಿದೆ. ಉಳಿದೆರಡೂ ಜಿಲ್ಲೆಯಲ್ಲೂ ಕಾಂಗ್ರೆಸ್‌ಗೆ ಉತ್ತಮ ಬೆಂಬಲ



ವಿದೆ. ನಮ್ಮ ತಂದೆಯವರ ನಿರಂತರ ಕಾವೇರಿ ನದಿ ನೀರಿನ ಹೋರಾಟ, ನನ್ನ ಶೈಕ್ಷಣಿಕ ಸಂಸ್ಥೆ ಮೂಲಕ ಜನಸೇವೆ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನಪ್ರಿಯ ಆಡಳಿತ ಮತ್ತು ಕಾಂಗ್ರೆಸ್ ಪಕ್ಷದ ವರ್ಚಸ್ಸು ನನ್ನ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಮಧು ಜಿ. ಮಾದೇಗೌಡರು ಪ್ರತಿಕ್ರಿಯಿಸಿದ್ದಾರೆ.

ಕಳೆದ ಎರಡು ದಶಕಗಳಿಂದ ವಿದ್ಯಾರ್ಥಿಗಳು, ಶಿಕ್ಷಕರೊಂದಿಗಿನ ಒಡನಾಟ, ಪದವೀಧರರ ಸೇವೆಯಿಂದಾಗಿ ನನ್ನನ್ನು ಈ ಬಾರಿ ಮತದಾರರು ಬೆಂಬಲಿಸಿದ್ದಾರೆಂಬ ನಂಬಿಕೆ ಇದೆ ಎಂದು ಅವರು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಪ್ರಸನ್ನ ಎನ್. ಗೌಡ: ಹೊಸ ನಡೆ–ನುಡಿಗೆ ಮತದಾರರು ಬೆಂಬಲ ನೀಡಿದ್ದಾರೆ. 90 ಸಾವಿರ ಮತದಾರರ ಮನೆಗಳಿಗೆ ಖುದ್ದು ಭೇಟಿ ನೀಡಿ ಮತಯಾಚನೆ



ಮಾಡಿದ್ದೇನೆ. ಇದರಿಂದಾಗಿ ಮತದಾನವು ಹೆಚ್ಚಾಗಿ ನಡೆದಿದ್ದು, ಮತದಾರರು ನನ್ನನ್ನು ಬೆಂಬಲಿಸಿದ್ದಾರೆ ಎಂಬ ವಿಶ್ವಾಸ ಮೂಡಿದೆ. ಮೈಸೂರು ನಗರದಲ್ಲಿನ 10ಕ್ಕೂ ಹೆಚ್ಚು ಮತಗಟ್ಟೆಗಳಿಗೆ ಭೇಟಿ ನೀಡಿ ಕಡೆ ಹಂತದ ಮತಯಾಚನೆ ನಡೆಸಿದ್ದೇನೆ. ನೂರಾರು ಮಂದಿ ಪ್ರಗತಿಪರ ಮುಖಂಡರು, ರೈತ ಸಂಘಟನೆಗಳ ಕಾರ್ಯಕರ್ತರು ನನ್ನ ಪರವಾಗಿ ಕೆಲಸ ಮಾಡಿದ್ದು, ಗೆಲುವಿನ ನಿರೀಕ್ಷೆಯಲ್ಲಿದ್ದೇನೆ ಎಂದರು.

ಮದ್ಯ ಅಧಿಕೃತ ನಿಷೇಧ: ಅನಧಿಕೃತ ಮದ್ಯ ಮಾರಾಟ!

ಮೈಸೂರು, ಜೂ.13(ಎಂಕೆ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮದ್ಯ ಮಾರಾಟ ನಿಷೇಧಿಸಿದ್ದರೂ ಕದ್ದು–ಮುಚ್ಚಿನ ಮದ್ಯ ಮಾರಾಟಕ್ಕೆ ಮೈಸೂರಿನ ಪ್ರಜ್ಞಾವಂತ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜೂ.11ರ ಸಂಜೆ 5 ಗಂಟೆಯಿಂದ ಜೂ.13ರ ರಾತ್ರಿ 12 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಿ ಅಬಕಾರಿ ಇಲಾಖೆ ಆದೇಶ ಹೊರಡಿಸಿದ್ದರೂ ಕೆಲವೆಡೆ ರಾಜಾರೋಷವಾಗಿ ಮದ್ಯ ಮಾರಾಟ ಮಾಡಲಾಗಿದೆ. ಸಂಜೆ 7 ರಿಂದ ಮುಂಜಾನೆ 3 ಗಂಟೆಯವರೆಗೂ ಮಾರಾಟವಾಗುತ್ತಿದ್ದರೂ ಕೇಳುವವರೇ ಇಲ್ಲದಂತಾಗಿದೆ ಎಂದು ದೂರಿದ್ದಾರೆ.


ಆದೇಶ ನೀಡುವ ಅಬಕಾರಿ ಇಲಾಖೆ ಅಧಿಕಾರಿಗಳು ಆದೇಶ ಹೊರಡಿಸಿ ಸುಮ್ಮನಾಗುತ್ತಾರೆಯೇ ಹೊರತು ಅಕ್ರಮ ಮದ್ಯ ಮಾರಾಟಗಾರರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕ್ರಮ ಜರುಗಿಸುವುದನ್ನು ಮರೆತಿದ್ದಾರೆ. ಅಲ್ಲದೆ ದಿನದ 24 ಗಂಟೆಯೂ ಗಸ್ತು ತಿರುಗುವ ಪೊಲೀಸರು ತಮಗೆ ಸಂಬಂಧವೇ ಇಲ್ಲದಂತೆ ವರ್ತಿಸುತ್ತಾರೆ. ಈ ರೀತಿಯಾದರೆ ಮದ್ಯ ನಿಷೇಧಿಸಿ ಆದೇಶ ಮಾಡುವುದಾರೂ ಏಕೆ? ಎಂದು ಪ್ರಶ್ನಿಸಿದ್ದಾರೆ.

ದುಪ್ಪಟ್ಟು ವಸೂಲಿ: ಅಕ್ರಮವಾಗಿ ಮದ್ಯ ಮಾರಾಟ ಮಾಡುವುದಲ್ಲದೇ ದುಪ್ಪಟ್ಟು ಬೆಲೆಯಲ್ಲಿ ಮದ್ಯ ಮಾರಾಟ ಮಾಡಿದ್ದಾರೆ. 100 ರೂ. ಇದ್ದ ಬಾಟಲ್‌ಗಳನ್ನು 200 ರೂ.ಗೆ ಮಾರಾಟ ಮಾಡಲಾಗಿದ್ದು, ಗ್ರಾಹಕರಿಂದ ಸುಲಿಗೆ ಮಾಡಲಾಗಿದೆ. ಮೈಸೂರು ನಗರದ ಗ್ರಾಮಾಂತರ ಬಸ್ ನಿಲ್ದಾಣದ ಎದುರು ಸೇರಿದಂತೆ ಕೆಲವೆಡೆ ಮದ್ಯ ಮಾರಾಟ ಯಾವುದೇ ಅಡ್ಡಿ ಆತಂಕವಿಲ್ಲದೆ ನಡೆದಿದೆ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಕಲಿ ಬಾಟಲ್‌ಗಳ ಹಾವಳಿ: ನಿಷೇಧದಿಂದಾಗಿ ಮದ್ಯಕ್ಕೆ ಬೇಡಿಕೆಯೂ ಹೆಚ್ಚಾಗಿರಲಿದೆ ಎಂಬುದನ್ನರಿತ ಕೆಲವರು ನಕಲಿ ಮದ್ಯದ ಬಾಟಲ್‌ಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈಗಲಾದರೂ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.



ಹಸುಗೂಸಿನೊಂದಿಗೆ ಮತಗಟ್ಟೆಗೆ ತೆರಳಿ ಮತದಾನ ಮಾಡಿದ ಪದವೀಧರೆ



ಅಂತಿಮ ಘಳಿಗೆಯಲ್ಲೂ ಸಂಸದ ಪ್ರತಾಪ್ ಸಿಂಹ ಮತಯಾಚನೆ

ಮೈಸೂರು–ಕಡಕೊಳ ನಡುವೆ ಜಾಹೀರಾತು ಫಲಕ ತೆರವಿಗೆ ಒಂದು ದಿನದ ಗಡುವು

ತಪ್ಪಿದರೆ ನಾಳೆಯಿಂದ ತೆರವು ಕಾರ್ಯಾಚರಣೆ: ಸಂಸದ ಪ್ರತಾಪ್ ಸಿಂಹ ಎಚ್ಚರಿಕೆ



ಮೈಸೂರು, ಜೂ.13(ಎಸ್‌ಬಿಡಿ)– ಮೈಸೂರು ನಗರದಿಂದ ಕಡಕೊಳದವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ನಾಳೆ(ಜೂ.14) ಸ್ವಯಂ ತೆರವುಗೊಳಿಸುವಂತೆ ಸಂಸದ ಪ್ರತಾಪ್ ಸಿಂಹ ತಾಕೀತು ಮಾಡಿದ್ದಾರೆ.

ಅಧಿಕಾರಿಗಳ ತಂಡದೊಂದಿಗೆ ಸೋಮವಾರ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಅಳವಡಿಸಿರುವ ಫಲಕಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಆರಂಭಿಸಿದ ಸಂಸದ ಪ್ರತಾಪ್ ಸಿಂಹ, ಸಂಬಂಧಪಟ್ಟವರೇ ಫಲಕ ತೆರವುಗೊಳಿಸಲು ಗಡುವು ನೀಡಿದರು.

ಈ ವೇಳೆ ಮಾತನಾಡಿದ ಅವರು, ವರ್ಷದ ಹಿಂದೆ ರಾಷ್ಟ್ರೀಯ ಹೆದ್ದಾರಿಯಾಗಿರುವ 43.5 ಕಿ.ಮೀ ಮೈಸೂರು ರಿಂಗ್ ರಸ್ತೆಯ ಇಕ್ಕೆಲಗಳಲ್ಲಿ ಕಟ್ಟಡ ತ್ಯಾಜ್ಯ(ಡೆಬ್ರಿಸ್) ಹಾಗೂ ಕಸ ತೆರವು ಅಭಿಯಾನ ನಡೆಸಲಾಯಿತು. ಆ ಸಂದರ್ಭದಲ್ಲಿ ಅನಧಿಕೃತವಾಗಿ ಅಳವಡಿಸಲಾಗಿದ್ದ ಜಾಹೀರಾತು ಫಲಕ, ಹೋರ್ಡಿಂಗ್, ಬೋರ್ಡ್‌ಗಳನ್ನು ಗ್ಯಾಸ್ ಕಟರ್ ಮೂಲಕ ಕತ್ತರಿಸಲಾಗಿತ್ತು.



ಇದೀಗ ಮೈಸೂರು–ನಂಜನಗೂಡು ಹೆದ್ದಾರಿಯಲ್ಲೂ ಇದೇ ರೀತಿಯ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದರು.

ಇತ್ತೀಚೆಗೆ ಕಡಕೊಳದಿಂದ ಮೈಸೂರಿನ ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ವರೆಗೂ ನಾಯಿಕೊಡೆಗಳಂತೆ ದೊಡ್ಡ ದೊಡ್ಡ ಹೋರ್ಡಿಂಗ್‌ಗಳು ತಲೆ ಎತ್ತಿವೆ. ಈಗಾಗಲೇ ವಿಮಾನ ನಿಲ್ದಾಣದ ಬಳಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಈ ಮಾರ್ಗದಲ್ಲಿ ಜಾಹೀರಾತು ಫಲಕ, ಹೋರ್ಡಿಂಗ್ಸ್‌ಗಳನ್ನು ಸಂಬಂಧಪಟ್ಟವರು ನಾಳೆ(ಜೂ.14) ತೆರವುಗೊಳಿಸಬೇಕು. ಇಲ್ಲವಾದರೆ ಮರುದಿನ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಗ್ಯಾಸ್‌ಕಟ್ಟರ್‌ನಿಂದ ಕತ್ತರಿಸಿ, ಗುಜರಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.



ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ-2022

ಮಂಡ್ಯದಲ್ಲಿ ಶೇ.69.88ರಷ್ಟು ಶಾಂತಿಯುತ ಮತದಾನ

ಜಿಲ್ಲಾದ್ಯಂತ 19179 ಪುರುಷರು, 13873 ಮಹಿಳೆಯರು ಸೇರಿದಂತೆ 33,053 ಮಂದಿ ಮತದಾನ

ಮಂಡ್ಯ, ಜೂ.13(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಸೋಮವಾರ ಜಿಲ್ಲಾದ್ಯಂತ ಶಾಂತಿಯುತವಾಗಿ ನಡೆದಿದ್ದು, ಶೇ.69.88ರಷ್ಟು ಮತದಾನವಾಗಿದೆ.

ಜಿಲ್ಲೆಯಲ್ಲಿ 26,433 ಪುರುಷರು, 20857 ಮಹಿಳೆಯರು, ಇತರರು 12 ಮಂದಿ ಸೇರಿದಂತೆ ಒಟ್ಟು 47302 ಮತದಾರರಿದ್ದು, ಈ ಪೈಕಿ 19179 ಪುರುಷರು, 13873 ಮಹಿಳೆಯರು, ಇಬ್ಬರು ಇತರರು ಸೇರಿ ಒಟ್ಟು33053 ಮಂದಿ ಮತದಾನ ಮಾಡಿದ್ದಾರೆ. ಮಂಡ್ಯದಲ್ಲಿ 10,568 (66.36%), ಮದ್ದೂರು 7527(72.65%), ಮಳವಳ್ಳಿ 5190(67.23%), ಪಾಂಡವಪುರ 2838 (76.60%), ಶ್ರೀರಂಗಪಟ್ಟಣ 2280 (68.94%), ನಾಗಮಂಗಲ 2197 (74.25%), ಹಾಗೂ ಕೆ.ಆರ್. ಪೇಟೆಯಲ್ಲಿ 2453(73.75%) ಮಂದಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದ್ದಾರೆ.

ಇಂದು ಬೆಳಗ್ಗೆ 8 ಗಂಟೆಗೆ ಆರಂಭಗೊಂಡ ಮತದಾನ ಸಂಜೆ 5ರವರೆಗೂ ನಡೆಯಿತು. ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳ ಮತಗಟ್ಟೆಗಳಲ್ಲಿ ಪದವೀಧರ ಮತದಾರರು ಉತ್ಸಾಹದಿಂದಲೇ ಮತ ಚಲಾಯಿಸಿದರು. ಬೆಳಗ್ಗೆ ನಿಧಾನವಾಗಿ ಆರಂಭಗೊಂಡ ಮತದಾನ ನಂತರ ವೇಗ ಪಡೆಯಿತು. ಬೆಳಗ್ಗೆ 10 ಗಂಟೆ ವೇಳೆಗೆ ಶೇ.7.94ರಷ್ಟು ಮತದಾನ ನಡೆದಿತ್ತು ನಂತರ ಮಧ್ಯಾಹ್ನ 12 ಗಂಟೆಗೆ ಶೇ.21ರಷ್ಟು, 2 ಗಂಟೆಗೆ ಶೇ.59.24ರಷ್ಟು ಮತದಾನ ನಡೆದಿತ್ತು.

ಜಿಲ್ಲೆಯಲ್ಲಿ ಒಟ್ಟು 45 ಮತಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ನಗರದ ಬೆಂಗಳೂರು-ಮೈಸೂರು ಹೆದ್ದಾರಿಯ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಮಂಡ್ಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಮತದಾರರಿಗೆ ಪ್ರತ್ಯೇಕ ಮತದಾನಕ್ಕೆ ವ್ಯವಸ್ಥೆ ಮಾಡಿದ್ದರಿಂದ ಸರತಿ ಸಾಲಿನಲ್ಲಿ ನಿಂತ ಮತದಾರರು ಗಂಟೆಗಟ್ಟಲೆ ಕಾದು ಮತದಾನ ಮಾಡುವಂತಾಯಿತು. ಬಾಣಂತಿ ಮಹಿಳೆಯರು ಮಗು ಎತ್ತಿಕೊಂಡು ಬಂದು ಮತದಾನ ಮಾಡಿದರು. ಅಲ್ಲದೆ, ಕುಟುಂಬ ಸಮೇತರಾಗಿ ಮಕ್ಕಳೊಂದಿಗೆ ಆಗಮಿಸಿ ಹಕ್ಕು ಚಲಾಯಿಸಿದರು. ಅಂಗವಿಕಲ ಮತದಾರರಿಗೆ ವ್ಹೀಲ್‌ಚೇರ್ ವ್ಯವಸ್ಥೆ ಮಾಡಲಾಗಿತ್ತು. ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಕಲ್ಪಿಸಲಾಗಿತ್ತು.

ವಿವಿ ಹೊರಭಾಗ ಅಭ್ಯರ್ಥಿಗಳ ಹಾಗೂ ಕಾರ್ಯಕರ್ತರ ಮತಯಾಚನೆಗೆ ಅವಕಾಶ ಕಲ್ಪಿಸಲಾಗಿತ್ತು ಅದರಂತೆ ಬರುವ ಮತದಾರರಿಗೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹಾಗೂ ರೈತಸಂಘ ಸೇರಿದಂತೆ ಪಕ್ಷೇತರ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಮತಯಾಚಿಸುತ್ತಿದ್ದ ದೃಶ್ಯ ಕಂಡು ಬಂತು.

ಘಟಾನುಘಟಿಗಳಿಂದ ವೋಟಿಂಗ್: ಮಂಡ್ಯ ವಿವಿಯಲ್ಲಿ ಶಾಸಕ ಎಂ.ಶ್ರೀನಿವಾಸ್, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಮತದಾನ ಮಾಡಿದರೆ, ಮದ್ದೂರಿನ ಮಿನಿ ವಿಧಾನ ಸೌಧದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಶಾಸಕ ಡಿ.ಸಿ.ತಮ್ಮಣ್ಣ ಮತದಾನ ಮಾಡಿದರು.



ಜಿಲ್ಲಾಧಿಕಾರಿ ಎಸ್.ಅಶ್ವಥಿ ಮತಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸುತ್ತಿರುವುದು.



ಪಾಂಡವಪುರದಲ್ಲಿ ಶಾಸಕರು, ಸಚಿವರ ಪರ ಘೋಷಣೆ

ಸೋಮವಾರ ಪಾಂಡವಪುರ ಮತದಾನ ಕೇಂದ್ರದ ಬಳಿಗೆ ಸಚಿವ ಕೆ.ಸಿ.ನಾರಾಯಣಗೌಡ ಆಗಮಿಸುತ್ತಿದ್ದಂತೆಯೇ ನೆರೆದಿದ್ದ ಬಿಜೆಪಿ ಕಾರ್ಯಕರ್ತರು ಕೇಸರಿ ಟವಲ್ ಅನ್ನು ಗಾಳಿಯಲ್ಲಿ ಹಾರಿಸುತ್ತ ಪ್ರಧಾನಿ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ನಾರಾಯಣಗೌಡರ ಪರ ಘೋಷಣೆ ಮೊಳಗಿಸಿದರು. ಇದರಿಂದ ರೊಚ್ಚಿಗೆದ್ದ ಜೆಡಿಎಸ್ ಕಾರ್ಯಕರ್ತರೂ ತಮ್ಮ ಟವಲ್ ಅನ್ನು ಗಾಳಿಯಲ್ಲಿ ಹಾರಿಸುತ್ತಾ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಶಾಸಕ ಸಿ.ಎಸ್. ಪುಟ್ಟರಾಜು ಪರವಾಗಿ ಘೋಷಣೆ ಕೂಗಿದರು.

ಮಳವಳ್ಳಿ: ಮಳವಳ್ಳಿ ಪಟ್ಟಣದಲ್ಲಿ ಮತದಾನ ಶಾಂತಿಯುತವಾಗಿ ನಡೆದಿದ್ದು, ಶಾಸಕ ಡಾಕೆ.ಅನ್ನದಾನಿ, ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ, ಮಾಜಿ ಸಚಿವ ಸೋಮಶೇಖರ್ ಸೇರಿದಂತೆ ಪ್ರಮುಖ ನಾಯಕರು ಮತದಾನ ಮಾಡಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ 2 ಹಾಗೂ ತಾಪಂನಲ್ಲಿ 5 ಮತಗಟ್ಟೆ ಗಳನ್ನು ತೆರೆಯಲಾಗಿತ್ತು. ಮತಗಟ್ಟೆ ಹೊರಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ರೈತಸಂಘ, ಬಿಎಸ್ಪಿ, ಪಕ್ಷೇತರ ಅಭ್ಯರ್ಥಿಗಳ ಬೆಂಬಲಿಗರು ತಮ್ಮ ಅಭ್ಯರ್ಥಿಗೆ ಮತ ನೀಡುವಂತೆ ಮತದಾರರನ್ನು ಮನವೊಲಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಮದ್ದೂರು: ಮದ್ದೂರಲ್ಲೂ ಶಾಂತಿಯುತ ಮತದಾನ ನಡೆದಿದ್ದು, ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜು, ತಾಪಂ ಹಾಗೂ ತಾಲೂಕು ಕಚೇರಿಗಳಲ್ಲಿ ಮತದಾನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನ ಮತಗಟ್ಟೆ 24ರಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು



ಶಾಸಕ ಡಿ.ಸಿ.ತಮ್ಮಣ್ಣರಿಂದ ಮತದಾನ.

ಜಿ.ಮಾದೇಗೌಡ ಹಾಗೂ ಶಾಸಕ ಡಿ.ಸಿ.ತಮ್ಮಣ್ಣ ಮತದಾನ ಮಾಡಿದರು.

ಪಾಂಡವಪುರ: ಮತದಾನ ಶಾಂತಿಯುತವಾಗಿ ನಡೆಯಿತು. ಮತಗಟ್ಟೆಗಳ ಬಳಿ ಅಭ್ಯರ್ಥಿಗಳ ಬೆಂಬಲಿಗರು ಮತಯಾಚಿಸುತ್ತಿದ್ದ ದೃಶ್ಯ ಕಂಡು ಬಂತು. ಇದರಿಂದಾಗಿ ಮೈಸೂರು–ಜೇವರ್ಗಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಗಣ್ಯರಿಂದ ಮತದಾನ: ತಾಲೂಕಿನ ಬೇಬಿ ಮಠದ ಡಾ.ತ್ರಿನೇತ್ರ ಸ್ವಾಮೀಜಿ, ಜಿಪಂ ಮಾಜಿ ಸದಸ್ಯ ಹೆಚ್.ತ್ಯಾಗರಾಜು, ರೈತ ಮುಖಂಡ ದರ್ಶನ್ ಪುಟ್ಟಣ್ಣಯ್ಯ, ಬಿಜೆಪಿ ಮುಖಂಡರಾದ ಕುಮಾರಸ್ವಾಮಿ, ಪತ್ನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕಿ ಪುಷ್ಪ, ಡಾ.ಎನ್.ಎಸ್. ಇಂದ್ರೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಎಚ್.ಎನ್.ರವೀಂದ್ರ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಪತ್ನಿ ವಿಜಯ, ಸೇರಿದಂತೆ ಹಲವಾರು ಗಣ್ಯರು ತಮ್ಮ ಹಕ್ಕು ಚಲಾಯಿಸಿದರು.

ನಾಗಮಂಗಲ: ಶಾಸಕ ಸುರೇಶ್‌ಗೌಡ ತಮ್ಮ ಪತ್ನಿ ಗೀತಾ ಸುರೇಶ್‌ಗೌಡ ಹಾಗೂ ಪುತ್ರಿ ಧನ್ಯತಾ ಜೊತೆಗೆ ನಾಗಮಂಗಲದ ಮಿನಿ ವಿಧಾನಸೌಧದದಲ್ಲಿ ಮತದಾನ ಮಾಡಿದರು. ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಪುತ್ರ ಸಚಿನ್ ಚಲುವರಾಯಸ್ವಾಮಿ ಹಾಗೂ ಸಹೋದರನ ಪುತ್ರ ಸುನೀಲ್ ಲಕ್ಷ್ಮಿಕಾಂತ್ ಒಟ್ಟಿಗೆ ಬಂದು ಮತ ಚಲಾಯಿಸಿದರು.

ಮಾತಿನ ಚಕಮಕಿ: ತಾಲೂಕು ಆಡಳಿತ ಸೌಧದ ಮತಕೇಂದ್ರಗಳಿಗೆ ರೈತ ಸಂಘದ ಕೆಲ ಮುಖಂಡರು ಹಸಿರು ಶಾಲು ತೊಟ್ಟು ಪ್ರವೇಶಿಸಲು ಮುಂದಾಗುತ್ತಿದ್ದಂತೆ ಕರ್ತವ್ಯನಿರತ ಚುನಾವಣಾ ಸಿಬ್ಬಂದಿ ತಡೆದು ನಿಲ್ಲಿಸಿದ ವಿಚಾರಕ್ಕೆ ಚುನಾವಣಾ ಸಿಬ್ಬಂದಿ ಹಾಗೂ ರೈತ ಸಂಘದ ಕೆಲ ಮುಖಂಡರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಸ್ಥಳಕ್ಕಾಗಮಿಸಿದ ಪಟ್ಟಣ ಪೊಲೀಸ್ ಠಾಣೆ ಎಸ್‌ಐ ರವಿಶಂಕರ್ ಮುಖಂಡರಿಗೆ ಮನವರಿಕೆ ಮಾಡಿ ಪರಿಸ್ಥಿತಿ ತಿಳಿಗೊಳಿಸಿದರು.



ಶಾಸಕ ಸುರೇಶ್‌ಗೌಡ ಪತ್ನಿ ಗೀತಾ, ಪುತ್ರಿ ಧನ್ಯತಾರೊಂದಿಗೆ ಮತದಾನ ಮಾಡಿದರು.

ಮದ್ದೂರಲ್ಲಿ ಗೊಂದಲದ ವಾತಾವರಣ

ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನ ಮತಗಟ್ಟೆ ಸಂಖ್ಯೆ 24ರಲ್ಲಿ ಮತದಾನದ ವೇಳೆ ಗದ್ದಲ ಮತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಪೊಲೀಸರು ಮತ್ತು ಮತದಾರರ ನಡುವೆ ಮಾತಿನ ಚಕಮಕಿ ನಡೆಯಿತು. ಮತದಾರರು ಮತ ಚಲಾಯಿಸಲು ಉರಿ ಬಿಸಿಲಿನಲ್ಲಿ ಸರತಿ ಸಾಲಿನಲ್ಲಿ ನಿಂತು ಹೈರಾಣಾದರು. ಸೂಕ್ತ ವ್ಯವಸ್ಥೆ ಕಲ್ಪಿಸಬೇಕಾದ ತಾಲೂಕು ಆಡಳಿತ ಸಂಪೂರ್ಣ ವಿಫಲವಾಯಿತು. ಹಲವು ಮತದಾರರು ಅಧಿಕ ಬಿಸಿಲು, ತಳ್ಳಾಟ, ನೂಕಾಟ ಹಾಗೂ ಮಾತಿನ ಚಕಮಕಿಯಿಂದ ಬೇಸತ್ತು ಮತದಾನ ಮಾಡದೆ ಹಿಂದಿರುಗಿದರು. ಮತದಾನ ನಡೆಯುವ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲದಿರುವುದರಿಂದ ಮಹಿಳೆಯರು ವೇದನೆ ಪಡುವಂತಾಯಿತು.

ಮಧು ಜಿ.ಮಾದೇಗೌಡ ಮತದಾನ

ಮದ್ದೂರು, ಜೂ.13– ಪಟ್ಟಣದ ಸರ್ಕಾರಿ ಮಹಿಳಾ ಕಾಲೇಜಿನ ಮತಗಟ್ಟೆ 24ರಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಮತದಾನ ಮಾಡಿದರು.



ನಂತರ ಮಾತನಾಡಿದ ಅವರು, ಮತದಾರರು ಬಹಳ ಉತ್ಸಾಹದಿಂದ ಮತದಾನ ಮಾಡುತ್ತಿದ್ದು, ಈ ಬಾರಿಯ ಚುನಾವಣೆಯಲ್ಲಿ ನಾನು ಹೆಚ್ಚಿನ ಮತಗಳ ಅಂತರದಿಂದ ಗೆಲುವು ಖಚಿತ. ಆ ಮೂಲಕ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಇತಿಹಾಸ ಸೃಷ್ಟಿ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಕೆಪಿಸಿಸಿ ಸದಸ್ಯ ಎಸ್.ಗುರು ಚರಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಪಿ.ಸಂದರ್ಶ, ಜೋಗಿಗೌಡ, ಶಿಂಷಾ ಸಹಕಾರ ಬ್ಯಾಂಕ್ ನಿರ್ದೇಶಕ ಸತೀಶ್, ಪುರಸಭಾ ಮಾಜಿ ಅಧ್ಯಕ್ಷ ಎಂ.ಪಿ. ಅಮರ್ ಬಾಬು, ಮುಖಂಡರಾದ ಕೆ.ಆರ್.ಮಹೇಶ್, ನಾಗರಾಜ್, ಯೋಗೇಶ್, ರವಿ ಇದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಖಚಿತವಾಗಿದೆ. ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಬಹಳ ಉತ್ಸಾಹದಿಂದ ಬಿಜೆಪಿ ಅಭ್ಯರ್ಥಿ ಪರವಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅತ್ಯಧಿಕ ಮೊದಲ ಪ್ರಾಶಸ್ತ್ಯ ಮತಗಳಿಂದ ಗೆಲುವು ಸಾಧಿಸಲಿದ್ದಾರೆ.

- ಕೆ.ಸಿ.ನಾರಾಯಣಗೌಡ, ಸಚಿವ



ಇದೇ ಮೊದಲ ಬಾರಿಗೆ ಮತದಾನ ಮಾಡಿದ್ದು ತುಂಬಾ ಖುಷಿಯಾಗಿದೆ. ಇದಕ್ಕೂ ಮೊದಲು ಹಲವು ಚುನಾವಣೆಗಳಲ್ಲಿ ಮತದಾನ ಮಾಡಿದ್ದೇನೆ. ಆದರೆ ಪದವೀಧರ ಕ್ಷೇತ್ರಕ್ಕೆ ನನ್ನದು ಇದೇ ಮೊದಲ ಮತದಾನ. ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆಮಾಡಿ ವಿಧಾನ ಪರಿಷತ್‌ಗೆ ಕಳುಹಿಸುವ ಜವಾಬ್ದಾರಿ ಪದವೀಧರರಾದ ನಮ್ಮ ಮೇಲಿದ್ದು ಉತ್ತಮ ಅಭ್ಯರ್ಥಿಗೇ ಮತದಾನ ಮಾಡಿದ್ದೇನೆ.



–ಎಸ್.ಆರ್.ಲಾವಣ್ಯ, ಪಾಂಡವಪುರ

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಸೋನಿಯಾ, ರಾಹುಲ್‌ಗೆ ಇಡಿ ನೋಟಿಸ್ ಖಂಡಿಸಿ ಕಾಂಗ್ರೆಸ್ ಭಾರೀ ಪ್ರತಿಭಟನೆ

ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವ



ಬೆಂಗಳೂರು, ಜೂ.13(ಕೆಎಂಶಿ)– ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಇಡಿ ನೋಟಿಸ್ ಜಾರಿ ಮಾಡಿರುವುದನ್ನು ಖಂಡಿಸಿ ಪ್ರದೇಶ ಕಾಂಗ್ರೆಸ್ ಇಂದು ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿತ್ತು.

ನಗರದ ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ ಇಡಿ ಕಚೇರಿಗೆ ಸಾವಿರಾರು ಕಾರ್ಯಕರ್ತರು ಮುತ್ತಿಗೆ ಹಾಕಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು. ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿ, ಕೇಂದ್ರ ಸರ್ಕಾರ ತಮ್ಮ ವಿರೋಧಿಗಳನ್ನು ಮಣಿಸಲು ಇಡಿ ಮತ್ತು ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪ ಮಾಡಿದರು.

ಸಭೆಯಲ್ಲಿ ಭಾಗವಹಿಸಿದ್ದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ, ನರೇಂದ್ರ ಮೋದಿ ಅವರು ಪ್ರಧಾನಿಯಾದ ಮೇಲೆ ಸರ್ಕಾರದ ಎಲ್ಲ ಸ್ವತಂತ್ರ ಸಂಸ್ಥೆಗಳನ್ನು ಅವರ ಕೈಗೊಂಬೆಗಳಾಗಿ ಮಾಡಿಕೊಳ್ಳುತ್ತಿದ್ದಾರೆ.

ಅದು ರಿಸರ್ವ್ ಬ್ಯಾಂಕ್, ಸಿಎಜಿ, ಸಿಬಿಐ, ಇಡಿ, ಎನ್‌ಎಸ್‌ಎಸ್‌ಒ ಇವು ಯಾವುದೇ ಇರಬಹುದು. ಈ ಎಲ್ಲಾ ಸಂಸ್ಥೆಗಳು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡಿಕೊಂಡಿದ್ದಾರೆ. ಇ.ಡಿ ಹಾಗೂ ಆದಾಯ ತೆರಿಗೆ ಇಲಾಖೆಗಳನ್ನು ವಿರೋಧ ಪಕ್ಷದವರ ಮೇಲೆ ಛೂ ಬಿಡುವ ಕೆಲಸ ಮಾಡುತ್ತಿದ್ದಾರೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವತ್ತೂ ಕೂಡ ಸ್ವಾಯತ್ತ ಸಂಸ್ಥೆಗಳನ್ನು ಈ ರೀತಿ ದುರುಪಯೋಗ ಮಾಡಿಕೊಂಡ ಉದಾಹರಣೆಗಳಿಲ್ಲ.

ಇಡಿ, ಸಿಬಿಐ, ಐ.ಟಿ ಈ ಎಲ್ಲಾ ಸಂಸ್ಥೆಗಳು ಮೋದಿ ಅವರಿಗೆ ವಿರುದ್ಧವಾಗಿರುವವರ ಮೇಲೆ ದಾಳಿ ಮಾಡಬೇಕು, ಅವರ ಮೇಲೆ ಮೊಕದ್ದಮೆಗಳನ್ನು ಹಾಕಬೇಕಿದೆ. ಇಂದು ದೇಶದ ಪ್ರಗತಿಯ ಅಂಕಿ ಅಂಶಗಳು ಯಾರಿಗೂ ಸಿಗಬಾರದು ಎಂದು ಎನ್‌ಎಸ್‌ಎಸ್‌ಒ ಅನ್ನು ನಿಷ್ಕ್ರಿಯಗೊಳಿಸಿದ್ದಾರೆ ಎಂದು ದೂರಿದರು.

ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಮೇಲೆ ಇ.ಡಿಯನ್ನು ಛೂ ಬಿಟ್ಟು, ಅದರ ಮೂಲಕ ಸಮನ್ಸ್ ನೀಡಿ, ಸುಳ್ಳು ಮೊಕದ್ದಮೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಅವರನ್ನು ಹೆದರಿಸುವ ಕೆಲಸವನ್ನು ಮೋದಿ ಅವರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಜೊತೆಯಾಗಿ ಕಾಂಗ್ರೆಸ್‌ನ ಅನೇಕ ನಾಯಕರು ತ್ಯಾಗ, ಬಲಿದಾನ ಮಾಡಿದ್ದಾರೆ. ಬಿಜೆಪಿಗೆ ತ್ಯಾಗದ ಅರ್ಥ ಗೊತ್ತಾ? ಬಿಜೆಪಿ, ಆರ್‌ಎಸ್‌ಎಸ್ ನೀವು ಎಂದಾದರೂ ತ್ಯಾಗ ಮಾಡಿದ್ದೀರಾ? ನೀವು ನಮಗೆ ದೇಶಭಕ್ತಿ ಹೇಳಿಕೊಡಲು ಬರ್ತೀರಾ? ನಿಮಗೆ ನಾಚಿಕೆಯಾಗಲ್ವ ಎಂದು ಪ್ರಶ್ನಿಸಿದರು.

ಇಂದು ಸಾಂಕೇತಿಕವಾಗಿ ಮುಷ್ಕರ ಆರಂಭವಾಗಿದೆ. ಕಾಂಗ್ರೆಸ್‌ನ ಕೋಟ್ಯಾಂತರ ಕಾರ್ಯಕರ್ತರು ಬೀದಿಗೆ ಇಳಿದು ಸರ್ಕಾರ ನಡೆಯದಂತೆ ಹೋರಾಟ ಮಾಡುತ್ತಾರೆ, ಎಲ್ಲ ಸರ್ಕಾರಿ ಕಚೇರಿಗಳನ್ನು ಬಂದ್ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಒಬ್ಬಂಟಿಗರಲ್ಲ, ಅವರ ಜೊತೆ ಪಕ್ಷದ ಕೋಟ್ಯಾಂತರ ಕಾರ್ಯಕರ್ತರು ಇದ್ದಾರೆ. ಎಲ್ಲರ ಹಕ್ಕುಗಳನ್ನು ಕಿತ್ತುಕೊಳ್ಳಲು ಅಥವಾ ಹತ್ತಿಕ್ಕಲು ನಿಮ್ಮಿಂದ ಸಾಧ್ಯವಿಲ್ಲ. ನರೇಂದ್ರ ಮೋದಿ ಅವರೇ, ನಿಮ್ಮ ಸಂವಿಧಾನ ವಿರೋಧಿ ನಡೆಯನ್ನು ಬಿಡಿ. 2015ರಲ್ಲಿ ಮುಕ್ತಾಯವಾದ ಕೇಸಿಗೆ ಮರು ಚಾಲನೆ ನೀಡಿದ ನಿಮ್ಮ ದ್ವೇಷ ರಾಜಕಾರಣಕ್ಕೆ ನಮ್ಮ ಧಿಕ್ಕಾರವಿದೆ. ನಾವೆಲ್ಲ ಕಲ್ಲು ಬಂಡೆಗಳಂತೆ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಜೊತೆ ನಿಲ್ಲೋಣ. ಈ ಅನ್ಯಾಯವನ್ನು ಖಂಡಿಸೋಣ ಎಂದು ಗುಡುಗಿದರು.

ಕಾಂಗ್ರೆಸ್‌ನದು ಬ್ಲಾಕ್‌ಮೇಲ್ ತಂತ್ರ

ಬೆಂಗಳೂರು, ಜೂ.13(ಕೆಎಂಶಿ)– ಕಾಂಗ್ರೆಸ್ ಪಕ್ಷವು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಆದ ತಪ್ಪಿನಿಂದ ರಕ್ಷಣೆ ಪಡೆಯಲು ಇ.ಡಿ. ವಿರುದ್ಧ ಆಂದೋಲನ, ಹೋರಾಟ ಮಾಡುತ್ತಿದೆ. ಈ ಬ್ಲಾಕ್‌ಮೇಲ್ ತಂತ್ರವನ್ನು ಖಂಡಿಸುವುದಾಗಿ ರಾಜ್ಯದ ಉನ್ನತ ಶಿಕ್ಷಣ, ಐಟಿ ಹಾಗೂ ಬಿಟಿ ಸಚಿವ ಡಾ॥ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರು ಈ ವಿಚಾರದಲ್ಲಿ ಅನುಭವ ಉಳ್ಳವರು. ಇ.ಡಿ. ಯಿಂದ ತನಿಖೆಗೆ ಒಳಗಾದವರು. ಇಡಿ ತನಿಖೆಗೆ ಕಾಂಗ್ರೆಸ್ ಪಕ್ಷ ಸಹಕರಿಸಬೇಕು ಎಂದು ಮನವಿ ಮಾಡಿದರು. ಕಾಂಗ್ರೆಸ್ ಆರೋಪಗಳು ರಾಜಕೀಯ ಪ್ರೇರಿತವಾಗಿವೆ. ನಮ್ಮನ್ನು ಪ್ರಶ್ನಿಸಬೇಡಿ, ವಿಚಾರಣೆಗೆ ಕರೆಯಬೇಡಿ ಎಂದರೆ ಹೇಗೆ ಎಂದು ಕೇಳಿದರಲ್ಲದೆ, ಇದರ ವಿರುದ್ಧ ಜನಜಾಗೃತಿ ಮೂಡಿಸಲು ಈ ಪತ್ರಿಕಾಗೋಷ್ಠಿ ನಡೆಸಲಾಗುತ್ತಿದೆ ಎಂದರು. ನಾವು ಭ್ರಷ್ಟಾಚಾರದ ವಿರುದ್ಧ ಇದ್ದೇವೆ. ಯಾವುದೇ ಪಕ್ಷದ ಭ್ರಷ್ಟಾಚಾರಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ ಹಾಗೂ ಅದರಂತೆ ನಡೆದುಕೊಳ್ಳುತ್ತಿದ್ದಾರೆ ಎಂದರು.

ಕಾಂಗ್ರೆಸ್ ಭ್ರಷ್ಟಾಚಾರದ ಪಕ್ಷ. ಅವರಲ್ಲಿ ಪ್ರಾಮಾಣಿಕತೆ, ನೈತಿಕತೆ, ರಾಷ್ಟ್ರೀಯತೆ, ದೇಶಪ್ರೇಮ ಇಲ್ಲ. ಸಮನ್ಸ್ ವಿರುದ್ಧ ಬೀದಿಗಳಲ್ಲಿ ಪ್ರತಿಭಟನೆ ಮಾಡಿ ಏನು ಸಂದೇಶ ನೀಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ನಾವು ಭ್ರಷ್ಟಾಚಾರ ಮಾಡಿದರೂ ನಮಗೇನೂ ಮಾಡಬಾರದು, ನಾವು ಕಾನೂನಿಗಿಂತ ದೊಡ್ಡವರು ಎಂಬ ಧೋರಣೆ ಸರಿಯೇ ಎಂದು ಕೇಳಿದರು. ಆಂದೋಲನಗಳು ರಾಜಕೀಯ ಪ್ರೇರಣೆಯಿಂದ ಕೂಡಿವೆ ಎಂದು ಆಕ್ಷೇಪಿಸಿದರು.

ಸುಮಾರು 10 ಗಂಟೆ ಇಡಿ ವಿಚಾರಣೆ ಎದುರಿಸಿದ ರಾಹುಲ್



ನವದೆಹಲಿ: ಇಂದು ಜಾರಿ ನಿರ್ದೇಶನಾಲಯ (ಇಡಿ) ಸಮನ್ಸ್ ನೀಡಿದ್ದ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೆಹಲಿಯ ಇಡಿ ಕಚೇರಿಯಲ್ಲಿ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗಿದ್ದರು. ಅವರ ಇಂದಿನ ವಿಚಾರಣೆ ಮುಕ್ತಾಯಗೊಂಡಿದ್ದು, ಮತ್ತೆ ನಾಳೆ ವಿಚಾರಣೆಗೆ ಹಾಜರಾಗುವಂತೆ ಇಡಿ ಅಧಿಕಾರಿಗಳು ಹೇಳಿದ್ದಾರೆ ಎಂದು ತಿಳಿದು ಬಂದಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಇಡಿಯಿಂದ ಸಮನ್ಸ್ ಜಾರಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ರಾಹುಲ್ ಗಾಂಧಿಯವರು ಇಡಿ ಕಚೇರಿಗೆ ತೆರಳಿ ವಿಚಾರಣೆಗೆ ಹಾಜರಾಗಿದ್ದರು. ಸತತ 10 ಗಂಟೆಗಳ ಕಾಲ ಇಡಿ ಅಧಿಕಾರಿಗಳು ಪ್ರಕರಣದಲ್ಲಿ ವಿಚಾರಣೆ ನಡೆಸಿದರು.

ವೇಣುಗೋಪಾಲ್ ಅಸ್ವಸ್ಥ



ಬೆಂಗಳೂರು: ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನು ಇಡಿ ವಿಚಾರಣೆಗೆ ಒಳಪಡಿಸಿರುವುದನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂರಿನಲ್ಲಿ ಸೋಮವಾರ ಪ್ರತಿಭಟನೆ ನಡೆಸುವ ವೇಳೆ ಪೊಲೀಸರು ಕೈ ನಾಯಕ ವೇಣುಗೋಪಾಲ್ ಅವರ ಬಟ್ಟೆ ಹರಿದಿದ್ದು, ಈ ವೇಳೆ ನಡೆದ ತಳ್ಳಾಟದಲ್ಲಿ ಅವರು ಅಸ್ವಸ್ಥಗೊಂಡ ಘಟನೆಯೂ ನಡೆದಿದೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಇಡಿ ಮುಂದೆ ರಾಹುಲ್ ಗಾಂಧಿ ವಿಚಾರಣೆಗೆ ಹಾಜರಾಗಿದ್ದು, ಅವರಿಗೆ ಪ್ರಿಯಾಂಕಾ ಗಾಂಧಿ ಸಹ ಸಾಥ್ ನೀಡಿದ್ದಾರೆ. ಈ ವೇಳೆ ಇಡಿ ಕಚೇರಿ ಹೊರಗೆ ಇದ್ದ ಕಾಂಗ್ರೆಸ್ ಕಾರ್ಯಕರ್ತರು ಅವರಿಗೆ ಬೆಂಬಲ ಸೂಚಿಸಲು ಎಐಸಿಸಿ ಕಚೇರಿಯಿಂದ ಇಡಿ ಕಚೇರಿವರೆಗೂ ಪಾದಯಾತ್ರೆ ಮಾಡಿದರು. ಈ ವೇಳೆ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು, 7 ಬಸ್‌ಗಳಲ್ಲಿ ತುಂಬಿಕೊಂಡು ಹೋಗಿದ್ದಾರೆ. ಇಡಿ ಕಚೇರಿ ಬಳಿ ಬಂದಿದ್ದ ಕಾಂಗ್ರೆಸ್ ನಾಯಕರಾದ ಕೆ.ಸಿ.ವೇಣುಗೋಪಾಲ್ ಮತ್ತುಡಿ.ಕೆಸುರೇಶ್ ಮತ್ತಿತರರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಈ ವೇಳೆ ಪೊಲೀಸರು ವೇಣುಗೋಪಾಲ್ ಅವರ ಅಂಗಿಯನ್ನು ಹರಿದಿದ್ದು, ಅವರು ಅಸ್ವಸ್ಥರಾಗಿದ್ದಾರೆ.

ರಾಷ್ಟ್ರಪತಿ ರಾಮನಾಥ್ ಕೋವಿಂದ್ ಬೆಂಗಳೂರಿಗೆ ಆಗಮನ

ಇಂದು ಇಸ್ಕಾನ್‌ನ ರಾಜಾಧಿರಾಜ ಶ್ರೀ ಗೋವಿಂದ ದೇವಾಲಯ ಲೋಕಾರ್ಪಣೆ

ಬೆಂಗಳೂರು: ಬೆಂಗಳೂರಿನ ಕನಕಪುರ ರಸ್ತೆಯ ಸಮೀಪದಲ್ಲಿರುವ ವಸಂತಪುರದ ವೈಕುಂಠ ಬೆಟ್ಟದಲ್ಲಿ ಅಂತಾರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಘ (ಇಸ್ಕಾನ್) ನೂತನವಾಗಿ ನಿರ್ಮಿಸಿರುವ ರಾಜಾಧಿರಾಜ ಶ್ರೀ ಗೋವಿಂದ ದೇವಾಲಯವನ್ನು ಭಾರತದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಜೂ.14 ರಂದು ಲೋಕಾರ್ಪಣೆ ಮಾಡಲಿದ್ದಾರೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಲೋಕಸಭಾ ಸದಸ್ಯ ಡಿ.ಕೆ ಸುರೇಶ್, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಸದಸ್ಯ ಎಂ. ಕೃಷ್ಣಪ್ಪ ಅವರೂ ಸೇರಿದಂತೆ ಇತರ ಗಣ್ಯರು ಈ ವಿಶೇಷ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಶಿಲಾ ಕೆತ್ತನೆಯಿಂದ ಕೂಡಿದ ದೇವಾಲಯದ ಈ ಪಾರಂಪರಿಕ ವಿಗ್ರಹವು ತಿರುಮಲದ ಶ್ರೀ ವೆಂಕಟೇಶ್ವರ ದೇವಾಲಯದ ಮೂರ್ತಿಯನ್ನು ಹೋಲುತ್ತದೆ. ಅಳತೆ, ಶಿಲಾ ಕೆತ್ತನೆ ಹಾಗೂ ಸೌಂದರ್ಯ ಎಲ್ಲವೂ ಒಂದೇ ರೀತಿಯೇ ಕಾಣುತ್ತದೆ. ಶ್ರೀ



ಶ್ರೀನಿವಾಸ ಸ್ವಾಮಿಯ ಎತ್ತರವೂ ಕೂಡಾ ಒಂದೇ ಇದೆ. ಈ ಹಿನ್ನೆಲೆಯಲ್ಲಿ ಈ ದೇವರ ದೇವರನ್ನು ರಾಜಾಧಿರಾಜ ಶ್ರೀ ಗೋವಿಂದ ಎಂದು ಕರೆಯಲಾಗುತ್ತದೆ.

ಈ ದೇವಾಲಯದಲ್ಲಿ ಮಕ್ಕಳಿಗೆ, ಯುವಕರಿಗೆ ಹಾಗೂ ಕುಟುಂಬಗಳಿಗೆ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಶಿಕ್ಷಣ ಒದಗಿಸುವ ಸೌಲಭ್ಯಗಳಿವೆ. ರಾಜಾಧಿರಾಜ ಶ್ರೀ ಗೋವಿಂದರಾಜ ಸ್ವಾಮಿ ಮತ್ತು ಇತರೆ ದೇವರುಗಳ ಸುಗಮ ದರ್ಶನ ಪಡೆಯುವ ಸಲುವಾಗಿ ಸಾಲಾಗಿ ತೆರಳಲು ವಿಶಾಲ ನಿರೀಕ್ಷಣಾ ಭವನವಿದೆ. ಭಕ್ತಾದಿಗಳ ಅನುಕೂಲಕ್ಕಾಗಿ ಸಾಮೂಹಿಕ ಭೋಜನ ವ್ಯವಸ್ಥೆ ಕಲ್ಪಿಸುವ ಉಚಿತ ಅನ್ನದಾನ ಸಭಾ ಗೃಹವೂ ಇದೆ. ದಾನಿಗಳು ಹಾಗೂ ಪೋಷಕರ ಉದಾರ ಕೊಡುಗೆಯಿಂದ ಈ ದೇವಾಲಯ ಸಂಕೀರ್ಣವನ್ನು ನಿರ್ಮಿಸಲಾಗಿದೆ.

ಮುಂದಿನ ವಾರಗಳಲ್ಲಿ ವೇದ ಸಂಪ್ರದಾಯಗಳಿಗೆ ಅನುಗುಣವಾಗಿ ಸವಿವರ ಪೂಜಾ ವಿಧಾನಗಳನ್ನು ಹಾಗೂ ಪವಿತ್ರ ಕಾರ್ಯಗಳನ್ನು ದೇವಾಲಯ ಪ್ರಾಧಿಕಾರ ಕೈಗೊಳ್ಳಲಿದೆ. ಆದಕಾರಣ, ಈ ದೇವಾಲಯವನ್ನು ಆಗಸ್ಟ್ 1 ರಿಂದ ಸಾರ್ವಜನಿಕರಿಗೆ ಪ್ರವೇಶಾವಕಾಶ ಒದಗಿಸಿ ದರ್ಶನಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗುತ್ತದೆ ಎಂದು ದೇವಾಲಯದಿಂದ ಲಭ್ಯವಾದ ಮಾಹಿತಿ ತಿಳಿಸಿದೆ.

ಮೈಸೂರು ಪೇಟ ತೊಡಿಸಿ ಸ್ವಾಗತ: ರಾಮನಾಥ್ ಕೋವಿಂದ್ ಮತ್ತು ಅವರ ಪತ್ನಿ ಸವಿತಾ ಕೋವಿಂದ್ ಅವರಿಗೆ ರಾಜಭವನದಲ್ಲಿ ಮೈಸೂರು ಪೇಟ ತೊಡಿಸಿ, ಹೂಗುಚ್ಛ ನೀಡುವ ಮೂಲಕ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ರಾಜಭವನದ ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಚ್.ಕೆ.ರಾಮು ಗೆದ್ದೇ ಗೆಲ್ಲುತ್ತಾರೆ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ವಿಶ್ವಾಸ

ಚಾಮರಾಜನಗರ,ಜೂ.13– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಅಲೆ ಇದ್ದು, ಹೆಚ್.ಕೆ.ರಾಮುರವರ ಗೆಲುವು ಖಚಿತ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.



ಚಾಮರಾಜನಗರ ಜಿಲ್ಲೆಯ ಹನೂರು, ಕೊಳ್ಳೇಗಾಲ, ಚಾಮರಾಜನಗರ, ಯಳಂದೂರು ತಾಲೂಕಿನ ಬೂತ್‌ಗಳಿಗೆ ಭೇಟಿ ನೀಡಿ ಮತಯಾಚಿಸಿ ಮಾತನಾಡಿದ ಅವರು, ಮತಗಟ್ಟೆಗಳಿಗೆ ಬರುತ್ತಿರುವ ಮತದಾರರ ಸ್ಪಂದನೆ ಉತ್ತಮವಾಗಿದ್ದು. ಎಲ್ಲಿ ಹೋದರೂ ಜಾ.ದಳದ ಪರವಾದ ಅಲೆ ಕಾಣುತ್ತಿದೆ. ಕಾಂಗ್ರೆಸ್ ಇದುವರೆಗೆ ಗೆದ್ದಿಲ್ಲ. ರಾಜ್ಯದಲ್ಲಿ ಬಿ.ಜೆ.ಪಿ. ಸರ್ಕಾರ ಬಂದ ಮೇಲೆ ನಿರುದ್ಯೋಗ ತಾಂಡವವಾಡುತ್ತಿದೆ. ಡೀಸೆಲ್, ಪೆಟ್ರೋಲ್, ಗ್ಯಾಸ್‌ಬೆಲೆಗಳು ಗಗನಕ್ಕೇರಿ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಜನ ಪ್ರಾದೇಶಿಕ ಪಕ್ಷಕ್ಕೆ ಹೆಚ್ಚು ಒಲವನ್ನು ತೋರುತ್ತಿರುವುದರಿಂದ 2023ಕ್ಕೆ ಕುಮಾರಣ್ಣನವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದ್ದು, ನಿರುದ್ಯೋಗಿ ಯುವಕರಿಗೆ 10ಸಾವಿರ ಭತ್ಯೆ ನೀಡಲಾಗುವುದು. ರೈತರಿಗೆ ಆಧುನಿಕತೆ ತಂತ್ರಜ್ಞಾನದಿಂದ ವ್ಯವಸಾಯ ಮಾಡಲು ತರಬೇತಿ ನೀಡಲಾಗುವುದು ಎಂದ ಅವರು ಈ ಬಾರಿ ಹೆಚ್.ಕೆ. ರಾಮು ಗೆದ್ದೇ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಜೆ.ಡಿ.ಎಸ್. ಅಧ್ಯಕ್ಷ ಮಂಜುನಾಥ್, ಶ್ರೀರಾಂಪುರ ರಮೇಶ್, ಮಹಾದೇವ್ ಹಾಗೂ ಜೆ.ಡಿ.ಎಸ್. ಮುಖಂಡರು ಹಾಜರಿದ್ದರು.

ನಾಗರತ್ನಮ್ಮ ನಿಧನ



ಚಾಮರಾಜನಗರ: ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ದಿವಂಗತ ಚಿನ್ನಸ್ವಾಮಿ (ಪುಟ್ಟಮಾದಪ್ಪ) ಅವರ ಪತ್ನಿ ನಾಗರತ್ನಮ್ಮ (84) ಸೋಮವಾರ ನಿಧನರಾದರು. ಮೃತರು ಪುತ್ರರಾದ ಮಲ್ಲಿಕಾರ್ಜುನಸ್ವಾಮಿ, ಅಶೋಕ್ ಹಾಗೂ ಐವರು ಪುತ್ರಿಯರು, ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ ದೊಡ್ಡರಾಯಪೇಟೆಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಮಂಗಳವಾರ 14 ಜೂನ್ 2022

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಶಾಂತಿಯುತ

ಚಾ.ನಗರ ಜಿಲ್ಲೆಯಲ್ಲಿ ಶೇ.73.21 ಮತದಾನ



ಜನಪ್ರತಿನಿಧಿಗಳಾದ ಮಹೇಶ್, ನರೇಂದ್ರ, ಧ್ರುವನಾರಾಯಣ್, ಪುಟ್ಟರಂಗಶೆಟ್ಟಿ, ನಿರಂಜನಕುಮಾರ್‌ರಿಂದ ಮತ ಚಲಾವಣೆ.

ಚಾಮರಾಜನಗರ, ಜೂ.13(ಎಸ್‌ಎಸ್)– ಕರ್ನಾಟಕ ವಿಧಾನ ಪರಿಷತ್‌ಗೆ ದಕ್ಷಿಣ ಪದವೀಧರರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಶೇ.73.21 ರಷ್ಟು ಶಾಂತಿಯುತ ಮತದಾನವಾಗಿದೆ.

ಜಿಲ್ಲೆಯಲ್ಲಿ ತೆರೆಯಲಾಗಿದ್ದ 12 ಮತಗಟ್ಟೆಗಳಲ್ಲಿ ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮತದಾನ ನಡೆಯಿತು. ಜಿಲ್ಲೆಯ ಒಟ್ಟು 12,147 ಮತದಾರರ ಪೈಕಿ 8,893 ಮತದಾರರು ತಮ್ಮ ಹಕ್ಕು ಚಲಾಯಿಸಿದರು.

ಬೆಳಗ್ಗೆ 8 ಗಂಟೆಗೆ ಮತದಾನ ಆರಂಭವಾದರೂ ಸಹ ಮತದಾರರು ಪ್ರಾರಂಭದಲ್ಲಿ ಉತ್ಸಾಹ ತೋರಲಿಲ್ಲ. ಬೆಳಗ್ಗೆ 10 ಗಂಟೆವರೆಗೂ ಕೇವಲ 856 ಮತದಾರರು ಮಾತ್ರ ಮತ ಚಲಾಯಿಸಿದ್ದರಿಂದ ಶೇ. 7.05 ರಷ್ಟು ಮತದಾನವಾಗಿತ್ತು.

ಸಮಯ ಆಗುತ್ತಿದ್ದಂತೆಯೇ ಮತದಾರರು ಮತಗಟ್ಟೆಯತ್ತ ಬರಲಾರಂಭಿಸಿದರು. ಮಧ್ಯಾಹ್ನ 12 ಗಂಟೆ ವೇಳೆಗೆ 2,662 ಮತದಾರರು ತಮ್ಮ ಹಕ್ಕು ಚಲಾಯಿಸುವ ಮೂಲಕ ಶೇ.21.91ರಷ್ಟು ಮತದಾನವಾಯಿತು. ಮಧ್ಯಾಹ್ನ 2 ಗಂಟೆ ವೇಳೆಗೆ ಮತದಾನ ಚುರುಗೊಂಡು ಜಿಲ್ಲೆಯಲ್ಲಿ ಒಟ್ಟು 5,048 ಮತದಾರರು ಮತ ಚಲಾಯಿಸಿದ್ದರಿಂದ ಶೇ.41.56ರಷ್ಟು ಮತದಾನ ದಾಖಲಾಯಿತು. ಇನ್ನು ಮತದಾನಕ್ಕೆ 3 ಗಂಟೆ ಬಾಕಿ ಇರುವಾಗ ಮತದಾನ ಮತ್ತಷ್ಟು ಚುರುಕುಗೊಂಡಿತು. ಸಂಜೆ 4 ಗಂಟೆ ವೇಳೆಗೆ 7,643 ಮತದರರು ಮತ ಚಲಾಯಿಸಿ ಶೇ. 62.92 ರಷ್ಟು ಮತದಾನವಾಯಿತು. ಅಂತಿಮವಾಗಿ ಜಿಲ್ಲೆಯಲ್ಲಿ ಒಟ್ಟಾರೆ ಶೇ.73.21ರಷ್ಟು ಮತದಾನವಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಕೊನೆ ಕ್ಷಣದ ಕಸರತ್ತು: ಪುರಸಭೆ ಹಾಗೂ ವಿಧಾನಸಭಾ ಚುನಾವಣೆ ಮೀರಿಸುವಂತೆ ಈ ಬಾರಿ ಚುನಾವಣೆ ನಡೆದಿದ್ದು ವಿಶೇಷವಾಗಿತ್ತು. ಮತಗಟ್ಟೆಗಳ ಅನತಿ ದೂರದಲ್ಲಿ ರಾಜಕೀಯ ಪಕ್ಷಗಳ ಮುಖಂಡರು, ಶಾಮಿಯಾನ ಹಾಕಿಕೊಂಡು ಬೆಳಗ್ಗೆಯಿಂದ ಸಂಜೆತನಕವೂ ಸಹ ಮತಯಾಚಿಸಿದರು.

ಮತ ಚಲಾಯಿಸಲು ಆಗಮಿಸಿದ ಮತದಾರರತ್ತ ಹೋಗುತ್ತಿದ್ದ ಮುಖಂಡರು, ಮತದಾರರಿಗೆ ಕರಪತ್ರ ನೀಡಿ, ಕ್ರಮ ಸಂಖ್ಯೆ ತಿಳಿಸಿ ತಮ್ಮ ಬೆಂಬಲಿತ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯದ ಮತ ಚಲಾಯಿಸುವಂತೆ ವಿನಂತಿಸಿದರು.

ಮತದಾರರು ಮಾತ್ರ ಮುಖಂಡರ ಮನವಿಗೆ ಮುಗುಳ್ನಗುತ್ತಾ ಮತಕೇಂದ್ರದತ್ತ ಹೆಜ್ಜೆ ಹಾಕಿದರು.

ಮುಖಂಡರ ದಾಂಗುಡಿ: ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ರೈತ ಸಂಘ ಬೆಂಬಲಿತ ಅಭ್ಯರ್ಥಿ ಸೇರಿದಂತೆ ಅನೇಕ ಅಭ್ಯರ್ಥಿಗಳ ಬೆಂಬಲಿಗರು ಅಸಂಖ್ಯಾತ ಸಂಖ್ಯೆಯಲ್ಲಿ ಮತಗಟ್ಟೆ ಬಳಿ ಜಮಾಯಿಸಿದ್ದರು. ಉರಿಬಿಸಿಲನ್ನು ಲೆಕ್ಕಿಸದೇ ಮುಖಂಡರು ಮತಯಾಚನೆಯಲ್ಲಿ ತೊಡಗಿದ್ದರು.

ಶಾಸಕರ ಅಸಮಾಧಾನ: ಮತ ಚಲಾಯಿಸಿಸಲು ನೀಡಿದ್ದ ಪೆನ್ ಸರಿಯಾಗಿ ಬರೆಯದೇ ಇದ್ದದ್ದಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆಯಿತು. ಈ ಪೆನ್‌ನಲ್ಲಿ ಬರೆದರೆ, ಸರಿಯಾಗಿ ಕಾಣುವುದೇ ಇಲ್ಲ. ನಾವು ಯಾರಿಗೆ ಮತದಾನ ಮಾಡಿದ್ದೇವೆಂದು ಗೊತ್ತಾಗುವುದು ಹೇಗೆ ಎಂದು ಶಾಸಕರು ಮತಗಟ್ಟೆ ಸಿಬ್ಬಂದಿಯನ್ನು ಪ್ರಶ್ನಿಸಿದರು. ಇದಕ್ಕೆ ಸಿಬ್ಬಂದಿ ಇದು ನಾವು ತಂದಿರುವ ಪೆನ್ ಅಲ್ಲ ಸರ್, ಚುನಾವಣಾ ಆಯೋಗ ನೀಡುವ ಪೆನ್ನು ಎಂದು ಉತ್ತರಿಸಿದರೂ ಸಹ ಶಾಸಕರು ಅಸಮಾಧಾನದಿಂದಲೇ ಮತಗಟ್ಟೆಯಿಂದ ಹೊರ ನಡೆದರು.

ಶಾಸಕರಿಂದ ಮತದಾನ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಧ್ಯಾಹ್ನ ಮತ ಚಲಾಯಿಸಿದರು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಯಳಂದೂರು ತಾಲೂಕು ಕಚೇರಿಯಲ್ಲಿ, ಎನ್.ಮಹೇಶ್, ಆರ್.ನರೇಂದ್ರ ಕೊಳ್ಳೇಗಾಲದ ತಾಲೂಕು ಕಚೇರಿಯಲ್ಲಿ, ಸಿ.ಎಸ್.ನಿರಂಜನಕುಮಾರ್ ಗುಂಡ್ಲುಪೇಟೆ ತಾಲೂಕು ಕಚೇರಿಯಲ್ಲಿ ತೆರೆದಿದ್ದ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.



ಹನೂರಿನ ಸರ್ಕಾರಿ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಪದವೀಧರರು.

ದಕ್ಷಿಣ ಪದವಿಧರರ ಚುನಾವಣೆಯಲ್ಲಿ ಶಾಂತಿಯುತವಾಗಿ ಮತದಾನ ನಡೆದಿದೆ. ನಮ್ಮ ಪಕ್ಷದ ಅಭ್ಯರ್ಥಿ ಪರವಾಗಿ ನಾನು ಸಹ ನನ್ನ ಹಕ್ಕು ಚಲಾಯಿಸಿದ್ದೇನೆ. ಎಲ್ಲೆಡೆ ನಮ್ಮ ಅಭ್ಯರ್ಥಿ ಪರವಾಗಿ ಹೆಚ್ಚಿನ ಮತಗಳು ದೊರೆತಿವೆ. ಮೈ.ವಿ. ರವಿಶಂಕರ್ ಅವರು ಅತ್ಯಧಿಕ ಮತಗಳಿಂದ ಗೆಲುವು ಸಾಧಿಸಲಿದ್ದಾರೆ.

–ಎನ್.ಮಹೇಶ್, ಕೊಳ್ಳೇಗಾಲ ಶಾಸಕ.

ಜೆಡಿಎಸ್‌ನ ಮರಿತಿಬ್ಬೇಗೌಡರು ನಮ್ಮ ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿದ್ದಾರೆ. ಬಿಜೆಪಿಯಲ್ಲೂ ಹಾಗೂ ಜೆಡಿಎಸ್‌ನಲ್ಲಿ ಬಂಡಾಯವಿದ್ದು, ನಮ್ಮ ಪಕ್ಷದ ಮಧು ಜಿ.ಮಾದೇಗೌಡರು ಅತ್ಯಧಿಕ ಮತಗಳಿಂದ ಗೆಲುವು ಸಾಧಿಸಲಿದ್ದಾರೆ. ಮೊದಲ ಪ್ರಾಶಸ್ತ್ಯದ ಮತಗಳಿಂದಲೇ ಅವರ ಗೆಲುವು ಖಚಿತ.

–ಆರ್.ಧ್ರುವನಾರಾಯಣ್, ಮಾಜಿ ಸಂಸದ.

ತಾಲೂಕುವಾರು ಮತದಾನದ ವಿವರ

ಚಾಮರಾಜನಗರ: ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಪದವೀಧರರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ 8,893 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 1,2147 ಪದವೀಧರ ಕ್ಷೇತ್ರದ ಮತದಾರರಿದ್ದು, ಈ ಪೈಕಿ 7,912 ಪುರುಷರು, 4,233 ಮಹಿಳೆಯರು, ಇತರೆ ಇಬ್ಬರು ಇದ್ದಾರೆ. ಇವರಲ್ಲಿ ಒಟ್ಟು 8,893 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. 6,007 ಪುರುಷರು, 2,886 ಮಹಿಳೆಯರು ಮತ ಚಲಾಯಿಸಿದ್ದಾರೆ.

ಗುಂಡ್ಲುಪೇಟೆ ತಾಲೂಕಿನಲ್ಲಿ ಶೇ.72.07 ರಷ್ಟು ಮತದಾನವಾಗಿದೆ. ತಾಲೂಕಿನಲ್ಲಿ 1,637 ಪುರುಷರು, 744 ಮಹಿಳೆಯರು ಸೇರಿದಂತೆ ಒಟ್ಟು 2,381 ಮತದಾರರಿದ್ದು, ಇವರಲ್ಲಿ 1,222 ಪುರುಷರು, 494 ಮಹಿಳೆಯರು ಸೇರಿದಂತೆ ಒಟ್ಟು 1,716 ಮತದಾರರು ಹಕ್ಕು ಚಲಾಯಿಸಿದ್ದಾರೆ. ಚಾಮರಾಜನಗರ ತಾಲೂಕಿನಲ್ಲಿ ಶೇ.70.82 ರಷ್ಟು ಮತದಾನವಾಗಿದೆ. 2,595 ಪುರುಷರು, 1,533 ಮಹಿಳೆಯರು, ಇತರೆ ಇಬ್ಬರು ಸೇರಿದಂತೆ ಒಟ್ಟು 4,130 ಮತದಾರರು ಇದ್ದು, ಇವರಲ್ಲಿ 1,910 ಪುರುಷರು, 1,015 ಮಹಿಳೆಯರು ಸೇರಿದಂತೆ ಒಟ್ಟು 2,925 ಮತದಾರರು ಮತದಾನ ಮಾಡಿದ್ದರು. ಯಳಂದೂರು ತಾಲೂಕಿನಲ್ಲಿ ಶೇ.81.99 ರಷ್ಟು ಮತದಾನವಾಗಿದೆ. ತಾಲೂಕಿನಲ್ಲಿ 853 ಪುರುಷರು, 452 ಮಹಿಳೆಯರು ಸೇರಿದಂತೆ ಒಟ್ಟು 1,305 ಮತದಾರರಿದ್ದು, ಇವರಲ್ಲಿ 717 ಪುರುಷರು, 353 ಮಹಿಳೆಯರು ಸೇರಿದಂತೆ ಒಟ್ಟು 1,070 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಕೊಳ್ಳೇಗಾಲ ತಾಲೂಕಿನಲ್ಲಿ ಶೇ.72.60 ರಷ್ಟು ಮತದಾನವಾಗಿದೆ. 1651 ಪುರುಷರು, 1,010 ಮಹಿಳೆಯರು ಸೇರಿದಂತೆ ಒಟ್ಟು 2,661 ಮತದಾರರಿದ್ದು, 1,251 ಪುರುಷರು, 681 ಮಹಿಳೆಯರು ಸೇರಿದಂತೆ ಒಟ್ಟು1,932 ಮತದಾರರು ಮತದಾನ ಮಾಡಿದ್ದಾರೆ. ಹನೂರು ತಾಲೂಕಿನಲ್ಲಿ ಶೇ.74.85 ರಷ್ಟು ಮತದಾನವಾಗಿದ್ದು, 1,176 ಪುರುಷರು, 494 ಮಹಿಳೆಯರು ಸೇರಿದಂತೆ ಒಟ್ಟು 1,670 ಮತದಾರರಿದ್ದಾರೆ. ಇವರಲ್ಲಿ 907 ಪುರುಷರು, 343 ಮಹಿಳೆಯರು ಸೇರಿದಂತೆ ಒಟ್ಟು 1250 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಚಾಮುಲ್ 9 ನಿರ್ದೇಶಕ ಸ್ಥಾನಗಳಿಗೆ ಇಂದು ಚುನಾವಣೆ

● ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಮತದಾನ ● 5 ಗಂಟೆ ವೇಳೆಗೆ ಫಲಿತಾಂಶ



ಚಾಮುಲ್ 9 ನಿರ್ದೇಶಕ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಲಿದ್ದು, ಅಗತ್ಯ ಸಿದ್ಧತೆಗಳು ಪೂರ್ಣಗೊಂಡಿವೆ. ಸಂಜೆ 4.30ಕ್ಕೆ ಮತ ಎಣಿಕೆ ಪ್ರಾರಂಭವಾಗಲಿದ್ದು, ಸುಮಾರು 5.30ರ ವೇಳೆಗೆ ಫಲಿತಾಂಶ ಹೊರಬೀಳುವ ಸಾಧ್ಯತೆಗಳಿವೆ.

–ಕೆ.ಎಂ.ರಾಜೇಂದ್ರ ಪ್ರಸಾದ್, ಚಾಮುಲ್ ಚುನಾವಣಾಧಿಕಾರಿ.

ಚಾಮರಾಜನಗರ, ಜೂ. 13 (ಎಸ್‌ಎಸ್)–ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ(ಚಾಮುಲ್) ಆಡಳಿತ ಮಂಡಳಿಯ 9 ನಿರ್ದೇಶಕ ಸ್ಥಾನಗಳಿಗೆ ನಾಳೆ (ಜೂ.14) ಚುನಾವಣೆ ನಡೆಯಲಿದೆ.

ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿರುವ ಚಾಮುಲ್‌ನ ಸಂಕೀರ್ಣದಲ್ಲಿ ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ನಂತರ ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ.

ಚುನಾವಣೆಗೆ ಬೇಕಾದ ಪೂರ್ವ ಸಿದ್ಧತೆಗಳು ಈಗಾಗಲೇ ಪೂರ್ಣಗೊಂಡಿದೆ. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಸೋಮವಾರ ಖುದ್ದು ಭೇಟಿ ನೀಡಿ, ಚುನಾವಣೆಯ ಪೂರ್ವಸಿದ್ಧತೆ ಪರಿಶೀಲಿಸಿದರು. ಚುನಾವಣೆಯನ್ನು ಪಾರದರ್ಶಕ ಹಾಗೂ ಸುಸೂತ್ರವಾಗಿ ನಡೆಸುವಂತೆ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಇದೇ ವೇಳೆ ಸೂಚಿಸಿದರು.

ಜಿಲ್ಲೆಯ ಎಲ್ಲಾ ಮಹಿಳಾ ಸಹಕಾರ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದ 1 ಸ್ಥಾನ, ಚಾಮರಾಜನಗರ ತಾಲೂಕು, ಗುಂಡ್ಲುಪೇಟೆ ತಾಲೂಕು ಹಾಗೂ ಹನೂರು ತಾಲೂಕಿನ ತಲಾ 2 ಸ್ಥಾನ(ಒಟ್ಟು 6 ಸ್ಥಾನ) ಕೊಳ್ಳೇಗಾಲ, ಯಳಂದೂರು ತಾಲೂಕಿನ ತಲಾ 1 ಸ್ಥಾನ(ಒಟ್ಟು 2 ಸ್ಥಾನ)ಕ್ಕೆ ಚುನಾವಣೆ ನಡೆಯಲಿದೆ.

ಒಟ್ಟು 9 ಸ್ಥಾನಗಳಿಗೆ 25 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ತಮ್ಮ ಅದೃಷ್ಟ ಪರೀಕ್ಷಿಸಿದ್ದಾರೆ. ಜಿಲ್ಲಾ ಮಹಿಳಾ ಕ್ಷೇತ್ರದ 84 ಮತದಾರರು ಚಾಮರಾನಗರ ತಾಲೂಕಿನ 116, ಗುಂಡ್ಲುಪೇಟೆ ತಾಲೂಕಿನ 117, ಹನೂರು ತಾಲೂಕಿನ 73, ಕೊಳ್ಳೇಗಾಲ ತಾಲೂಕಿನ 46 ಹಾಗೂ ಯಳಂದೂರು ತಾಲೂಕಿನ 13 ಮತದಾರರು ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ.

ಆನೆದಂತ ಮಾರಾಟಕ್ಕೆ ಯತ್ನಿಸಿದ್ದ ಮೂವರ ಬಂಧನ; ಓರ್ವ ಪರಾರಿ

ಕೊಳ್ಳೇಗಾಲ,ಜೂ.13(ನಾಗೇಂದ್ರ ಸ್ವಾಮಿ)– ಚಿಕ್ಕಮಗಳೂರಿನಿಂದ ಕೊಳ್ಳೇಗಾಲ ಮೂಲಕ ಬೆಂಗಳೂರಿಗೆ ತೆರಳಿ ಮಾರಾಟ ಮಾಡಲು ಕಾರೊಂದರಲ್ಲಿ ಆನೆ ದಂತಗಳನ್ನು ಸಾಗಿಸುತ್ತಿದ್ದ ಆರೋಪಿಗಳನ್ನು ಬಂಧಿಸಿ, 15 ಕೆಜಿಗೂ ಅಧಿಕ ತೂಕದ 2 ಆನೆದಂತ ವಶ ಪಡಿಸಿಕೊಳ್ಳುವಲ್ಲಿ ಕೊಳ್ಳೇಗಾಲ ಸಿಐಡಿ ವಿಶೇಷ ಅರಣ್ಯ ಸಂಚಾರಿ ದಳದ ಪೊಲೀಸರು ಯಶಸ್ವಿಯಾಗಿದ್ದಾರೆ.



ಚಿಕ್ಕಮಗಳೂರು ಜಿಲ್ಲೆಯ ಕೊಳಗಾಮೆ ಗ್ರಾಮದ ಪ್ರೀತಮ್(31), ಜಾಗರ ಗ್ರಾಮದ ಜಗದೀಶ(21), ಅದೇ ಗ್ರಾಮದ ಪುನೀತ್(21) ಬಂಧಿತ ಆರೋಪಿಗಳು. ಮತ್ತೋರ್ವ ಆರೋಪಿ ಕೊಳಗಾಮೆ ಗ್ರಾಮದ ಹೇಮಂತ್ ಪರಾರಿಯಾಗಿದ್ದಾನೆ.

ಆರೋಪಿಗಳು ಚಿಕ್ಕಮಗಳೂರಿನಿಂದ ಕಾರಿ (ಕೆಎ–04, ಎಂಎಫ್–853)ನಲ್ಲಿ ಕೊಳ್ಳೇಗಾಲಕ್ಕೆ ಎರಡು ಆನೆದಂತಗಳನ್ನು ಮಾರಾಟಕ್ಕಾಗಿ ಬೆಂಗಳೂರಿಗೆ ಸಾಗಿಸಲು ತರುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಸಿಐಡಿ ಅರಣ್ಯ ಸಂಚಾರಿ ದಳದ ಸಬ್‌ಇನ್ಸ್‌ಪೆಕ್ಟರ್ ಆನಂದ್‌ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿದ, ಸತತ 4 ಗಂಟೆಗಳ ಕಾಲ ಕಾದು ತಾಲೂಕಿನ ಸತ್ತೇಗಾಲ ಗ್ರಾಮದ ಚೆಕ್‌ಪೋಸ್ಟ್ ಬಳಿ ಕಾರನ್ನು ಅಡ್ಡಗಟ್ಟಿ ಮೂರು ಮಂದಿ ಆರೋಪಿಗಳನ್ನು ಬಂಧಿಸಿದೆ. ಈ ವೇಳೆ ಆರೋಪಿ ಹೇಮಂತ ಪರಾರಿಯಾಗಿದ್ದಾನೆ. ಬಂಧಿತರಿಂದ ಕಾರು, 3 ಮೊಬೈಲ್ ಹಾಗೂ 15 ಕೆಜಿ 900 ಗ್ರಾಂ. ತೂಕದ 2 ಆನೆ ದಂತಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಳ್ಳಲಾಗಿದೆ.

ಸತ್ತ ಆನೆಯ ದಂತಗಳು: ಜಾಗರ ಅರಣ್ಯ ಪ್ರದೇಶದಲ್ಲಿ ಸತ್ತ ಆನೆಯೊಂದರಿಂದ 2 ದಂತಗಳನ್ನು ಈ ನಾಲ್ವರು ಆರೋಪಿಗಳು ಬೇರ್ಪಡಿಸಿದ್ದು, ಹಣದಾಸೆಯಿಂದ ಮಾರಾಟಕ್ಕಾಗಿ ಸಾಗಿಸುತ್ತಿರುವುದಾಗಿ ಸತ್ಯ ಬಾಯ್ಬಿಟ್ಟಿದ್ದಾರೆ.

ಕಾರ್ಯಾಚರಣೆಯಲ್ಲಿ ಮುಖ್ಯಪೇದೆಗಳಾದ ರಾಮಚಂದ್ರ ಸ್ವಾಮಿ, ತುಳೀವುಲ್ಲಾ, ಬಸವರಾಜು, ಶಂಕರ್, ಚಾಲಕ ಪ್ರಭಾಕರ ಇನ್ನಿತರು ಭಾಗವಹಿಸಿದ್ದರು. ಸದ್ಯ ಪರಾರಿಯಾಗಿರುವ ಆರೋಪಿ ಪತ್ತೆಗಾಗಿ ಸಿಐಡಿ ಅರಣ್ಯ ಸಂಚಾರಿ ದಳ ಬಲೆ ಬೀಸಿದ್ದು, ಮೂವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರು ರಕ್ಷಣೆ

ಬೇಗೂರು, ಜೂ.13(ಕಿರಣ್)–ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ರಕ್ಷಿಸಿ ಓರ್ವನನ್ನು ಬಂಧಿಸಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದ ಬಳಿ ನಡೆದಿದೆ. ಬೇಗೂರು ಹೋಬಳಿಯ ಕಬ್ಬಹಳ್ಳಿ ಬಳಿ ಅಕ್ರಮವಾಗಿ ಆಟೋವೊಂದರಲ್ಲಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 3 ಜಾನುವಾರುಗಳನ್ನು ಬೇಗೂರು ಠಾಣೆ ವೃತ್ತ ನಿರೀಕ್ಷಕ ಕಿರಣ್‌ಕುಮಾರ್ ನೇತೃತ್ವದಲ್ಲಿ ಪಿಎಸ್‌ಐ ಜಗದೀಶ್ ಧೂಳಶೆಟ್ಟಿ, ಸಿಬ್ಬಂದಿ ರಕ್ಷಿಸಿದ್ದಾರೆ.

ಶಿವಬಸಪ್ಪ ನಿಧನ



ಚಾಮರಾಜನಗರ, ಜೂ.13–ತಾಲೂಕಿನ ಕೋಡಿಮೋಳೆ ಬಸವನಪುರ ಗ್ರಾಮದ ನಿವಾಸಿ ಶಿವಬಸಪ್ಪ(90) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಮಹದೇವಮ್ಮ, ಪುತ್ರ ಪ್ರಿಯದರ್ಶಿನಿ ಪೆಟ್ರೋಲ್ ಬಂಕ್ ಮಾಲೀಕ ನಾಗಬಸವಣ್ಣ, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರು ಮಾಜಿ ಶಾಸಕ ದಿವಂಗತ ಗುರುಸ್ವಾಮಿ ಅವರ ಭಾವ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಸ್ವಗ್ರಾಮದ ಅವರ ತೋಟದಲ್ಲಿ ನಡೆಯಲಿದೆ.

ಕಾಫಿ ಬೆಳೆಗಾರರ ಆರ್ಥಿಕ ಸಮಸ್ಯೆ ಬಗ್ಗೆ ಸರ್ಕಾರದ ಚಿಂತನೆ ಅಗತ್ಯ

ವಿರಾಜಪೇಟೆ, ಜೂ.13– ಕೊಡಗಿನಲ್ಲಿ ಕಾಫಿ ಬೆಳೆ ಉಳಿದುಕೊಳ್ಳುವುದರೊಂದಿಗೆ ಕೃಷಿ ಪ್ರಕೃತಿಸೌಂದರ್ಯ ಮತ್ತು ಅರಣ್ಯಗಳು ಉಳಿದುಕೊಂಡಿರುವುದೇ ಕಾಫಿ ಬೆಳೆಗಾರರ ಕೊಡುಗೆಯಾಗಿದೆ ಎಂದು ಕಾಫಿ ಬೆಳೆಗಾರರಾದ ನಂದಸುಬ್ಬಯ್ಯ ಹೇಳಿದರು



ಅಖಿಲ ಭಾರತ ಕಿಸಾನ್ ಸಭಾ ಪ್ರಾಂತ ರೈತ ಸಂಘದ ವತಿಯಿಂದ ಪಟ್ಟಣದ ದೊಡ್ಡಟ್ಟಿ ಚೌಕಿಯಲ್ಲಿರುವ ದರ್ಶನ್ ರೆಸಿಡೆನ್ಸಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾಫಿ ಬೆಳೆಗಾರರ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಕಾವೇರಿ ನದಿ ಹರಿದು ದಕ್ಷಿಣ ಭಾರತ ಸಮೃದ್ಧಿಯಾಗಿದೆ. ಕಾಫಿ ಬೆಳೆಗೆ ಬೆಲೆ ಏರಿಳಿತವಾಗುತ್ತಿದೆ. ಭಾರತದಲ್ಲಿ ಇತರೇ ದೇಶಗಳೊಂದಿಗೆ ಮಾಡಿಕೊಂಡ ಸ್ವತಂತ್ರ ವ್ಯಾಪಾರ ಒಪ್ಪಂದಗಳು ಇಲ್ಲಿನ ಬೆಳೆಗಳ ಬೆಲೆ ಕುಸಿತಕ್ಕೆ ಕಾರಣವಾಗುತ್ತಿದೆ. ಕಾಳುಮೆಣಸಿನ ದರ ಭಾರತದಲ್ಲಿ ರೂ.300ಕ್ಕೆ ಕುಸಿದಿತ್ತು ಕೋವಿಡ್‌ನಿಂದ ದೇಶಗಳ ನಿರ್ಬಂಧ ಕಾರಣ ಕಾಳು ಮೆಣಸು ರೂ.500 ಏರಿಕೆಯಿಂದ ಬೆಳೆಗಾರರಿಗೆ ಅನುಕೂಲವಾಗಿದೆ ಎಂದ ನಂದಸುಬ್ಬಯ್ಯ, ಕೊಡಗಿಗೆ ರೈಲ್ವೆ ಯೋಜನೆ ಮುಖ್ಯವಾಗಿದೆ. ಇದರಿಂದ ಆರ್ಥಿಕತೆಯಲ್ಲಿ ಕಾಫಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕಿದೆ. ಬೆಳೆಗಾರರಿಗೆ ಸಂಪನ್ಮೂಲದ ಕೊರತೆ ಕೂಲಿ ಕಾರ್ಮಿಕರಿಗೆ ಸಂಬಳ ಇತ್ಯಾದಿಗಳನ್ನು ನೀಡಬೇಕು. ಅನೇಕರು ಕೃಷಿಯನ್ನೆ ಬಿಟ್ಟು ನಗರಗಳತ್ತ ಮುಖ ಮಾಡುತ್ತಿದ್ದು ಅವರನ್ನು ಮತ್ತೆ ಕೃಷಿಯತ್ತ ಸೆಳೆಯಬೇಕಾಗಿದೆ ಎಂದರು.

ಅಖಿಲ ಭಾರತ ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್ ಮಾತನಾಡಿ, ದಕ್ಷಿಣ ಭಾರತದಲ್ಲಿ ನಾಲ್ಕು ಜಿಲ್ಲೆಗಳಲ್ಲಿ 5 ಲಕ್ಷ ಬೆಳೆಗಾರರು ಕಾಫಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಅದರಲ್ಲಿ ಶೇ.70ರಷ್ಟು ಕಾಫಿ ಮಾರಾಟ ಮಾಡಿ 30 ರಷ್ಟು ಸ್ವಂತಕ್ಕೆ ಉಪಯೋಗಿಸುತ್ತಾರೆ. ದೇಶದಲ್ಲಿ ಕಚ್ಚಾ ತೈಲಗಳನ್ನು ಹೊರತುಪಡಿಸಿದರೆ ಕಾಫಿ ಬೆಳೆಯು ಅತೀ ಹೆಚ್ಚು ಆದಾಯ ಗಳಿಸುವ ಉತ್ಪನ್ನವಾಗಿದೆ. ಒಂದು ಎಕರೆಗೆ ಎರಡು ಲಕ್ಷ ಆದಾಯ ಗಳಿಸುವಂತಾಗಬೇಕು. ಆದರೆ ಮಧ್ಯವರ್ತಿಗಳಿಂದ ಮತ್ತು ಸರ್ಕಾರದ ಅಸಂಬದ್ಧ ನೀತಿಗಳಿಂದ ಸಾಧ್ಯವಾಗುತ್ತಿಲ್ಲ. ಅದರಿಂದ ಅಖಿಲ ಭಾರತ ಕಿಸಾನ್ ಸಭಾದ ವತಿಯಿಂದ ಕಾಫಿ ಬೆಳೆಗಾರರ ಆದಾಯವನ್ನು ಹೆಚ್ಚಿಸುವ ಕುರಿತು ಮಾರ್ಗೋಪಾಯಗಳನ್ನು ಕಾಣಬೇಕಾಗಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಹಕಾರ್ಯದರ್ಶಿ ನವೀನ್ ಕುಮಾರ್ ವಹಿಸಿ ಮಾತನಾಡಿ, ಬೆಳೆಗಾರರ ಸಮಸ್ಯೆಗಳನ್ನು ಬೇಡಿಕೆ ಆಧಾರದ ಮೇಲೆ ಪಟ್ಟಿಮಾಡಿ ಕಾಫಿ ಉದ್ಯಮದ ಬಿಕ್ಕಟ್ಟನ್ನು ಬಗೆಹರಿಸಬೇಕು ಎಂದರು. ಅಖಿಲ ಭಾರತ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಫಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಬೆಳೆಗಾರರನ್ನು ಸಂಘಟಿಸಿ ನಂತರ ಹೋರಾಟ ರೂಪಿಸಬೇಕಾಗಿದೆ ಎಂದರು.

ಅಖಿಲ ಭಾರತ ಕಿಸಾನ್ ಸಭಾ ಪ್ರಾಂತ ರೈತ ಸಂಘದ ಕೊಡಗು ಪ್ರಮುಖ ಡಾ. ದುರ್ಗಾಪ್ರಸಾದ್ ಮಾತನಾಡಿ, ಎರಡು ದಿನಗಳ ವಿಚಾರ ಸಂಕಿರಣದಲ್ಲಿ ಕಾಫಿ ಬೆಳೆಗಾರರಿಗೆ ನ್ಯಾಯವಾದ ಬೆಲೆ ಸಿಗಬೇಕು, ಬೆಳೆಗಾರರ ಸಾಲಮನ್ನಾ ಮಾಡಬೇಕು, ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ ಎಂದರು.

ವಿಚಾರ ಸಂಕಿರಣದಲ್ಲಿ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಹಾಗೂ ಕರ್ನಾಟಕದ ಇತರೆಡೆಗಳಿಂದಲೂ ಬೆಳೆಗಾರರು ಭಾಗವಹಿಸಿದ್ದರು. ಅಖಿಲ ಭಾರತ ಕಿಸಾನ್ ಸಭಾ ಸದಸ್ಯರುಗಳು ಹಾಜರಿದ್ದರು.

ಸಮಗ್ರ ಕೃಷಿ ಅಭಿಯಾನ ಪ್ರಚಾರಕ್ಕೆ ಚಾಲನೆ

ಮಡಿಕೇರಿ, ಜೂ.13– ಕೃಷಿ ಇಲಾಖೆ ವತಿಯಿಂದ ನೀಡಲಾಗುವ ಬಿತ್ತನೆ ಬೀಜ ಸೇರಿದಂತೆ ಕೃಷಿಗೆ ಪೂರಕವಾದ ಕಾರ್ಯಕ್ರಮಗಳ ಮಾಹಿತಿಯನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಕೃಷಿ ಅಭಿಯಾನ ಕಾರ್ಯಕ್ರಮ ಪ್ರಚಾರ ಜಾಥಾಗೆ ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಕೆ.ಜಿ.ಬೋಪಯ್ಯ ಚಾಲನೆ ನೀಡಿದ್ದಾರೆ.



ನಗರದ ತಾಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಕೃಷಿ ಇಲಾಖೆ ವತಿಯಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಕೃಷಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೃಷಿ ಇಲಾಖೆಯಿಂದ ನೀಡಲಾಗುವ ಸಹಾಯಧನ ಸೇರಿದಂತೆ ಸರ್ಕಾರದ ಎಲ್ಲಾ ಸೌಲಭ್ಯಗಳು ಕೃಷಿಕರಿಗೆ ತಲುಪಬೇಕು ಎಂದು ಹೇಳಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಬಾನಾ ಎಂ.ಷೇಕ್ ಅವರು ಮಾತನಾಡಿ, ಕೃಷಿ ಇಲಾಖೆಯ ನಡಿಗೆ ರೈತರ ಮನೆ ಬಾಗಿಲಿಗೆ ಕಾರ್ಯಕ್ರಮದಡಿ ಕೃಷಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಕೃಷಿ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ, ರಾಷ್ಟ್ರೀಯ ಕೃಷಿ ಮೂಲಭೂತ ಸೌಕರ್ಯ ನಿಧಿ ಯೋಜನೆ ಹಾಗೂ ಪ್ರಧಾನಮಂತ್ರಿ ಕಿರು ಆಹಾರ ಸಂಸ್ಕರಣೆ ನಿಯಮಬದ್ಧಗೊಳಿಸುವಿಕೆ, ಬೆಳೆ ಸಮೀಕ್ಷೆ, ಬೆಳೆ ವಿಮೆ ಮತ್ತು ಕೃಷಿ ಸಾಲ ಸೌಲಭ್ಯ, ಕೃಷಿ ಪರಿಕರಗಳು, ಕೃಷಿ ಯಂತ್ರೋಪಕರಣಗಳು, ಬಾಡಿಗೆ ಆಧಾರಿತ ಸೇವಾ ಕೇಂದ್ರ (ಯಂತ್ರಧಾರೆ) ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು ಮತ್ತಿತರ ಬಗ್ಗೆ ಮಾಹಿತಿ ನೀಡಿದರು.

ಕೀಟನಾಶಕ/ ಕಳೆನಾಶಕ ಬಳಕೆ ಹೆಚ್ಚಾಗುತ್ತಿರುವುದರಿಂದ ಪರೋಪಕಾರಿ ಜೀವಿಗಳ ಸಂತತಿ ಅವನತಿಯ ಕಡೆಗೆ ಹೋಗುತ್ತಿರುವುದರಿಂದ ಕಳೆನಾಶಕಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಬೇಕು ಎಂದು ಶಬಾನಾ ಎಂ.ಷೇಖ್ ಕೋರಿದರು.

ಸಮಗ್ರ ಕೃಷಿ ಅಭಿಯಾನ ಪ್ರಚಾರ ವಾಹನವು ಜೂ.14 ರಂದು ಕುಕೆ, ಭಾಗಮಂಡಲ ಅಯ್ಯಂಗೇರಿ ಗ್ರಾಮ ಪಂಚಾಯಿತಿಗಳಲ್ಲಿ ಪ್ರಚಾರ ಕೈಗೊಂಡು, ಜೂ.15 ರಂದು ಬಲ್ಲಮಾವಟಿ, ನಾಪೋಕ್ಲು, ಎಮ್ಮೆಮಾಡು ಗ್ರಾಮ ಪಂಚಾಯಿತಿ, ಜೂ.16 ರಂದು ಕಕ್ಕಬೆ, ನರಿಯಂದಡ ಪಾರಾಣೆ ಗ್ರಾಮ ಪಂಚಾಯಿತಿಗಳಲ್ಲಿ ಸಂಚರಿಸಲಿದೆ ಎಂದು ಕೃಷಿ ಅಧಿಕಾರಿ ನಾರಾಯಣ ರೆಡ್ಡಿ ಅವರು ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆಯ ಮುತ್ತಪ್ಪ, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಸ್ನೇಹ, ಕೃಷಿ ಇಲಾಖೆಯ ಎ.ಸಿ. ಗಿರೀಶ್, ತಾಂತ್ರಿಕ ಅಧಿಕಾರಿ ಇತರರಿದ್ದರು.

ಕೊಡಗಿನಲ್ಲಿ ಮಳೆ ಆರಂಭ; ಭಯದಲ್ಲಿ ಜನತೆ

ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ನಗರಸಭೆ ಸೂಚನೆ

ಮಡಿಕೇರಿ, ಜೂ.13– ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಪ್ರಾರಂಭವಾಗಿದ್ದು, ಗುಡ್ಡ ಮೇಲಿರುವ ಮಡಿಕೇರಿ ನಗರದ ಜನರಿಗೆ ಭಯ ಶುರುವಾಗಿದೆ. ನಗರದ ಆರು ಬಡಾವಣೆಗಳು ಅಪಾಯದಲ್ಲಿವೆ ಎಂದು ನಗರಸಭೆಯೇ ಮಾಹಿತಿ ನೀಡಿದೆ. ಮಳೆಗಾಲ ಬಂದಾಗ ಈ ಬಡಾವಣೆಗಳ ಜನರ ಬದುಕು ನರಕವಾಗುತ್ತದೆ. ವಿಶೇಷವಾಗಿ ಮಡಿಕೇರಿ ನಗರದ ಚಾಮುಂಡೇಶ್ವರಿ ನಗರ, ಇಂದಿರಾ ನಗರ, ಮಂಗಳಾದೇವಿ ನಗರ, ವಿನಾಯಕ ಬಡಾವಣೆ ಬಹಳ ಅಪಾಯಕಾರಿಯಾಗಿದೆ. 2018ರ ಮಹಾಪ್ರಳಯದಲ್ಲೇ ಇಲ್ಲಿ 100ಕ್ಕೂ ಅಧಿಕ ಮನೆಗಳು ಧರೆಗುರುಳಿದೆ. ಇಂದಿಗೂ ಇಲ್ಲಿ ಕುಸಿದ ಮನೆಗಳ ಪಳೆಯುಳಿಕೆಗಳು ಆ ದಿನಗಳ ಕರಾಳತೆಯನ್ನು ನೆನಪಿಸುತ್ತಿವೆ. ಈ ವರ್ಷವೂ ಮಳೆ ಅತಿಯಾದರೆ ಚಾಮುಂಡೇಶ್ವರಿ ನಗರ, ಇಂದಿರಾನಗರ ಮಂಗಳಾದೇವಿ ನಗರ ಸೇರಿದಂತೆ 6 ಪ್ರದೇಶಗಳಲ್ಲಿ ಭೂ ಕುಸಿತವಾಗುವ ಅಪಾಯವಿದೆ. ಹಾಗಾಗಿ ಮಡಿಕೇರಿ ನಗರಸಭೆ ಈಗಾಗಲೇ ಗುಡ್ಡಗಾಡು ನಿವಾಸಿಗಳಿಗೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ನೋಟಿಸ್ ನೀಡಲು ತೀರ್ಮಾನಿಸಿದೆ.

ಪ್ರತಿ ವರ್ಷ ಮಳೆಗಾಲದಲ್ಲಿ ಅತಂತ್ರರಾಗಿ ಮನೆ ಬಿಟ್ಟು ಓಡುವುದು, ಮಳೆ ಕಡಿಮೆ ಆದಮೇಲೆ ಮತ್ತೆ ಮನೆಗೆ ಮರಳುವುದು ಇಲ್ಲಿಯ ಜನರ ಜೀವನವಾಗಿದೆ. ಭೂ ಕುಸಿತ ಪ್ರವಾಹದಿಂದ ತಮಗೆ ಮುಕ್ತಿ ಇಲ್ಲವೇ ಎಂದು ಬೇಸರದಿಂದ ಪ್ರಶ್ನಿಸುವ ನಿವಾಸಿಗಳು ಶಾಶ್ವತ ಪರಿಹಾರಕ್ಕೆ ಆಗ್ರಹಿಸಿದ್ದಾರೆ.

ಕೌಟುಂಬಿಕ ಕಲಹ ಪತ್ನಿ ಹತ್ಯೆ

ಗೋಣಿಕೊಪ್ಪ, ಜೂ.13– ಪತಿ ಪತ್ನಿ ನಡುವೆ ನಡೆದ ಕಲಹ ಪತ್ನಿಯ ಹತ್ಯೆಯಲ್ಲಿ ಅಂತ್ಯ ಕಂಡ ಘಟನೆ ಪೊನ್ನಂಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಪೊನ್ನಂಪೇಟೆ ಕುಂಬಾರಕಟ್ಟೆ ಸಮೀಪದ ಹಾಡಿಯೊಂದರ ನಿವಾಸಿ ಮುತ್ತಕ್ಕಿ(46) ಹತ್ಯೆಯಾದವರು.

ಜೆ.ಪಿ.ರಾಜು ಮತ್ತು ಮುತ್ತಕ್ಕಿ ದಂಪತಿಯಾಗಿದ್ದು, ಕ್ಷುಲ್ಲಕ ಕಾರಣಕ್ಕಾಗಿ ಇಬ್ಬರ ನಡುವೆ ಕಲಹವಾಗಿದೆ ಎನ್ನಲಾಗಿದೆ. ಈ ವೇಳೆ ಪತಿ ರಾಜು ಕತ್ತಿಯಿಂದ ಪತ್ನಿ ಮುತ್ತಕ್ಕಿ ಕುತ್ತಿಗೆ ಮತ್ತು ದೇಹದ ಇತರ ಭಾಗಕ್ಕೆ ಹಲ್ಲೆ ನಡೆಸಿದ್ದಾನೆ. ಇದರಿಂದ ಆಕೆಗೆ ಗಂಭೀರ ಸ್ವರೂಪದ ಗಾಯಗಳಾಗಿತ್ತು. ಗಾಯಗೊಂಡಿದ್ದ ಮುತ್ತಕ್ಕಿಯನ್ನು ಚಿಕಿತ್ಸೆಗಾಗಿ ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಆಕೆ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾಳೆ. ವಿಷಯ ತಿಳಿದ ಪೊನ್ನಂಪೇಟೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ವಿರಾಜಪೇಟೆ ಸರಕಾರಿ ಆಸ್ಪತ್ರೆ ಶವಾಗಾರದಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ಘಟನೆ ಕುರಿತು ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ಸೆಕ್ಷನ್ 302 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣದ ಆರೋಪಿ ರಾಜು ಹಲ್ಲೆ ನಂತರ ಪರಾರಿಯಾಗಿದ್ದ. ಪೊಲೀಸರು ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿರುವುದಾಗಿ ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

ಕೋದಂಡ ಬಿ.ದೇವಯ್ಯ ನಿಧನ

ಮಡಿಕೇರಿ,ಜೂ.13– ಮೂಲತಃ ಸುಂಟಿಕೊಪ್ಪ ಮಾದಾಪುರ ಮಟ್ಟದ್‌ಕಾಡ್ ಎಸ್ಟೇಟ್ ಮಾಲಿಕ ಕೋದಂಡ ಬಿ.ದೇವಯ್ಯ (ದೇವಿ–75) ಸೋಮವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರಿಯರು, ಬಂಧು ಬಳಗವನ್ನು ಅಗಲಿದ್ದಾರೆ.

ಇವರು ಕೊಡಗು ವಿದ್ಯಾಲಯ ಶಾಲೆಯ ಸ್ಥಾಪಕ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಮಡಿಕೇರಿಯಲ್ಲಿರುವ ಕೋದಂಡ ಕುಟುಂಬದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಮಾಚಯ್ಯ(ಮಿಟ್ಟು)

ಗುಡ್ಡೆಹೊಸೂರು, ಜೂ.13– ಸಮೀಪದ ಚಿಕ್ಕಬೆಟ್ಟಗೇರಿ ಗ್ರಾಮದ ನಿವಾಸಿ ಉದ್ದಿನಾಡಂಡ ದಿವಂಗತ ಪೊನ್ನಪ್ಪ ಅವರ ಪುತ್ರ ಮಾಚಯ್ಯ ಅಲಿಯಾಸ್ ಮಿಟ್ಟು (54) ನಿಧನರಾದರು.

ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಚಿಕ್ಕಬೆಟ್ಟಗೇರಿಯಲ್ಲಿ ನಡೆಯಿತು.

ದುಬಾರೆ ಅರಣ್ಯದಲ್ಲೇ ಕುಶಾ ಬಿಡಾರ

ಮಡಿಕೇರಿ,ಜೂ.13– ದುಬಾರೆ ಸಾಕಾನೆ ಶಿಬಿರದ ಸದಸ್ಯನಾಗಿ, ಕಳೆದೆರಡು ವರ್ಷಗಳ ಹಿಂದೆ ಅರಣ್ಯಕ್ಕೆ ಬಿಡಲಾಗಿದ್ದ ಸಾಕಾನೆ ಕುಶಾ, ಮತ್ತೆ ದುಬಾರೆ ಅರಣ್ಯ ವ್ಯಾಪ್ತಿಯಲ್ಲಿರುವುದು ಕಂಡು ಬಂದಿದೆ. ರಾಷ್ಟ್ರೀಯ ಪರಿಸರವಾದಿಗಳ ಒತ್ತಾಯಕ್ಕೆ ಮಣಿದು ಕಳೆದ ಕೆಲ ಸಮಯದ ಹಿಂದೆ ಕುಶಾನನ್ನು ಕೇರಳ–ಕರ್ನಾಟಕ ಗಡಿಯ ಮೀಸಲು ಅರಣ್ಯಕ್ಕೆ ಬಿಡಲಾಗಿತ್ತಾದರೂ ಕಳೆದೆರಡು ದಿನಗಳಿಂದ ಕುಶಾ 4 ಕಾಡಾನೆ ಸಂಗಾತಿಗಳೊಡನೆ ದುಬಾರೆಯ ಸಾಕಾನೆ ಶಿಬಿರದಲ್ಲಿ ಸುತ್ತ ಸಂಚರಿಸುತ್ತಿರುವುದು ರೇಡಿಯೋ ಕಾಲರ್‌ನಿಂದ ಖಚಿತವಾಗಿದೆ.



2018ರಲ್ಲಿ ಚೆಟ್ಟಳ್ಳಿ ಸಮೀಪ ಕಂಡಕರೆಯಲ್ಲಿ ಕೃಷಿಕರಿಗೆ ತೊಂದರೆ ನೀಡುತ್ತಿದ್ದ ಕಾಡಾನೆಯನ್ನು ಸೆರೆಹಿಡಿದು ದುಬಾರೆ ಸಾಕಾನೆ ಶಿಬಿರದಲ್ಲಿ ಪಳಗಿಸಿ 'ಕುಶಾ' ಎಂದು ಹೆಸರಿಡಲಾಗಿತ್ತು. 2019ರಲ್ಲಿ ಮದವೇರಿದ ಕುಶಾ ತಪ್ಪಿಸಿಕೊಂಡು ಅರಣ್ಯದೊಳಗೆ ಸೇರಿಕೊಂಡು ಶಿಬಿರಕ್ಕೆ ಮರಳಿರಲಿಲ್ಲ. ಹೀಗಾಗಿ ಅರಣ್ಯ ಇಲಾಖಾ ಸಿಬ್ಬಂದಿ ತಂಡೋಪತಂಡವಾಗಿ ಹುಡುಕಾಡಿದಾಗ ಕಾಡಾನೆಗಳ ಹಿಂಡಿನೊಳಗೆ ಕುಶಾ ಇರುವುದು ಕಂಡು ಬಂದಿತ್ತು. ಕುಶಾ ತಪ್ಪಿಸಿಕೊಂಡು ಒಂದು ವರ್ಷದ ನಂತರ ಅರಣ್ಯ ಸಿಬ್ಬಂದಿಗಳು ಹರಸಾಹಸ ಪಟ್ಟು ಮತ್ತೆ ಸೆರೆ ಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದರು.

ಮಾತ್ರವಲ್ಲದೇ ಕಾಡಾನೆಗಳ ಸಹವಾಸದಿಂದಾಗಿ ದುರ್ವರ್ತನೆ ತೋರುತ್ತಿದ್ದ ಪರಿಣಾಮ ಕುಶಾನನ್ನು ಮತ್ತೆ ಟ್ರೋರ್‌ನಲ್ಲಿಟ್ಟು ಪಳಗಿಸಲಾಗುತ್ತಿತ್ತು. ಈ ಬೆಳವಣಿಗೆಗಳ ನಡುವೆ ಕುಶಾನನ್ನು ಬಂಧಿಸಿ ಚಿತ್ರಹಿಂಸೆ ನೀಡಲಾಗುತ್ತಿದೆ ಎಂಬ ಸುದ್ದಿ ರಾಷ್ಟ್ರ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿ ಕುಶಾನನ್ನು ಮರಳಿ ಕಾಡಿಗೆ ಬಿಡಲೇಬೇಕೆಂಬ ಒತ್ತಾಯ ಕೇಳಿ ಬಂದಿತ್ತು. ಸರಕಾರದ ಆದೇಶದ ಮೇರೆಗೆ ಕುಶಾನಿಗೆ ರೇಡಿಯೋ ಕಾಲರ್ ಅಳವಡಿಸಿ ಕರ್ನಾಟಕ–ಕೇರಳ ಗಡಿ ಭಾಗದ ಮೀಸಲು ಅರಣ್ಯದಲ್ಲಿ ಬಿಡಲಾಗಿತ್ತು. ರೇಡಿಯೋ ಕಾಲರ್ ಮೂಲಕ ಕುಶಾನ ಚಲನವಲನದ ಬಗ್ಗೆ ಅರಣ್ಯ ಇಲಾಖೆ ನಿಗಾವಹಿಸಿತ್ತು. ಕಳೆದ ಎರಡು ದಿನಗಳ ಹಿಂದೆ ರೇಡಿಯೋಕಾಲರ್ ನೀಡಿದ ಮಾಹಿತಿ ಆಧರಿಸಿ ದುಬಾರೆಯ ಸಾಕಾನೆ ಶಿಬಿರದ ಸಮೀಪವೇ ಕುಶಾ ಇರುವಿಕೆಯ ಬಗ್ಗೆ ಮಾಹಿತಿ ಪಡೆದ ಅರಣ್ಯ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ್ದು, ಕುಶಾ ತನ್ನ 4 ಕಾಡಾನೆಗಳೊಂದಿಗೆ ದುಬಾರೆ ಅರಣ್ಯದಲ್ಲಿ ಸಂಚರಿಸುತ್ತಿರುವ ಬಗ್ಗೆ ಅರಣ್ಯ ಇಲಾಖೆ ಉನ್ನತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸೋ.ಪೇಟೆಯಲ್ಲಿ ಅನ್ನ ಭಾಗ್ಯ ಅಕ್ಕಿ ವಶ

ಸೋಮವಾರಪೇಟೆ, ಜೂ.13– ಪಟ್ಟಣದ ಜನತಾ ಕಾಲೋನಿಯ ಮನೆಯೊಂದರಲ್ಲಿ ಅನ್ನ ಭಾಗ್ಯ ಯೋಜನೆಯ ಅಕ್ಕಿಯನ್ನು ಅಕ್ರಮ ದಾಸ್ತಾನು ಮಾಡಿದ ಪ್ರಕರಣವನ್ನು ಆಹಾರ ಇಲಾಖೆಯ ಅಧಿಕಾರಿಗಳು ಪತ್ತೆ ಹಚ್ಚಿ ವಶಕ್ಕೆ ಪಡೆದಿರುವ ಬಗ್ಗೆ ವರದಿಯಾಗಿದೆ.

ಜನತಾ ಕಾಲೋನಿಯ ನಿವಾಸಿ ಪುಟ್ಟಣ್ಣ ಎಂಬವರ ಮನೆಯಲ್ಲಿ 16 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಅಕ್ಕಿಯನ್ನು ಎಪಿಸಿಎಂಎಸ್ ಗೋದಾಮಿನಲ್ಲಿ ಇಡಲಾಗಿದ್ದು, ತಹಸೀಲ್ದಾರ್ ಗೋವಿಂದರಾಜು ತನಿಖೆ ಕೈಗೊಂಡಿದ್ದಾರೆ. ಖಚಿತ ಮಾಹಿತಿ ಪಡೆದ ಆಹಾರ ನಿರೀಕ್ಷಕರಾದ ಯಶಸ್ವಿನಿ, ವಸಂತ್ ಕುಮಾರ್ ದಾಳಿ ನಡೆಸಿದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ.



ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ

ಮೈಸೂರು, ಜೂ.13– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರಾಷ್ಟ್ರೀಯ ಸೇವಾ ಯೋಜನೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ವತಿಯಿಂದ ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ –2022ನ್ನು ಜೂನ್ 15ರ ಬುಧವಾರದಂದು ಚಿಕ್ಕ ಗಡಿಯಾರದ ಹತ್ತಿರವಿರುವ ದೇವರಾಜ ಮಾರುಕಟ್ಟೆ ಆವರಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ಉದ್ಘಾಟನೆಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ ಭೂತೆ ನಡೆಸಿ ಕೊಡುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಪೊಲೀಸ್ ಅಧೀಕ್ಷಕ ಆರ್.ಚೇತನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಾಲಿನಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಸಂಯೋಜಕರಾದ ಡಾ.ಎಂ.ಬಿ.ಸುರೇಶ್ ಉಪಸ್ಥಿತರಿರುವರು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮಾಲಿನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಶೇ.70ರಷ್ಟು ಮತದಾನ

ಗಂಟೆ ವೇಳೆಗೆ ಒಟ್ಟು 34,291 ಮಂದಿ (ಶೇ.58.93) ಪದವೀಧರರು ತಮ್ಮ ಹಕ್ಕು ಚಲಾಯಿಸಿದರು. ಅಂತಿಮವಾಗಿ ಮತದಾನ ಮುಗಿದಾಗ ಜಿಲ್ಲೆಯಲ್ಲಿರುವ 58,186 ಮಂದಿ ಪೈಕಿ 24,426 ಪುರುಷರು, 15,096 ಮಹಿಳೆಯರು ಸೇರಿ ಒಟ್ಟು 39,522 ಮಂದಿ ಮತ ಚಲಾಯಿಸಿದ್ದು, ಶೇ.67.92ರಷ್ಟು ಮತದಾನವಾಗಿದೆ.

ಈ ವೇಳೆ ಅತೀ ಹೆಚ್ಚು ಮತದಾರರಿರುವ ನಗರ ವ್ಯಾಪ್ತಿಯಲ್ಲಿ 8,283 ಪುರುಷರು ಮತ್ತು 6,718 ಮಹಿಳೆಯರು ಸೇರಿ ಒಟ್ಟು 15,001 ಮಂದಿ (ಶೇ. 63.37) ಪದವೀಧರರು ಹಕ್ಕು ಚಲಾಯಿಸಿದ್ದುದು ಕಂಡುಬಂದಿತು. ಆರಂಭದಲ್ಲಿ ಬೆಳಗ್ಗೆ 9 ಗಂಟೆವರೆಗೆ ನೀರಸ ಪ್ರತಿಕ್ರಿಯೆ ಕಂಡುಬಂದಿತ್ತಾದರೂ, ನಂತರ ಉತ್ಸಾಹದಿಂದ ಬಂದ ಮತದಾರರು ಸಾಲುಗಟ್ಟಿ ನಿಂತು ಬಿರುಸಿನ ಮತದಾನ ಮಾಡಿದರು.

ಮಧ್ಯಾಹ್ನದ ವೇಳೆಗೆ ಬಿಸಿಲು ಜಾಸ್ತಿಯಾದ ಕಾರಣ ಮಧ್ಯಾಹ್ನ 1ರಿಂದ 2.30 ರವರೆಗೆ ನಿಧಾನಗತಿ ಮತದಾನವಾಯಿತಾದರೂ, ನಂತರ ಮತ್ತೆ ಚುರುಕುಗೊಂಡು ಸಂಜೆ 5 ಗಂಟೆವರೆಗೂ ಬಿರುಸಿನ ಮತದಾನ ನಡೆಯಿತು. ಕಡೇ ಗಳಿಗೆಯಲ್ಲಿ ಸಂಜೆ 5 ಗಂಟೆಯೊಳಗೆ ಮತಗಟ್ಟೆ ಪ್ರವೇಶಿಸಿದ ಪದವೀಧರರೆಲ್ಲರಿಗೂ ಹಕ್ಕು ಚಲಾಯಿಸಲು ಅವಕಾಶ ಕಲ್ಪಿಸಲಾಯಿತು. ಪಕ್ಷದ ಕಾರ್ಯಕರ್ತರು, ಶಾಸಕರು, ಕಾರ್ಪೊರೇಟರ್‌ಗಳು, ಅಭ್ಯರ್ಥಿಗಳ ಬೆಂಬಲಿತರು ಮತಗಟ್ಟೆಗಳ ತೆರಳಿ ಮತ ಕೇಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮತದಾರರ ಸಂಖ್ಯೆ ಕಡಿಮೆ ಇದ್ದರೂ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಮತಗಟ್ಟೆಗಳಲ್ಲಿ ಹೆಚ್ಚು ಮಂದಿ ಗುಂಪು ಗುಂಪಾಗಿ ಜಮಾಯಿಸಿದ್ದರಿಂದ ಯಾವುದೇ ವಿಧಾನಸಭೆ ಅಥವಾ ಪಾಲಿಕೆ ಚುನಾವಣೆಗೂ ಕಡಿಮೆ ಇಲ್ಲದಂತೆ ಮತದಾನ ತೀವ್ರತೆ ಇಂದು ಕಂಡುಬಂದಿತು. ಈ ಬಾರಿ 19 ಮಂದಿ ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಒಂದು ಬ್ಯಾಲೆಟ್ ಪೇಪರ್‌ನಲ್ಲಿ 19 ಮಂದಿಗೂ ಪ್ರಾಶಸ್ತ್ಯದ ಮತ ನೀಡಬೇಕಾದ ಕಾರಣ ಮತದಾನ ಪ್ರಕ್ರಿಯೆ ವಿಳಂಬವಾಗುತ್ತಿತ್ತು. ಅದೇ ಕಾರಣಕ್ಕಾಗಿ ಪ್ರತೀ ಮತಗಟ್ಟೆಯಲ್ಲೂ ಪದವೀಧರರು ಸಾಲುಗಟ್ಟಿ ನಿಂತಿದ್ದುದು ಕಂಡುಬಂದಿತು.

ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಪಕ್ಷದ ಪ್ರಮುಖರು ಮತಗಟ್ಟೆಗಳಿಗೆ ತೆರಳಿ ತಮ್ಮ ಅಭ್ಯರ್ಥಿ ಪರ ಮತ ಕೇಳುತ್ತಿದ್ದರು. ಅದೇ ರೀತಿ ಜೆಡಿಎಸ್ ಅಭ್ಯರ್ಥಿ ಪರ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಕಾರ್ಪೊರೇಟರ್‌ಗಳಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಲಕ್ಷ್ಮೀ ಶಿವಣ್ಣ ಸೇರಿದಂತೆ ಹಲವು ಕಾರ್ಪೊರೇಟರ್‌ಗಳು ಕುಂಬಾರಕೊಪ್ಪಲು ಸರ್ಕಾರಿ ಶಾಲೆ, ಸಿದ್ಧಿಧಾತ್ರಿ ಸೆಮಿ ರೆಸಿಡೆನ್ಶಿಯಲ್ ಕಾಲೇಜು ಮತಗಟ್ಟೆಗಳಲ್ಲಿ ಮತಯಾಚನೆ ಮಾಡಿದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೇರಿದಂತೆ ಕಾರ್ಪೊರೇಟರ್‌ಗಳು, ಕಾರ್ಯಕರ್ತರು ಪಕ್ಷದ ಅಭ್ಯರ್ಥಿ ಪರ ಮತ ಯಾಚಿಸಿ ಅಂತಿಮ ಕಸರತ್ತು ನಡೆಸಿದ್ದು ಕಂಡುಬಂದಿತು.

ಮೋದಿ ಚಾಮುಂಡೇಶ್ವರಿ ದರ್ಶನ

ಭಾಗವಹಿಸಲಿದ್ದಾರೆ. ಅಲ್ಲದೆ, ಮೈಸೂರು ಅರಮನೆಯ ರಾಜವಂಶಸ್ಥರ ಜೊತೆ ಸ್ವಲ್ಪ ಸಮಯ ಕಾಲ ಕಳೆಯಲಿದ್ದಾರೆ. ಜೂನ್ 20ರಂದ ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿಯವರು ಜೂನ್ 21 ರಂದು ಬೆಳಗ್ಗೆ 6.30 ರಿಂದ 7.45 ರವರೆಗೆ ಅರಮನೆ ಆವರಣದಲ್ಲಿ ನಡೆಯಲಿರುವ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ನಂತರ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿ, 8.30 ರಿಂದ 9 ಗಂಟೆಯವರೆಗೂ ಅಂದರೆ 30 ನಿಮಿಷಗಳ ಕಾಲ ಅರಮನೆಯಲ್ಲಿ ರಾಜ ಮನೆತನದ ಕುಟುಂಬ ಸದಸ್ಯರೊಟ್ಟಿಗೆ ಕಾಲ ಕಳೆಯಲಿದ್ದಾರೆ. ನಂತರ ಕೇರಳದ ತಿರುವನಂತಪುರಕ್ಕೆ ವಿಶೇಷ ವಿಮಾನದಲ್ಲಿ ತೆರಳಲಿದ್ದಾರೆ.

ಜೂನ 20ರಂದು ನಗರಕ್ಕೆ ಧಾವಿಸುವ ಪ್ರಧಾನಿಯವರು ಅಂದು ಮಧ್ಯಾಹ್ನ ಬೆಂಗಳೂರು ಸಬರ್ಬನ್ ರೈಲ್ವೆ ಯೋಜನೆಗೆ ಶಿಲಾನ್ಯಾಸ ನೆರವೇರಿಸಿ, ನಂತರ ಸಾರ್ವಜನಿಕರನ್ನು ದ್ದೇಶಿಸಿ ಮಾತನಾಡಲಿದ್ದಾರೆ. ತದನಂತರ ಡಾ. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಜೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮೈಸೂರಿಗೆ ತೆರಳಲಿದ್ದು, ಅಂದು ಸುತ್ತೂರು ಮಠಕ್ಕೂ ಭೇಟಿ ನೀಡುವ ಕಾರ್ಯಕ್ರಮವಿದೆ. ನಂತರ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ದರ್ಶನ ಪಡೆಯಲಿದ್ದಾರೆ. ಚಾಮುಂಡೇಶ್ವರಿ ದರ್ಶನದ ನಂತರ ಅಲ್ಲಿನ ಲ್ಯಾ ಪ್ಲಾಜಾ ಹೋಟೆಲ್‌ನಲ್ಲಿ ರಾತ್ರಿ ವಾಸ್ತವ್ಯ ಹೂಡಿ, ಬೆಳಗಿನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮುನ್ನೆಚ್ಚರಿಕೆ ಕ್ರಮ ಪಾಲಿಸಿ

ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಇಲಾಖೆಯು ಟೆಸ್ಟ್‌ಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಇದು ಸಹ ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಲು ಕಾರಣವಿರಬಹುದು. ಆದರೆ ರೋಗ ಲಕ್ಷಣ ಉಳ್ಳವರಿಗಿಂತ ಆಸ್ಪತ್ರೆಗೆ ದಾಖಲು ಆಗುವ ಪ್ರಕರಣಗಳು ತೀರಾ ಕಡಿಮೆ. ಇದನ್ನು 4ನೇ ಅಲೆ ಎಂದು ಹೇಳಲು ಆಗುವುದಿಲ್ಲ, ಸದ್ಯ ಅಲೆಗಳ ಪ್ರಶ್ನೆ ಉದ್ಭವಿ ಸಿಲ್ಲ ಎಂದರು. ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಮಾತ್ರ ಸೋಂಕಿನ ಪ್ರಮಾಣ ಹೆಚ್ಚಿದೆ. ಅದರ ಜತೆ ಡೆಂಗಿ ಪ್ರಕರಣಗಳ ಸಂಖ್ಯೆ ಕೂಡ ಉಲ್ಬಣಗೊಂಡಿದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳ ಪ್ರತ್ಯೇಕ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಜಿನೋಮ್ ಸೀಕ್ವೆನ್ಸಿಂಗ್ ಲ್ಯಾಬ್ ಆರಂಭಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹೊಸ ರೂಪಾಂತರಿ ತಳಿಗಳ ಪತ್ತೆಗೆ ಲ್ಯಾಬ್‌ನಿಂದ ಸಹಾಯವಾಗುತ್ತದೆ. ಉಳಿದಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಾಕಷ್ಟು ಕ್ರಮಗಳನ್ನು ಇಲಾಖೆ ತೆಗೆದುಕೊಂಡಿದೆ ಎಂದು ವಿವರಿಸಿದರು. ತಾಂತ್ರಿಕ ಸಲಹಾ ಸಮಿತಿ ಸಭೆ ನಂತರ ಇಲಾಖೆಯ ಪರಿಶೀಲನಾ ಸಭೆಯನ್ನೂ ನಡೆಸಲಾಗಿದೆ. ವಿಶೇಷವಾಗಿ ನಮ್ಮ ಕ್ಲಿನಿಕ್‌ಗಳ ಆರಂಭಕ್ಕೆ ಕಾಲಮಿತಿಯಲ್ಲಿ ತ್ವರಿತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮಂಗಳವಾರ ತಾವು ಮೈಸೂರಿಗೆ ಭೇಟಿ ನೀಡುತ್ತಿರುವುದಾಗಿ ತಿಳಿಸಿದ ಸಚಿವರು, ಯೋಗ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಿದ್ಧತಾ ಕ್ರಮಗಳ ಬಗ್ಗೆ ಉಸ್ತುವಾರಿ ಸಚಿವ ಸೋಮಶೇಖರ್ ಅವರ ಜತೆ ಪರಿಶೀಲನೆ ನಡೆಸುವುದಾಗಿಯೂ ಸಚಿವ ಸುಧಾಕರ್ ತಿಳಿಸಿದರು.

ಆಸ್ಪತ್ರೆ ಸೇರುವವರ ಸಂಖ್ಯೆ ಏರಿಕೆ

ಆಸ್ಪತ್ರೆ ದಾಖಲಾಗುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಇದರ ಬೆನ್ನಲ್ಲೇ ಕೇಂದ್ರ ಆರೋಗ್ಯ ಇಲಾಖೆ ಮಹತ್ವದ ಸೂಚನೆ ನೀಡಿದ್ದು, ಎಲ್ಲರೂ ಬೂಸ್ಟರ್ ಡೋಸ್ ಪಡೆದುಕೊಳ್ಳಲು ಸೂಚಿಸಿದ್ದಾರೆ. ಮುಂಬೈನಲ್ಲಿ ಇದೀಗ ಕೋವಿಡ್ ಕಾರಣದಿಂದ ಪ್ರತಿ ದಿನ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ 100ರ ಗಡಿ ದಾಟಿದೆ. ಇದು ಆತಂಕ ಹೆಚ್ಚಾಗುವಂತೆ ಮಾಡಿದೆ. ಭಾರತದಲ್ಲಿ 2ನೇ ಅಲೆ ಬಳಿಕ 3ನೇ ಅಲೆಯಲ್ಲಿ ಕೋವಿಡ್ ಪ್ರಕರಣ ಸಂಖ್ಯೆ ಹೆಚ್ಚಾಗಿತ್ತು. ಆದರೆ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಏರಿಕೆಯಾಗಿರಲಿಲ್ಲ. ಹೀಗಾಗಿ ತಜ್ಞ ವೈದ್ಯರು ಯಾವುದೇ ಆತಂಕ ಪಡಬೇಕಿಲ್ಲ ಎಂದು ಅಭಯ ನೀಡಿದ್ದರು. ಆದರೆ ಇದೀಗ 4ನೇ ಅಲೆ ಭೀತಿ ಹೆಚ್ಚಾಗುತ್ತಿರುವಂತೆ ಆಸ್ಪತ್ರೆ ದಾಖಲಾಗುವ ಸಂಖ್ಯೆ ಗಣನೀಯ ಏರಿಕೆಯಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದೆ.

4 ತಿಂಗಳ ಬಳಿಕ ಮುಂಬೈನಲ್ಲಿ 100ಕ್ಕಿಂತ ಹೆಚ್ಚು ಮಂದಿ ಕೋವಿಡ್ ಕಾರಣದಿಂದ ಒಂದೇ ದಿನ ಆಸ್ಪತ್ರೆ ದಾಖಲಾಗಿದ್ದಾರೆ. ಕೋವಿಡ್ ವಿಚಾರದಲ್ಲಿ ಮುಂಬೈ ಭಾರತಕ್ಕೆ ಎಚ್ಚರಿಕೆ ಗಂಟೆಯಾಗಿದೆ. ಕಳೆದ ಎರಡು ಅಲೆಗಳಲ್ಲಿ ಮುಂಬೈನಲ್ಲೇ ಕೋವಿಡ್ ಸ್ಫೋಟಗೊಂಡು ಇತರೆಡೆ ಹಬ್ಬಿತ್ತು. ಮುಂಬೈನಲ್ಲಿ ಮತ್ತೆ ಕೋವಿಡ್ ಹೆಚ್ಚಳದಿಂದ ಮಹಾರಾಷ್ಟ್ರದಲ್ಲಿ ಕಳೆದ 24 ಗಂಟೆಯಲ್ಲಿ 2,946 ಕೋವಿಡ್ ಪ್ರಕರಣ ಪತ್ತೆಯಾಗಿದೆ.

ಮುಂಬೈನಲ್ಲಿ ಆಸ್ಪತ್ರೆ ದಾಖಲಾಗುವವರ ಸಂಖ್ಯೆ ಭಾರತದಲ್ಲಿ ಕೋವಿಡ್ ಪ್ರಕರಣ ಏರಿಕೆ ಬೆನ್ನಲ್ಲೇ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಮಹತ್ವದ ಸೂಚನೆ ನೀಡಿದ್ದಾರೆ. ಕೊರೊನಾ ಇನ್ನೂ ಮುಗಿದಿಲ್ಲ. ಕೋವಿಡ್ ಮಾರ್ಗಸೂಚಿಗಳನ್ನು ಅಗತ್ಯವಾಗಿ ಪಾಲಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಬೇಕು. ಸಾಮಾಜಿಕ ಅಂತರ ಕಾಪಾಡಿಕೊಳ್ಳಿ ಎಂದಿದ್ದಾರೆ. ಮಕ್ಕಳಿಗೆ ಲಸಿಕೆ ಹಾಕಿಸಲು ಪೋಷಕರಿಗೆ ಸೂಚನೆ ನೀಡಿದ್ದಾರೆ. ಇದೇ ವೇಳೆ ವಯಸ್ಕರು ಬೂಸ್ಟರ್ ಡೋಸ್ ಪಡೆದುಕೊಳ್ಳಲು ಸೂಚಿಸಿದ್ದಾರೆ.

ಡೆಂಗ್ಯೂ ಎಚ್ಚರ... ಜ್ವರ ಬಾಧಿಸಿದರೆ ಕೂಡಲೇ ಸೂಕ್ತ ಚಿಕಿತ್ಸೆ ಪಡೆಯುವುದು ಅನಿವಾರ್ಯ



● ತಜ್ಞ ವೈದ್ಯರ ಎಚ್ಚರಿಕೆ ● ಸೋಂಕಿನ ಸದ್ದಿಲ್ಲದಿದ್ದರೂ ಸೊಳ್ಳೆ ಹಾವಳಿಯಿಂದ ಸ್ಫೋಟಿಸುವ ಅಪಾಯ

ಮೈಸೂರು, ಜೂ.13(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ಪ್ರಕರಣ ನಿಯಂತ್ರಣ ದಲ್ಲಿದ್ದರೂ ಮುಂಗಾರಿನಲ್ಲಿ ಸಾರ್ವಜನಿಕರು ಸೊಳ್ಳೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸದಿದ್ದರೆ ದುಷ್ಪರಿಣಾಮ ಎದುರಿಸಬೇಕಾಗುತ್ತದೆ.

ಜಿಲ್ಲೆಯಲ್ಲಿ ಕಳೆದ ನವೆಂಬರ್‌ನಿಂದ ತಿಂಗಳಲ್ಲಿ 30–40 ಡೆಂಗ್ಯೂ ಜ್ವರ ಪ್ರಕರಣ ವರದಿಯಾಗುತ್ತಿದ್ದು, ಸದ್ಯ ಈವರೆಗೆ ಗಣನೀಯ ಏರಿಕೆಯಾಗಿಲ್ಲ. ಪ್ರಸಕ್ತ ವರ್ಷದ ಜನವರಿಯಿಂದ ಇಂದಿನವರೆಗೆ 177 ಡೆಂಗ್ಯೂ ಪ್ರಕರಣ ಪತ್ತೆಯಾಗಿದೆ. ಆದರೂ ಮುಂಗಾರು ಮಳೆ ಸಂದರ್ಭದಲ್ಲಿ ಹೆಚ್ಚು ಕಾಯಿಲೆ ಹರಡುವ ಸಾಧ್ಯತೆ ಇರುವುದರಿಂದ ರೋಗ ನಿಯಂತ್ರಣ ನಿಟ್ಟಿನಲ್ಲಿ ಈಗಾಗಲೇ ಆರೋಗ್ಯ ಇಲಾಖೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದು, ಜನರಲ್ಲಿ ನಿರಂತರ ಜಾಗೃತಿ ಮೂಡಿಸುತ್ತಿದೆ.

ಜ್ವರ ಬಂದರೆ ಎಚ್ಚರ: ಈ ಸಂದರ್ಭದಲ್ಲಿ ಜ್ವರದ ಬಗ್ಗೆ ಉದಾಸೀನ ಮಾಡಬೇಡಿ. 2–3 ದಿನವಾದರೂ ಜ್ವರ ವಾಸಿಯಾಗದಿದ್ದರೆ ತಕ್ಷಣ ದೊಡ್ಡಾಸ್ಪತ್ರೆಗಳಿಗೆ ತೆರಳಿ ವೈದ್ಯರ ಸಲಹೆ ಪಡೆಯಬೇಕು. ವೈದ್ಯರು ಕೆಲ ವೈದ್ಯಕೀಯ ಪರೀಕ್ಷೆ ನಡೆಸಿ ಸೂಕ್ತ ಔಷಧಿ ನೀಡುತ್ತಾರೆ. ಜ್ವರಕ್ಕೆ ತಾವೇ ಮನೆಮದ್ದು ಮಾಡಿಕೊಳ್ಳುವುದು, ಮೆಡಿಕಲ್ ಶಾಪ್‌ಗಳಲ್ಲಿ ಸಾಮಾನ್ಯ ಮಾತ್ರೆಗಳನ್ನು ಕೊಂಡು ಸೇವಿಸುವುದು ಅಥವಾ ಯಾವುದೇ ಪರೀಕ್ಷೆ ಮಾಡಿಸಿಕೊಳ್ಳದೆ ಸಮೀಪದ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆದು ಕಾಲಹರಣ ಮಾಡಬಾರದು. ಹೀಗೆ ನಿರ್ಲಕ್ಷ್ಯ ವಹಿಸಿದರೆ ಡೆಂಗ್ಯೂ ಇನ್ನಿತರ ಕಾಯಿಲೆಗಳಿಗೆ ತುತ್ತಾಗಿ ಜೀವಾಪಾಯಕ್ಕೆ ಸಿಲುಕಬಹುದು ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್. ಚಿದಂಬರ 'ಮೈಸೂರು ಮಿತ್ರ'ನ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

3 ಬಗೆ ಸೊಳ್ಳೆಗಳು: ರೋಗಗಳನ್ನು ಒಬ್ಬರಿಂದೊಬ್ಬರಿಗೆ ಹರಡುವ ಸೊಳ್ಳೆಗಳ ಬಗ್ಗೆ ಎಚ್ಚರವಹಿಸುವುದು ಅತ್ಯಗತ್ಯ. ಮಳೆಗಾಲದಲ್ಲಿ ಸೊಳ್ಳೆ ಸಂತತಿ ಹೆಚ್ಚಾಗುವುದರಿಂದ ಪ್ರತಿಯೊಬ್ಬರೂ ಜಾಗ್ರತರಾಗಬೇಕು. ಸಾಮಾನ್ಯವಾಗಿ ಅನಾಫಿಲಿಸ್, ಕ್ಯೂಲೆಕ್ಸ್ ಹಾಗೂ ಈಡಿಸ್ ಸೊಳ್ಳೆಗಳು ರೋಗ ಹರಡುತ್ತವೆ.

ಅನಾಫಿಲಿಸ್: ನಿಂತಿರುವ ಮಳೆನೀರು, ಕೆರೆ–ಕಟ್ಟೆ, ಕೃಷಿ ಹೊಂಡ, ಬಾವಿಗಳಂತಹ ಸ್ಥಳಗಳಲ್ಲಿ ಅನಾಫಿಲಿಸ್ ಸೊಳ್ಳೆ ಸಂತಾನೋತ್ಪತ್ತಿ ಹೆಚ್ಚಾಗುತ್ತದೆ. ಮಲೇರಿಯಾ ರೋಗ ಹರಡುವ ಈ ಸೊಳ್ಳೆ ಹಗಲಲ್ಲಿ ಬಚ್ಚಲು ಇನ್ನಿತರ ವಸ್ತುಗಳ ಮರೆಯಲ್ಲಿ ಅಡಗಿ ಕತ್ತಲಾಗುತ್ತಿದ್ದಂತೆ ಕಚ್ಚಲು ಪ್ರಾರಂಭಿಸುತ್ತದೆ. ಕೆರೆ–ಕಟ್ಟೆ, ಹೊಂಡಗಳಲ್ಲಿ ಮೀನುಗಳು ಹೆಚ್ಚಾಗುವಂತೆ ನೋಡಿಕೊಂಡರೆ ಸೊಳ್ಳೆ ಸಂತತಿಯನ್ನು ನಿಯಂತ್ರಿಸಬಹುದು.

ಕ್ಯೂಲೆಕ್ಸ್: ಮಿದುಳು ಜ್ವರ, ಆನೆಕಾಲು ರೋಗ ಹರಡುವ ಕ್ಯೂಲೆಕ್ಸ್ ಸೊಳ್ಳೆ, ಅತೀ ಕೊಳಚೆಯಾದ ನೀರಿನಲ್ಲಿ ಬೆಳೆಯುತ್ತದೆ. ಇದೂ ಕೂಡ ಹಗಲಲ್ಲಿ ಅಡಗಿ ಕುಳಿತು ರಾತ್ರಿ 10–12 ಗಂಟೆ ಬಳಿಕ ಕಚ್ಚಲು ಪ್ರಾರಂಭಿಸುತ್ತದೆ. ಚರಂಡಿಯನ್ನು ಆಗಾಗ್ಗೆ ಸ್ವಚ್ಛಗೊಳಿಸುವುದು, ವಸತಿ ಪ್ರದೇಶದಿಂದ ಕನಿಷ್ಠ 3 ಕಿ.ಮೀ. ವ್ಯಾಪ್ತಿಯಲ್ಲಿ ಕೊಳಚೆ ನೀರು ಸಂಗ್ರಹವಾಗದಂತೆ ನಿರ್ವಹಿಸುವುದು ತುಂಬಾ ಮುಖ್ಯ.

ಈಡಿಸ್: ಪ್ರಸ್ತುತ ಈಡಿಸ್ ಸೊಳ್ಳೆ ಅತ್ಯಂತ ಅಪಾಯಕಾರಿಯಾಗಿ ಕಾಡುತ್ತಿದೆ. ಇದು ಡೆಂಗ್ಯೂ ಹಾಗೂ ಚಿಕೂನ್‌ಗುನ್ಯ ರೋಗಗಳನ್ನು ಅತೀ ವೇಗವಾಗಿ ಹರಡುತ್ತದೆ. ಕೇವಲ 2 ಮಿಲೀ ನೀರಿದ್ದರೂ ಈಡಿಸ್ ಬೆಳೆಯಬಹುದು. ನೀರು ಕೂಡಿಟ್ಟ ಇನ್ನಿತರ ಪಾನೀಯ ಸೇವಿಸಿ ಬಿಸಾಡಿದ ಸಣ್ಣ ಕಪ್‌ನಲ್ಲಿ ಒಂದಿಷ್ಟು ನೀರಿದ್ದರೂ ಅಲ್ಲಿಯೇ ಸೊಳ್ಳೆಗಳ ಸಂತತಿ ಹೆಚ್ಚಾಗುತ್ತದೆ. ಆದ್ದರಿಂದ ಮನೆ ಒಳಗೆ ಹಾಗೂ ಹೊರಗೆ ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರವಹಿಸಬೇಕು.

ನೀರು ಸಂಗ್ರಹಿಸಿಟ್ಟುಕೊಳ್ಳುವ ಪಾತ್ರೆಯನ್ನು ಭದ್ರವಾಗಿ ಮುಚ್ಚಿಡಬೇಕು. ಪಾತ್ರೆಯ ತಳ ಮಾತ್ರವಲ್ಲದೇ ಅದರ ಒಳಭಾಗವನ್ನು ಸಂಪೂರ್ಣವಾಗಿ ನಾಲ್ಕೈದು ದಿನಗಳಿಗೊಮ್ಮೆ ಚೆನ್ನಾಗಿ ಸ್ವಚ್ಛಗೊಳಿಸಬೇಕು. ವಾಸ್ತು ಇನ್ನಿತರ ಕಾರಣಗಳಿಗೆ ಬೇರಿನಿಂದ ಗಿಡಗಳನ್ನು ನೀರಿನಲ್ಲಿಟ್ಟು ಬೆಳೆಸುವವರು, ನಿಂಬೆ ಹಣ್ಣನ್ನು ಲೋಟದಲ್ಲಿಡುವವರು ಈ ಬಗ್ಗೆ ನಿಗಾ ವಹಿಸಬೇಕು. ಒಡೆದಿರುವ ಪಾತ್ರೆ, ಹಳೆಯ ಶೂ, ಹೆಲ್ಮೆಟ್, ಟೈರ್, ಹೂಕುಂಡ, ಬಳಸದ ಒಳಕಲ್ಲುಗಳನ್ನು ಟೆರೇಸ್ ಮೇಲಿಟ್ಟರೆ ಅದರಲ್ಲಿ ಮಳೆ ನೀರು ಸಂಗ್ರಹವಾಗಿ ಸೊಳ್ಳೆ ಹೆಚ್ಚಾಗುತ್ತವೆ. ಎಳನೀರು ಕರಟವನ್ನು ಎರಡು ಭಾಗ ಮಾಡಿ ಬಿಸಾಡಿದರೆ ಸೊಳ್ಳೆಗಳ ಬೆಳವಣಿಗೆಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಅದನ್ನು ನಾಲ್ಕು ಭಾಗ ಮಾಡುವುದನ್ನು ರೂಢಿಸಿಕೊಳ್ಳಬೇಕು. ಇಲ್ಲವಾದರೆ ಡೆಂಗ್ಯೂ ಹಾಗೂ ಚಿಕೂನ್ ಗುನ್ಯವನ್ನು ಆಹ್ವಾನಿಸಿದಂತಾಗುತ್ತದೆ.

42 ದಿನ ಬದುಕಿರುತ್ತವೆ: ಗಂಡು ಸೊಳ್ಳೆಗಳು ಸಸ್ಯಾಹಾರಿಯಾಗಿದ್ದು ಹೂಗಳ ಮಕರಂದ, ಸಸ್ಯಗಳ ರಸ ಕುಡಿಯುತ್ತವೆ. ಅವು ಒಂದೆರಡು ವಾರ ಬದುಕಿದರೆ ಹೆಚ್ಚು. ಆದರೆ ಹೆಣ್ಣು ಸೊಳ್ಳೆಗಳು ಫಲವತ್ತೆ ಹಾಗೂ ಮೊಟ್ಟೆ ಇಡುವ ಕಾರಣಕ್ಕೆ ರಕ್ತ ಹೀರಿ ಜೀವಿಸುತ್ತವೆ. ಹೆಣ್ಣು ಸೊಳ್ಳೆಗಳು ಸುಮಾರು 42 ದಿನ ಬದುಕುತ್ತವೆ. ಯಾವುದೇ ಸೊಳ್ಳೆಯಾದರೂ ಅವುಗಳು ಕಚ್ಚದಂತೆ ಸೊಳ್ಳೆ ಪರದೆ, ಸೊಳ್ಳೆಬತ್ತಿ ಬಳಕೆ ಇನ್ನಿತರ ಎಚ್ಚರಿಕೆ ಕ್ರಮದ ಜೊತೆಗೆ ಸೊಳ್ಳೆಗಳು ಹೆಚ್ಚಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು.

ಶಿಕ್ಷಕರ ಸಹಕಾರಕ್ಕೆ ಯೋಜನೆ



ಆರೋಗ್ಯ ಇಲಾಖೆ ತಂಡ ವರ್ಷದಲ್ಲಿ ಮೂರ್‍ನಾಲ್ಕು ಬಾರಿ ಶಾಲೆಗಳಿಗೆ ಭೇಟಿ ನೀಡಿ, ಸೊಳ್ಳೆಗಳನ್ನು ಪ್ರತ್ಯಕ್ಷವಾಗಿ ತೋರಿಸಿ ಅವುಗಳ ಸಂತತಿ ಹೆಚ್ಚಲು ಕಾರಣ, ಕಚ್ಚುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಲ್ಲಿ ಮನವರಿಕೆ ಮಾಡುವುದು ಜೊತೆಗೆ ಸ್ವಚ್ಛತೆ ಬಗ್ಗೆ ಪೋಷಕರಿಗೆ ತಿಳಿಸಿಕೊಡುವಂತೆ ಹೇಳಿ ಅದರ ಮೌಲ್ಯಮಾಪನವನ್ನೂ ಮಾಡಲಾಗುತ್ತಿದೆ. ಶಾಲೆಗಳ ಕಟ್ಟಡಗಳ ಜಾಲರಿ ಅಳವಡಿಸುವುದು, ಆವರಣದಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸುವಂತೆ ಸೂಚಿಸಲಾಗಿದೆ. ಅಂಗನವಾಡಿಗಳಲ್ಲಿ ಮಧ್ಯಾಹ್ನದ ವೇಳೆ ಕೆಲಹೊತ್ತು ಮಕ್ಕಳನ್ನು ಮಲಗಿಸುವುದರಿಂದ ದಾನಿಗಳು ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ಶೇ.60ರಷ್ಟು ಕೇಂದ್ರಗಳಿಗೆ ಸೊಳ್ಳೆ ಪರದೆ ನೀಡಲಾಗಿದೆ. ಅಲ್ಲದೆ ಸರ್ಕಾರದ ಆದೇಶದನ್ವಯ ಪ್ರತಿ ಶಾಲೆಯ ಒಬ್ಬರು ಶಿಕ್ಷಕರಿಗೆ ಸ್ವಚ್ಛತೆ, ರೋಗ ಹರಡುವಿಕೆ, ನಿಯಂತ್ರಣ ಇನ್ನಿತರ ವಿಚಾರಗಳ ಬಗ್ಗೆ ತರಬೇತಿ ನೀಡಲು ಸಿದ್ಧತೆ ನಡೆದಿದೆ. ತರಬೇತಿ ಪಡೆದ ಶಿಕ್ಷಕರು ಒಂದು ತಾಸಿನ ಅವಧಿಯಲ್ಲಿ ಮಕ್ಕಳಿಗೆ ಆರೋಗ್ಯ ಶಿಕ್ಷಣ ನೀಡಲಿದ್ದಾರೆ. ಆಗಾಗ್ಗೆ ಇಲಾಖೆ ಸಿಬ್ಬಂದಿ ಜಾಗೃತಿ ಮೂಡಿಸುವುದು ಜೊತೆಗೆ ನಿತ್ಯ ಶಿಕ್ಷಕರ ಮೂಲಕವೇ ಜಾಗೃತಿ ವಹಿಸುವುದು ಇದರ ಉದ್ದೇಶವಾಗಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ತಿಳಿಸಿದ್ದಾರೆ.

ನ್ಯಾಷನಲ್ ಹೆರಾಲ್ಡ್ ಅವ್ಯವಹಾರ ಪ್ರಕರಣ; ಕಾಂಗ್ರೆಸ್ ಪ್ರತಿಭಟನೆ ಖಂಡನೀಯ

ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಎಂ.ಜಿ.ಮಹೇಶ್



ಮೈಸೂರು,ಜೂ.13(ಪಿಎಂ)–ನ್ಯಾಷನಲ್ ಹೆರಾಲ್ಡ್ ಅವ್ಯವಹಾರ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯವು (ಇಡಿ) ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಚಾರಣೆ ನಡೆಸುತ್ತಿರುವ ಕ್ರಮ ಖಂಡಿಸಿ ಕಾಂಗ್ರೆಸ್‌ನಿಂದ ದೇಶಾದ್ಯಂತ ಪ್ರತಿಭಟನೆ ನಡೆಯುತ್ತಿದ್ದು, ಇದು ಖಂಡನೀಯ ಎಂದು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಕಿಡಿಕಾರಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೈತಿಕವಾಗಿ ಧೂಳೀಪಟವಾಗಿದ್ದು, ಇಡಿ ತನಿಖೆ ದಿಕ್ಕು ತಪ್ಪಿಸಲು ಹೊರಟಿದೆ. ಇಡಿ ತನ್ನ ಕರ್ತವ್ಯ ನಿರ್ವಹಿಸಲು ಕಾಂಗ್ರೆಸ್ ಪ್ರತಿಭಟನೆ ಮೂಲಕ ಅಡಚಣೆ ಉಂಟು ಮಾಡುತ್ತಿದ್ದು, ಇದು ಸರಿಯಲ್ಲ. ನೈತಿಕತೆ ಇದ್ದರೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸಾರ್ವಜನಿಕ ಜೀವನದಿಂದ ನಿವೃತ್ತಿ ಹೊಂದಬೇಕು ಎಂದು ಒತ್ತಾಯಿಸಿದರು.

ದೇಶದ ಕಾನೂನಿಗಿಂತ ತಾವೇ ದೊಡ್ಡವರು ಎಂಬಂತೆ ಕಾಂಗ್ರೆಸ್‌ನವರು ವರ್ತಿಸುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರ ನೆರವಿನಿಂದ 1937ರಲ್ಲಿ ಅಸೋಸಿಯೇಟೆಡ್ ಜನರಲ್ ಲಿಮಿಟೆಡ್ (ಎಜೆಎಲ್) ಪತ್ರಿಕಾ ಸಮೂಹ ಸಂಸ್ಥೆ ಸ್ಥಾಪನೆಗೊಂಡಿತು. ಬಳಿಕ ನ್ಯಾಷನಲ್ ಹೆರಾಲ್ಡ್ ಸೇರಿದಂತೆ 3 ಪತ್ರಿಕೆಗಳನ್ನು ಪ್ರಾರಂಭಿಸಿತು. ಈ ಸಂಸ್ಥೆಗೆ ನೆಹರು, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಅಧಿಕಾರಾವಧಿಯಲ್ಲಿ ದೇಶಾದ್ಯಂತ ಸರ್ಕಾರಿ ಭೂಮಿ ನೀಡಲಾಗಿದೆ. 2002ರಲ್ಲಿ ಈ ಸಂಸ್ಥೆಯು ನಷ್ಟಕ್ಕೆ ತುತ್ತಾದ ಹಿನ್ನೆಲೆಯಲ್ಲಿ ಕಾನೂನುಬಾಹಿರವಾಗಿ ಕಾಂಗ್ರೆಸ್ ಪಕ್ಷದಿಂದ 90 ಕೋಟಿ ರೂ. ಸಾಲ ನೀಡಲಾಗಿದೆ. ರಾಜಕೀಯ ಪಕ್ಷವೊಂದು ಹೀಗೆ ಸಾಲ ನೀಡಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಪ್ರತಿಪಾದಿಸಿದರು.

ಬಳಿಕ ಯಂಗ್ ಇಂಡಿಯಾ ಎಂಬ ಹೊಸ ಸಂಸ್ಥೆ ಸ್ಥಾಪಿಸಲಾಯಿತು. ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಈ ಹೊಸ ಸಂಸ್ಥೆಯ ಟ್ರಸ್ಟಿಗಳಾಗಿದ್ದು, ಇವರು ತಲಾ ಶೇ.38 ರಷ್ಟು ಸಂಸ್ಥೆಯ ಷೇರುಗಳನ್ನು ಹೊಂದಿದ್ದಾರೆ. ಇವರು ಯಂಗ್ ಇಂಡಿಯಾ ಸಂಸ್ಥೆಗೆ ಅಸೋಸಿಯೇಟೆಡ್ ಜನರಲ್ ಲಿಮಿಟೆಡ್ ಅನ್ನು ಕೇವಲ 50 ಲಕ್ಷ ರೂ.ಗೆ ಖರೀದಿ ಮಾಡಿದ್ದು, ಈ ಸಂಬಂಧ 5 ಸಾವಿರ ಕೋಟಿ ರೂ. ಮೌಲ್ಯದ ಆಸ್ತಿಯನ್ನು ಮೋಸದಿಂದ ವಶಕ್ಕೆ ಪಡೆದ ಆರೋಪವಿದೆ. ಈ ಬಗ್ಗೆ ಇಡಿ ತನಿಖೆ ನಡೆಸುತ್ತಿದೆ. ಆದರೆ ಕಾನೂನಿಗಿಂತ ತಾವೇ ದೊಡ್ಡವರು ಎಂಬ ರೀತಿಯಲ್ಲಿ ಕಾಂಗ್ರೆಸ್‌ನವರು ಇಡಿ ವಿರುದ್ಧ ಈಗ ಹೋರಾಟಕ್ಕೆ ಇಳಿದಿದ್ದಾರೆ ಎಂದು ಕಿಡಿಕಾರಿದರು.

ಈ ಭಾರೀ ಅವ್ಯವಹಾರ ಪ್ರಕರಣದಿಂದ ಇವರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಾಂಗ್ರೆಸ್‌ನವರು ತಮ್ಮ ಚಟ್ಟಿಯಲ್ಲಿ ರಾಶಿ ಹಗರಣ ಇಟ್ಟುಕೊಂಡು ಬೇರೆಯವರ ವಿರುದ್ಧ ಕಮಿಷನ್ ಹಗರಣ ಎಂದು ಸುಳ್ಳು ಆರೋಪ ಮಾಡುತ್ತಾರೆ. ಇನ್ನಾದರೂ ಕಾಂಗ್ರೆಸ್ ಎಚ್ಚೆತ್ತು ದೇಶದ ಸಂವಿಧಾನಕ್ಕೆ ಅನುಗುಣವಾಗಿ ವರ್ತಿಸಬೇಕು ಎಂದು ಒತ್ತಾಯಿಸಿದರು. ಬಿಜೆಪಿ ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಎನ್.ಪ್ರದೀಪ್ ಕುಮಾರ್, ಜಿಲ್ಲಾ ಮಾಧ್ಯಮ ಸಂಚಾಲಕ ರಾಜ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಐಟಿಐ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್‌ಶಿಪ್ ಮೇಳ

ವಿವಿಧ ಕಂಪನಿಗಳಲ್ಲಿ ತರಬೇತಿಗೆ 421 ಮಂದಿ ಆಯ್ಕೆ



ಮೈಸೂರು, ಜೂ.13(ಆರ್‌ಕೆಬಿ)– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಉದ್ಯೋಗ ಘಟಕವು ಮೈಸೂರಿನ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಸಹಯೋಗದೊಂದಿಗೆ ಸೋಮವಾರ ಕಾವೇರಿ ಸಭಾಂಗಣದಲ್ಲಿ ಐಟಿಐ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಅಪ್ರೆಂಟಿಸ್‌ಶಿಪ್ ಮೇಳದಲ್ಲಿ ಭಾಗವಹಿಸಿದ್ದ 431 ಅಭ್ಯರ್ಥಿಗಳ ಪೈಕಿ 421 ಮಂದಿ ಅಪ್ರೆಂಟಿಸ್‌ಶಿಪ್‌ಗೆ ಆಯ್ಕೆಯಾದರು.

ಮೇಳದಲ್ಲಿ ಪ್ರಾಡಕ್ಟ್ ಪ್ರೊಮೋಟರ್, ಆಟೋಮೋಟಿವ್ ಆಕ್ಸೆಲ್, ಫ್ರೆಪ್ಲೋ ಫೌಂಡ್ರೀಸ್, ರಾಣೆ ಮದ್ರಾಸ್, ಕೇನ್ಸ್ ಟೆಕ್ನಾಲಜಿ, ದಿ ಸೌತ್ ಇಂಡಿಯಾ ಪೇಪರ್ ಮಿಲ್ ನಂಜನಗೂಡು, ಪ್ಯಾನಿಸ್, ಮಿಟ್ಸುಬುಷಿ ಹೆವಿ ಇಂಡಸ್ಟ್ರೀಸ್, ಬಿಇಎಂಎಲ್ ಸೇರಿಂತೆ 13 ಕಂಪನಿಗಳು ಭಾಗವಹಿಸಿದ್ದವು. ಇದಕ್ಕೂ ಮುನ್ನ ಕಾವೇರಿ ಸಭಾಂಗಣದಲ್ಲಿ ಅಪ್ರೆಂಟಿಸ್‌ಶಿಪ್ ಮೇಳಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಐಟಿಐ ವಿದ್ಯಾರ್ಥಿಗಳು ವೃತ್ತಿಯಲ್ಲಿ ಕೀಳರಿಮೆ ಕಾಣಬಾರದು. ಐಟಿಐನಲ್ಲಿ ಉತ್ತಮ ತರಬೇತಿ ಪಡೆದವರು ಉದ್ಯೋಗ ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ವಿದ್ಯಾರ್ಥಿಗಳು ತಮ್ಮ ಓದಿನ ಅವಧಿಯಲ್ಲಿ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿದಾಗ ಉದ್ಯೋಗದ ಕೊರತೆ ಕಾಣುವುದಿಲ್ಲ. ಸಾಕಷ್ಟು ಉದ್ಯೋಗಗಳು ಲಭ್ಯವಿವೆ. ಅಪ್ರೆಂಟಿಸ್‌ಶಿಪ್ ಮೂಲಕ ಉದ್ಯೋಗ ದೊರಕಿಸಿಕೊಂಡು ನೀವು ಉದ್ಯೋಗಿಯಾಗುವ್ವೆ ಅಲ್ಲದೆ, ಇತರರಿಗೂ ಉದ್ಯೋಗ ಕೊಡುವಂತಾಗಬೇಕು ಎಂದರು. ಭಾರತ ಸರ್ಕಾರ ಪಿಎಂಎನ್‌ಎಎಂ (ಪಿಎಂ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಮೇಳ)ದ ಉದ್ದೇಶವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರಿನ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಜಂಟಿ ನಿರ್ದೇಶಕ ಎಸ್.ಮಂಜುಳಾ, ಪಿಎಂಎನ್‌ಎಎಂ ಮೇಳ ದೇಶದ ಎಲ್ಲಾ ರಾಜ್ಯಗಳಲ್ಲಿ ಒಟ್ಟು 31 ಜಿಲ್ಲೆಗಳಲ್ಲಿ ಇಂದು ನಡೆಯುತ್ತಿದೆ. ನಮ್ಮ ವಿಭಾಗದಲ್ಲಿ ಎರಡು ಜಿಲ್ಲೆಗಳಲ್ಲಿ ನಡೆಯುತ್ತಿದೆ. ಐಟಿಐ ಪಾಸಾದ ವಿದ್ಯಾರ್ಥಿಗಳು ಎಲ್ಲಿ ಹೋಗುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ತಿಳಿಯುತ್ತಿಲ್ಲ. ಹಾಗಾಗಿ ಇಂತಹ ಅಪ್ರೆಂಟಿಸ್‌ಶಿಪ್ ಮೇಳದ ಮೂಲಕ ಅವರಿಗೆ ತರಬೇತಿ ನೀಡಿ, ಉದ್ಯೋಗ ದೊರಕಿಸಿಕೊಡುವ ಪ್ರಯತ್ನ ಇದಾಗಿದೆ ಎಂದರು. ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಸಚಿವ ಪ್ರೊ.ಆರ್.ರಾಜಣ್ಣ, ಉದ್ಯೋಗಾಧಿಕಾರಿ ಡಾ.ಆರ್.ಹೆಚ್.ಪವಿತ್ರ, ನವದೆಹಲಿ ಡಿಜಿಇಟಿಯ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ಪ್ರಾದೇಶಿಕ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಚಾಮುಂಡೇಶ್ವರಿ ದರ್ಶನ: ಸಿಬ್ಬಂದಿಗೆ ಸೂಚನೆ



ಮೈಸೂರು, ಜೂ.13(ಎಂಕೆ)– ವಿಶ್ವ ಯೋಗ ದಿನಾಚರಣೆ ಅಂಗವಾಗಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿಯವರು ಆಗಮಿಸುತ್ತಿದ್ದು, ಚಾಮುಂಡಿಬೆಟ್ಟಕ್ಕೂ ಭೇಟಿ ನೀಡುವುದರಿಂದ ಚಾಮುಂಡೇಶ್ವರಿ ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುವ ನೌಕರರು, ಭದ್ರತಾ ಹಾಗೂ ಸ್ವಚ್ಛತಾ ಸಿಬ್ಬಂದಿಗಳು ಜೂ.20 ಮತ್ತು 21ರಂದು ಕಡ್ಡಾಯವಾಗಿ ದೇವಾಲಯದ ಸಮವಸ್ತ್ರ ಧರಿಸಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ.

ಹಾಗೆಯೇ ಜೂ.11 ರಿಂದ 25ರವರೆಗೆ ರಜೆ ತೆಗೆದುಕೊಳ್ಳುವಂತಿಲ್ಲ. ಅದಾಗ್ಯೂ ಕರ್ತವ್ಯಕ್ಕೆ ಗೈರು ಹಾಜರಾಗುವುದು ಅಥವಾ ಸಾಂದರ್ಭಿಕ ರಜೆ ತೆಗೆದುಕೊಂಡ ನೌಕರರ ವೇತನವನ್ನು ಕಡಿತಗೊಳಿಸುವುದಲ್ಲದೆ ಶಿಸ್ತು ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ಚಾಮುಂಡೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಕತ್ತು, ಹಿಮ್ಮಡಿ ಕತ್ತರಿಸಿ ಯುವಕನ ಹತ್ಯೆಗೆ ಯತ್ನ: ಇಬ್ಬರು ಆರೋಪಿಗಳ ಬಂಧನ

ಹಣಕಾಸಿನ ವಿಚಾರದಲ್ಲಿ ನಡೆದ ಗಲಾಟೆ

ಹುಣಸೂರು, ಜೂ.13– ಕತ್ತು ಹಾಗೂ ಹಿಮ್ಮಡಿ ಕೊಯ್ದು ಯುವಕನ ಹತ್ಯೆಗೆ ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ಕೃತ್ಯ ನಡೆದ 24 ಗಂಟೆಯೊಳಗಾಗಿ ಬಂಧಿಸುವಲ್ಲಿ ಹುಣಸೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೆಡಿಯಾಲ ಗ್ರಾಮದ ಮನೋಜ್(24) ಮತ್ತು ಮಲ್ಲಿಕಾರ್ಜುನ್ (21) ಬಂಧನಕ್ಕೊಳಗಾದವರಾಗಿದ್ದು, ಇವರು ಮೈಸೂರು ತಾಲೂಕು ಬೀರಿಹುಂಡಿ ಗ್ರಾಮದ ಅಭಿಷೇಕ್(21) ಎಂಬಾತನ ಕತ್ತು ಹಾಗೂ ಹಿಮ್ಮಡಿ ಕೊಯ್ದು ಹತ್ಯೆಗೆ ಯತ್ನಿಸಿದ್ದರು.

ಹಾಕಾನಿನ ವ್ಯವಹಾರ: ಆರೋಪಿ ಮನೋಜ್ ಮತ್ತು ಗಾಯಗೊಂಡಿರುವ ಅಭಿಷೇಕ್ ತರಕಾರಿ ಸಾಗಿಸುವ ವಾಹನದ ಚಾಲಕರಾಗಿದ್ದು, ಅಭಿಷೇಕ್‌ಗೆ ಮನೋಜ್ 1.5 ಲಕ್ಷ ರೂ. ಸಾಲ ನೀಡಿದ್ದರು. ಆ ಸಾಲ ಮರುಪಾವತಿ ಮಾಡಲು ಸತಾಯಿಸುತ್ತಿದ್ದ ಆತನನ್ನು ಹತ್ಯೆ ಮಾಡಲು ನಿರ್ಧರಿಸಿದ್ದ ಮನೋಜ್ ತನ್ನ ಸ್ನೇಹಿತ ಮಲ್ಲಿಕಾರ್ಜುನ್ ಜೊತೆಗೂಡಿ ಮದ್ಯಪಾನ ಮಾಡೋಣವೆಂದು ಅಭಿಷೇಕ್‌ನನ್ನು ನಾಗಣಾಪುರ ಗ್ರಾಮದ ಹೊರವಲಯದ ನಿರ್ಜನ ಪ್ರದೇಶಕ್ಕೆ ಶನಿವಾರ ರಾತ್ರಿ ಕರೆತಂದಿದ್ದಾರೆ. ಮೂವರು ಕಂಠಮಟ್ಟ ಕುಡಿದ ನಂತರ ಸಾಲ ಮರುಪಾವತಿ ವಿಚಾರದಲ್ಲಿ ಮಾತಿಗೆ ಮಾತು ಬೆಳೆದು ಮನೋಜ್ ಮತ್ತು ಮಲ್ಲಿಕಾರ್ಜುನ ಸೇರಿ ಅಭಿಷೇಕ್‌ನ ಕತ್ತು ಹಾಗೂ ಹಿಮ್ಮಡಿ ಕೊಯ್ದು, ಬೆಳಗಾಗುವ ದರೊಳಗಾಗಿ ಆತ ಸಾಯುತ್ತಾನೆಂದು ಎಂದು ಭಾವಿಸಿ ಬೈಕ್‌ನಲ್ಲಿ ವಾಪಸ್ ಹೋಗಿದ್ದಾರೆ.

ರಕ್ತಸ್ರಾವದಿಂದ ನರಳುತ್ತಿದ್ದ ಅಭಿಷೇಕ್ ರಸ್ತೆಯಲ್ಲಿ ತೆವಳಿಕೊಂಡು ಬರುತ್ತಿದ್ದಾಗ ಅದೃಷ್ಟವಶಾತ್ ಗ್ರಾಮಸ್ಥರು ಆತನನ್ನು ಕಂಡು 108 ಅಂಬುಲೆನ್ಸ್ ಮೂಲಕ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಹುಣಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜಿಲ್ಲಾ ಎಸ್ಪಿ ಚೇತನ್ ಆದೇಶದ ಮೇರೆಗೆ ನಂಜನಗೂಡು ಡಿವೈಎಸ್ಪಿ ಗೋವಿಂದರಾಜು ಮಾರ್ಗದರ್ಶನದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ್ ಮತ್ತು ಸಬ್ ಇನ್ಸ್‌ಪೆಕ್ಟರ್ ಮಹೇಶ್ ಕುಮಾರ್ ಹಾಗೂ ಸಿಬ್ಬಂದಿ ಕೃತ್ಯ ನಡೆದ 24 ಗಂಟೆಯೊಳಗಾಗಿ ಆರೋಪಿಗಳನ್ನು ಬಂಧಿಸಿದ್ದು, ಈ ತಂಡವನ್ನು ಜಿಲ್ಲಾ ಎಸ್ಪಿ ಪ್ರಶಂಸಿಸಿದ್ದಾರೆ.

ಸಂಸ್ಕೃತ ನಾಟಕಗಳು ಜನರ ಭಾವನೆಗಳ ಬಿಂಬಿಸುತ್ತವೆ

ಅಂಕಣಕಾರರೂ ಆದ ಸಂಸ್ಕೃತ ವಿದ್ವಾಂಸ ಹೆಚ್.ವಿ.ನಾಗರಾಜರಾವ್ ಅಭಿಮತ



ಮೈಸೂರು, ಜೂ.13(ಎಂಕೆ)– ಸಂಸ್ಕೃತ ನಾಟಕಗಳಲ್ಲಿ ವೈವಿಧ್ಯತೆ ಅಡಗಿದ್ದು, ಮೂರು ಲೋಕದಲ್ಲಿರುವ ಜನರ ಭಾವನೆಗಳನ್ನು ಅನಾವರಣಗೊಳಿಸುತ್ತವೆ ಎಂದು ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ. ನಾಗರಾಜರಾವ್ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣದಲ್ಲಿ ಆಯೋಜಿಸಿದ್ದ 'ಗ್ರೀಷ್ಮ ರಂಗೋತ್ಸವ'ದಲ್ಲಿ 'ಸಂಸ್ಕೃತ ನಾಟಕಗಳು–ರಂಗಭೂಮಿ' ವಿಷಯ ಕುರಿತು ಸಂವಾದ ನಡೆಸಿದ ಅವರು, ಸಂಸ್ಕೃತ ನಾಟಕಗಳು ಬರೀ ಪ್ರೇಮ ಮಾತ್ರವಲ್ಲದೆ ರಾಜಕೀಯ ವಿಶ್ಲೇಷಣೆ, ಸಮಾಜದ ಸ್ಥಿತಿ–ಗತಿ, ಜನರ ವರ್ತನೆ ಮತ್ತು ಅವರ ಭಾವನೆಗಳನ್ನು ಒಳಗೊಂಡಿವೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಂಸ್ಕೃತ ಭಾಷೆಯ ಬಳಕೆ ಹೆಚ್ಚಾಗುತ್ತಿದ್ದು, ನಾಟಕಗಳನ್ನು ಬರೆಯುವವರು ಹೆಚ್ಚುತ್ತಿದ್ದಾರೆ. ಅಲ್ಲದೆ ಎಲ್ಲರಿಗೂ ಅರ್ಥವಾಗುವಂತಹ ಭಾಷೆಯನ್ನು ಬಳಕೆ ಮಾಡಲಾಗುತ್ತಿದೆ. ನಾಟಕಗಳಲ್ಲಿನ ಅಂಶಗಳು ಎಲ್ಲರಿಗೂ ಇಷ್ಟವಾಗುವುದಿಲ್ಲ. ಕೆಲವರಿಗೆ ಸಂಗೀತ ಇಷ್ಟವಾದರೆ, ಮತ್ತೆ ಕೆಲವರಿಗೆ ಕತೆ ಅಥವಾ ಕಲಾವಿದರ ನಟನೆ, ನಿರ್ದೇಶನ ಇಷ್ಟವಾಗಬಹುದು. ಆದರೆ ನಾಟ್ಯ ಎಲ್ಲರಿಗೂ ಇಷ್ಟವಾಗುತ್ತದೆ ಎಂದರು.

ಹಿಂದೆ ಕಲಾವಿದರು ತಮ್ಮ ಕಂಠ ಶಕ್ತಿಯನ್ನೇ ಬಳಸಿ ಪ್ರೇಕ್ಷಕರಿಗೆ ಕೇಳಿಸುವಂತೆ ಅಭಿನಯ ಮಾಡಬೇಕಾಗಿತ್ತು. ಕಾಲ ಬದಲಾದಂತೆ ತಂತ್ರಜ್ಞಾನ ಬೆಳೆದಿದ್ದು, ಇಂದು ಅಭಿನಯ ಸುಲಭವಾಗುವುದರ ಜತೆಗೆ ಅವಕಾಶಗಳು ಹೆಚ್ಚಾಗಿವೆ. ನಾಟಕಗಳಿಗೆ ವಿಶ್ವದಲ್ಲೇ ಪ್ರಸಿದ್ಧ ಪಡೆದ ರೋಮ್ ಹಾಗೂ ಗ್ರೀಸ್ ದೇಶಗಳಿಂದ ಕೆಲವನ್ನು ಎರವಲು ಪಡೆದು ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿದಲ್ಲದೆ ಜೊತೆಯ್ವಾರ್ತಾವಸ್ಥೆಯೇ ಇಲ್ಲದ ವಾರಗಳ ಏನಿಕೆ ರೋಮ್ ಮತ್ತು ಗ್ರೀಸ್ ದೇಶದಿಂದ ಬಂದಿದ್ದು ಎಂದು ಹೇಳಿದರು.

ಈ ವೇಳೆ ಭಾರತೀಯ ರಂಗ ವಿದ್ಯಾಲಯ ವಿದ್ಯಾರ್ಥಿಗಳಿಂದ 'ವಿದಿಶಾ ಪಥಸನ' ನಾಟಕ ಪ್ರದರ್ಶನಗೊಂಡಿತು. ರಂಗಾಯಣ ಉಪನಿರ್ದೇಶಕ ನಿರ್ಮಲ ಮಠಪತಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 14 ಜೂನ್ 2022

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ: ಮೈಸೂರಿನ ಎಲ್ಲಾ ತಾಲೂಕಿನಲ್ಲೂ ಶಾಂತಿಯುತ ಮತದಾನ

ರಾಜ್ಯ ರಾಜಕೀಯದಲ್ಲಿ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿರುವ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಅಂಗವಾಗಿ ಸೋಮವಾರ ಮೈಸೂರು ಜಿಲ್ಲೆಯ ತಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು ತಾಲೂಕೂ ಕೇಂದ್ರದಲ್ಲಿ ಶಾಂತಿಯುತ ಮತದಾನ ನಡೆಯಿತು.

ನಂಜನಗೂಡಿನಲ್ಲಿ ಶೇ.74.21ರಷ್ಟು ಮತದಾನ



ನಂ.ಗೂಡು ನಗರಸಭಾ ಸದಸ್ಯ ಕಪಿಲೇಶ್ ರವರ ತಾಯಿ 74 ವರ್ಷದ ಸುಬ್ಬಲಕ್ಷ್ಮಿ ಮತದಾನ ಮಾಡಿದರು.



ನಂ.ಗೂಡಿನ ಮತಗಟ್ಟೆಯಲ್ಲಿ ಸರತಿ ಸಾಲಿನಲ್ಲಿ ನಿಂತು ಹಕ್ಕು ಚಲಾಯಿಸಿದ ಪದವೀಧರ ಮತದಾರರು.

ನಂಜನಗೂಡು, ಜೂ.13(ಸುದರ್ಶನ್)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯು ನಂಜನಗೂಡಿನಲ್ಲಿ ದಾಖಲೆಯ ಶೇ. 74.21 ರಷ್ಟು ಶಾಂತಿಯುತ ಮತದಾನವಾಯಿತು.

ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ನಾಗಮ್ಮ ಶಾಲೆಯ ಆವರಣದ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ 3 ಮತಗಟ್ಟೆಗಳನ್ನು ಸ್ಥಾಪನೆ ಮಾಡಲಾಗಿತ್ತು. ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ತಾಲೂಕಿನಲ್ಲಿ 2,370 ಪುರುಷರು ಮತ ದಾರರು, 1,332 ಮಹಿಳಾ ಮತದಾರರು ಸೇರಿದಂತೆ ಒಟ್ಟು 3,702 ಪದವೀಧರ ಮತದಾರರು ನೊಂದಾವಣೆಗೊಂಡಿದ್ದರು. ಅದರಲ್ಲಿ 1,810 ಪುರುಷರು, 921 ಮಹಿಳೆಯರು ಸೇರಿದಂತೆ ಒಟ್ಟು 2,731 ಮತದಾರರು ಹಕ್ಕು ಚಲಾವಣೆ ಮಾಡುವ ಮೂಲಕ ವಿಧಾನಪರಿ ಷತ್‌ನ ದಕ್ಷಿಣ ಪದವೀಧರರ ಚುನಾವಣೆ ನಂಜನಗೂಡಿನಲ್ಲಿ ದಾಖಲೆ ಬರೆಯಿತು.

ಬೆಳಗ್ಗೆ 10ಗಂಟೆ ವೇಳೆಗೆ 363 ಮತಗಳು ಚಲಾವಣೆಗೊಂಡಿದ್ದವು. ಮಧ್ಯಾಹ್ನ 12 ವೇಳೆಗೆ ಮತದಾನ ಬಿರುಸುಗೊಂಡು ಶೇ. 25ರಷ್ಟು ಮತದಾನವಾಯಿತು. ಮಧ್ಯಾಹ್ನ 2 ಗಂಟೆ ವೇಳೆಗೆ 1,585 ಮತ ಚಲಾವಣೆಗೊಂಡು ಶೇ. 42ರಷ್ಟು ತಲುಪಿತು. ಮಧ್ಯಾಹ್ನದ ನಂತರ ಅತ್ಯಂತ ಬಿರುಸಿನಿಂದ ನಡೆದು ಚುನಾವಣೆ ಕಾವು ಏರಿತು. ಸಂಜೆ 5ಗಂಟೆ ವೇಳೆಗೆ ಶೇ.74.21 ದಾಖಲೆ ಮತ ದಾನವಾಯಿತು. ಸರತಿ ಸಾಲಿನಲ್ಲಿ ನಿಂತು ಪದವೀಧರರು ಉತ್ಸಾಹದಿಂದ ಮತದಾನ ಪ್ರಕ್ರಿಯೆಯಲ್ಲಿ ಭಾಗಿಯಾಗಿ ಮತದಾನ ಮಾಡಿದರು.

ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ಹಾಗೂ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮತಗಟ್ಟೆಗೆ ತೆರಳಿ ತಮ್ಮ ಹಕ್ಕು ಚಲಾಯಿಸಿದರು. ಕಾಂಗ್ರೆಸ್, ಬಿಜೆಪಿ ಪಕ್ಷದ ನಡುವೆ ನೇರ ಹಣಾಹಣಿ ಏರ್ಪಟ್ಟಿತ್ತು. ಜೆಡಿಎಸ್ ಮತ್ತು ಬಿಎಸ್‌ಪಿ, ರೈತ ಪಕ್ಷದ ಪ್ರಸನ್ನ ಎನ್.ಗೌಡ, ಪಕ್ಷೇತರ ಅಭ್ಯರ್ಥಿ ವಿನಯ್‌ರವರ ಪರವಾಗಿ ಕಾರ್ಯಕರ್ತರು ಮತಗಟ್ಟೆಯ ಬಳಿ ಟೇಬಲ್ ಹಾಕಿಕೊಂಡು ಪ್ರಚಾರ ನಡೆಸುವ ಮೂಲಕ ಅಂತಿಮವಾಗಿ ಪದವೀಧರರನ್ನು ಓಲೈಸುವತ್ತ ನಿರತರಾಗಿದ್ದರು.

ಮತಗಟ್ಟೆಯ ಸ್ಥಳಕ್ಕೆ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ, ತಮ್ಮ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸುವ ಮೂಲಕ ಕಾರ್ಯಕರ್ತರನ್ನು ಹುರಿದುಂಬಿಸಿದರು. ಕಾಂಗ್ರೆಸ್ ಪಕ್ಷದಿಂದ ಮಾಜಿ ಸಂಸದ ಆರ್.ಧ್ರುವನಾರಾಯಣ್, ವರುಣಾ ಕ್ಷೇತ್ರದ ಶಾಸಕ ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ ಡಾ.ಕೆ.ತಿಮ್ಮಯ್ಯ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಮ್ಮ ಪಕ್ಷದ ಅಭ್ಯರ್ಥಿ ಪರ ಮತ ಚಲಾಯಿಸುವಂತೆ ಮತದಾರರನ್ನು ಓಲೈಸುತ್ತಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್‌ನ್ನು ನಿಯೋಜಿಸಲಾಗಿತ್ತು.

ಮುಖ್ಯಾಂಶಗಳು

- ತಂಡೋಪ ತಂಡವಾಗಿ ಬಂದು ಹಕ್ಕು ಚಲಾಯಿಸಿದ ಮತದಾರರು
- ಮತಗಟ್ಟೆ ಮುಂಭಾಗ ಬೆಂಬಲಿಗರಿಂದ ಕೊನೆ ಹಂತದ ಮತಯಾಚನೆ
- ಬೆಳಗ್ಗೆಯಿಂದ ಸಂಜೆವರೆಗೂ ಎಲ್ಲೆಡೆ ಬಿರುಸಿನ ಮತದಾನ



ತಿ.ನರಸೀಪುರ ಪಟ್ಟಣದ ಮತಗಟ್ಟೆಯ ಮುಂಭಾಗ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಹಾಗೂ ಮಾಜಿ ಶಾಸಕ ಡಾ.ಎನ್.ಎಲ್. ಭಾರತಿಶಂಕರ್ ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿದರು.



ಶಾಸಕ ಅಶ್ವಿನ್‌ಕುಮಾರ್ ತಾವು ಮತಚಲಾಯಿಸಿದ ನಂತರ, ಮತಗಟ್ಟೆ ಮುಂಭಾಗ ಜೆಡಿಎಸ್ ಅಭ್ಯರ್ಥಿ ಪರ ಮತ ಕೋರಿದರು.



ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್ ಹಾಗೂ ಬೆಂಬಲಿಗರು ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚಿಸಿದರು.

ಪಿರಿಯಾಪಟ್ಟಣ: 2,082 ಪದವೀಧರರಿಂದ ಹಕ್ಕು ಚಲಾವಣೆ

ಪಿರಿಯಾಪಟ್ಟಣ, ಜೂ.13(ವೀರೇಶ್)– ದಕ್ಷಿಣ ಪದವೀಧರರ ಕ್ಷೇತ್ರ ಚುನಾವಣೆಯ ಹಿನ್ನೆಲೆಯಲ್ಲಿ ಸೋಮವಾರ ನಡೆದ ಮತದಾನ ಪ್ರಕ್ರಿಯೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ 2,082 (ಶೇ.76.21) ಪದವೀಧರರ ಮತದಾರರು ಹಕ್ಕು ಚಲಾಯಿಸಿದರು. ತಾಲೂಕಿನಲ್ಲಿ ಒಟ್ಟು 1836 ಪುರುಷರು, 896 ಮಹಿಳಾ ಮತದಾರರು ಸೇರಿ ಒಟ್ಟು 2,732 ಮತದಾರರಿದ್ದು, ಈ ಪೈಕಿ 1,476 ಪುರುಷರು, 606 ಮಹಿಳೆಯರು ಸೇರಿ ಒಟ್ಟು 2,082 ಮತದಾರರು ಹಕ್ಕು ಚಲಾಯಿಸಿದ್ದಾರೆ.



ಪಟ್ಟಣದ ಗೋಣಿಕೊಪ್ಪ ರಸ್ತೆಯ ಪದವಿ ಪೂರ್ವ ಕಾಲೇಜಿನಲ್ಲಿ ಶಾಂತಿಯುತವಾಗಿ ಮತದಾನ ನಡೆಯಿತು. ತಾಲೂಕಿನಾದ್ಯಂತ ಎಲ್ಲಾ ಪದವೀಧರ ಮತದಾರರು ಸಾಲಾಗಿ ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು.

ಮತಗಟ್ಟೆ ಆವರಣದ ಮುಂದೆ ಪಕ್ಷೇತರ ಅಭ್ಯರ್ಥಿಗಳ ಆಯಾ ಮುಖಂಡರು ಮತಯಾಚಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸರ್ಕಲ್ ಇನ್ಸ್‌ಪೆಕ್ಟರ್ ಜಗದೀಶ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಅತ್ಯುತ್ಸಾಹದಿಂದ ಮತ ಚಲಾಯಿಸಿದ ಪದವೀಧರರು

ತಿ.ನರಸೀಪುರ, ಜೂ.13(ಎಸ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಪದವೀಧರ ಮತದಾರರು ಅತ್ಯುತ್ಸಾಹದಿಂದ ಮತ ಚಲಾಯಿಸಿದರು.

ಬೆಳಗ್ಗೆಯಿಂದಲೇ ಪ್ರಜ್ಞಾವಂತ ಮತದಾರರು ಮತಗಟ್ಟೆಯ ಕಡೆಗೆ ತಂಡೋಪ ತಂಡವಾಗಿ ದೌಡಾಯಿಸಿ ಬಂದು ವಿವಿಧ ಪಕ್ಷಗಳ ಕಾರ್ಯಕರ್ತರು ಮತಗಟ್ಟೆಗಳ ಸಮೀಪ ತೆರೆಯಲಾಗಿದ್ದ ಮಾಹಿತಿ ಕೇಂದ್ರಗಳಿಗೆ ತೆರಳಿ ಮತ ಪಟ್ಟಿಯಲ್ಲಿ ತಮ್ಮ ಹೆಸರನ್ನು ಖಚಿತಪಡಿಸಿಕೊಂಡು ಮತಗಟ್ಟೆಯತ್ತ ತೆರಳಿ ಮತ ಚಲಾವಣೆ ಮಾಡಿದರು.

ಬೆಳಗ್ಗೆ ಮಂದಗತಿಯಲ್ಲಿ ನಡೆದ ಮತದಾನ 10 ಗಂಟೆಯ ನಂತರದಲ್ಲಿ ಬಿರುಸು ಪಡೆದುಕೊಂಡಿತು. ಪದವೀಧರ ಯುವಕ–ಯುವತಿಯರು ಮತದಾನ ಮಾಡಲು ಅತ್ಯುತ್ಸಾಹದಿಂದ ಮತಗಟ್ಟೆಗಳೆಡೆಗೆ ತೆರಳಿದ್ದು ವಿಶೇಷವಾಗಿತ್ತು. ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಬಿಎಸ್‌ಪಿ, ರೈತಸಂಘ ಹಾಗೂ ಪಕ್ಷೇತರ ಸೇರಿದಂತೆ ವಿವಿಧ ಪಕ್ಷಗಳಿಂದ 19 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದು, ಆಯಾಯ ಪಕ್ಷಗಳ ಕಾರ್ಯಕರ್ತರು ಮತಗಟ್ಟೆ ಬಳಿ ಬರುವ ಮತದಾರರಿಗೆ ತಮ್ಮ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಪಟ್ಟಣದ ಮತಗಟ್ಟೆಯೊಂದರಲ್ಲಿ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದ ಶಾಸಕ ಎಂ.ಅಶ್ವಿನ್‌ಕುಮಾರ್ ತಮ್ಮ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಸುಲಭ ಗೆಲುವು ಸಾಧಿಸಲಿದ್ದಾರೆಂಬ ವಿಶ್ವಾಸ ವ್ಯಕ್ತಪಡಿಸಿದರು. ಮತಗಟ್ಟೆ ಬಳಿ ತೆರೆಯಲಾಗಿರುವ ಮಾಹಿತಿ ಕೇಂದ್ರದ ಬಳಿ ಪದವೀಧರ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿರುವುದನ್ನು ಗಮನಿಸಿದರೆ ನಮ್ಮ ಪಕ್ಷದ ಅಭ್ಯರ್ಥಿಗೆ ಜಯ ಖಚಿತ ಎಂದರು.

ಈ ವೇಳೆ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸೋಸ್ಲೆ ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಟಿ.ಹೆಚ್.ಮಂಜುನಾಥ್, ವರುಣಾ ಕ್ಷೇತ್ರದ ನಿಕಟ ಪೂರ್ವ ಜೆಡಿಎಸ್ ಅಧ್ಯಕ್ಷ ತಾಯೂರು ಪ್ರಕಾಶ್, ವಸತಿ ಯೋಜನೆ ಜಾಗೃತಾ ಸಮಿತಿ ಮಾಜಿ ಅಧ್ಯಕ್ಷ ಸುನೀಲ್‌ಬೋಸ್, ಪುರಸಭಾ ಅಧ್ಯಕ್ಷ ಮದನ್‌ರಾಜ್, ಸದಸ್ಯ ಬಾದಾಮಿ ಮಂಜು, ಎನ್.ಲೋಕೇಶ್, ಸತೀಶ್, ತೋಟದಪ್ಪ ಬಸವರಾಜು, ಸೋಮಣ್ಣ, ಶಿವಸ್ವಾಮಿ, ಕಿರಗಸೂರು ಗ್ರಾಪಂ ಅಧ್ಯಕ್ಷೆ ಜ್ಯೋತಿ, ಶಿವಕುಮಾರ್, ಕಿಟ್ಟಿ, ಶಿವಕುಮಾರ್, ಶಿವು, ಬೆನಕನಹಳ್ಳಿ ವಿಜಯಕುಮಾರ್ ಮತ್ತಿತರರು ಮತದಾರರ ಮನವೊಲಿಕೆಯಲ್ಲಿ ತೊಡಗಿದ್ದರು.

ಹೆಚ್.ಡಿ.ಕೋಟೆಯಲ್ಲಿ ಬಿರುಸಿನ ಮತದಾನ



ಹೆಚ್.ಡಿ.ಕೋಟೆ, ಜೂ.13(ಮಂಜು)– ದಕ್ಷಿಣ ಪದವೀಧರರ ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರ ಪಟ್ಟಣದಲ್ಲಿ ಬಿರುಸಿನಿಂದ ಮತದಾನ ನಡೆಯಿತು.

ಬೆಳಗ್ಗೆ 8 ಗಂಟೆಗೆ ಪ್ರಾರಂಭವಾದ ಮತದಾನ ಮಧ್ಯಾಹ್ನವರೆಗೆ ಮಂದಗತಿಯಲ್ಲಿ ಸಾಗಿತು. ನಂತರ ಮತದಾರರು ಮತದಾನ ಕೇಂದ್ರಕ್ಕೆ ಗುಂಪು ಗುಂಪಾಗಿ ಬರಲಾರಂಭಿಸಿದರು. ಪಟ್ಟಣದ ಮಿನಿ ವಿಧಾನ ಸೌಧದಲ್ಲಿ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದರಿಂದ ಮಿನಿವಿಧಾನಸೌಧದ ಮುಂಭಾಗದ ಹುಣಸೂರು–ಬೇಗೂರು ರಸ್ತೆ ಅಕ್ಕಪಕ್ಕದಲ್ಲಿ ವಿವಿಧ ರಾಜಕೀಯ ಪಕ್ಷದ ಮುಖಂಡರು ಶಾಮಿಯಾನ ಹಾಕಿ ಮತ ಕೇಳುತ್ತಿದ್ದರಿಂದ ಜನ ದಟ್ಟಣೆ ಜಾಸ್ತಿಯಾಗಿ ಸುಗಮ ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು.

ಕಾಂಗ್ರೆಸ್‌ನಿಂದ ಶಾಸಕ ಅನಿಲ್ ಚಿಕ್ಕಮಾದು, ಬಿಜೆಪಿಯಿಂದ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಜೆಡಿಎಸ್‌ನಿಂದ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಪುತ್ರ ಜಯಪ್ರಕಾಶ್, ರೈತ ಸಂಘ ಹಾಗೂ ದಲಿತ ಸಂಘಟನೆ ಅಭ್ಯರ್ಥಿ ಪರ ಬಡಗಲಪುರ ನಾಗೇಂದ್ರ, ಬೆಟ್ಟಯ್ಯ ಕೋಟೆ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಪಕ್ಷದ ಅಭ್ಯರ್ಥಿ ಪರವಾಗಿ ಬಿರುಸಿನಿಂದ ಮತಯಾಚನೆ ಮಾಡಿದರು.

ಶೇ. 75.92ರಷ್ಟು ಮತದಾನ: ತಾಲೂಕಿನಲ್ಲಿ 1848 ಪುರುಷರು, 714 ಮಹಿಳೆಯರು ಸೇರಿ ಒಟ್ಟು 2,562 ಮತದಾರರಿದ್ದು, ಈ ಪೈಕಿ 1,451 ಪುರುಷರು, 494 ಮಹಿಳೆಯರು ಸೇರಿ ಒಟ್ಟು 1,945 (ಶೇ 75.92) ಮಂದಿ ಮತ ಚಲಾಯಿಸಿದರು.

ಮತದಾನ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ಕಂಡುಬರಲಿಲ್ಲ. ಮಾಜಿ ಮಂತ್ರಿ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮತಗಟ್ಟೆಯಲ್ಲಿ ತಮ್ಮ ಮತ ಚಲಾಯಿಸಿದರು.

ತಹಸೀಲ್ದಾರ್ ರತ್ನಾಂಬಿಕೆ ಅವರ ನೇತೃತ್ವದಲ್ಲಿ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು. ವೃತ್ತ ನಿರೀಕ್ಷಕ ಬಸವರಾಜು ಹಾಗೂ ಆನಂದ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೊಬಸ್ತ್ ಕೈಗೊಳ್ಳಲಾಗಿತ್ತು.

ಹುಣಸೂರಿನಲ್ಲಿ ಶೇ. 75.6ರಷ್ಟು ಮತದಾನ



ಸರತಿ ಸಾಲಿನಲ್ಲಿ ನಿಂತು ಹೆಚ್.ಪಿ. ಮಂಜುನಾಥ್ ಮತಚಲಾಯಿಸಿದರು.



ಜಿ.ಡಿ.ಹರೀಶ್‌ಗೌಡ.



ಪುಷ್ಪಾ ಅಮರನಾಥ್

ಹುಣಸೂರು, ಜೂ.13(ಕೆಕೆ)– ದಕ್ಷಿಣ ಪದವೀಧರ ಕ್ಷೇತ್ರದ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಹುಣಸೂರಿನಲ್ಲಿ ಶೇ.75.6ರಷ್ಟು ಮತದಾನ ನಡೆಯಿತು.

ಹುಣಸೂರಿನಲ್ಲಿ 2,297 ಪುರುಷರು, 1,381 ಮಹಿಳೆಯರು ಸೇರಿದಂತೆ ಒಟ್ಟು 3,678 ಮತದಾರರಿದ್ದು, ಈ ಪೈಕಿ 1,843 ಪುರುಷರು, 958 ಮಹಿಳೆಯರು ಸೇರಿ ಒಟ್ಟು 2,793 ಮತದಾರರು ಮತ ಚಲಾಯಿಸಿದರು.

ತಹಸೀಲ್ದಾರ್ ಕಚೇರಿಯಲ್ಲಿ 4 ಮತಗಟ್ಟೆಗಳನ್ನು ತೆರೆಯಲಾಗಿತ್ತು. ಬೆಳಗ್ಗೆ 8 ಗಂಟೆಗೆ ಪ್ರಾರಂಭವಾದ ಮತದಾನ ಮಂದಗತಿಯಲ್ಲಿ ಸಾಗಿದರೂ, ಮಧ್ಯಾಹ್ನ 12ಗಂಟೆ ನಂತರ ಚುರುಕು ಪಡೆದುಕೊಂಡಿತ್ತು. ಸಂಜೆ 5ಕ್ಕೆ ಮತದಾನದ ಸಮಯ ಮುಗಿದಿದ್ದರೂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಎಲ್ಲಾ ಮತದಾರನ್ನು ಒಳಗೆ ಸೇರಿಸಿ ಸಂಜೆ 6ರ ತನಕ ಮತದಾನಕ್ಕೆ ಅವಕಾಶ ನೀಡಲಾಯಿತು.

ಶಾಸಕ ಹೆಚ್.ಪಿ.ಮಂಜುನಾಥ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಅಮರನಾಥ್, ಮೈಸೂರು ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರು ಮತದಾರರ ಜೊತೆ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು. ಮತಗಟ್ಟೆ ಮುಂಭಾಗ ವಿವಿಧ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು.

ಜೂ.15, ಗಣಾರಾಧನಾ ಮಹೋತ್ಸವ

ಬೆಟ್ಟದಪುರ, ಜೂ.13(ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸ್ವತಂತ್ರ ಸಲೀಲಾಖ್ಯ ಕನ್ನಡ ಮಠದಲ್ಲಿ ಜೂ. 15ರ ಬುಧವಾರ ಗಣಾರಾಧನಾ ಮಹೋತ್ಸವ ನಡೆಯಲಿದೆ ಎಂದು ಮಠಾಧಿಪತಿಗಳಾದ ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಅಂದು ಹಿಂದಿನ ಶ್ರೀಗಳಾದ ಚಿಕ್ಕವೀರ ದೇಶಿಕೇಂದ್ರ ಸ್ವಾಮೀಜಿ ಅವರ 94ನೇ ಹಾಗೂ ಚನ್ನವೀರ ದೇಶಿಕೇಂದ್ರ ಸ್ವಾಮೀಜಿ ಅವರ 41ನೇ ವರ್ಷಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಮಠದ ಶಿಕ್ಷಣ ಸಂಸ್ಥೆಯಿಂದ ಪ್ರತಿಭಾ ಪುರಸ್ಕಾರ ಏರ್ಪಡಿಸಲಾಗಿದೆ. ಮಠಕ್ಕೆ ಭೂ ದಾನ ಮಾಡಿದಂತಹ ಬೆಟ್ಟದಪುರದ ಶತಾಯುಷಿ ತಮ್ಮಯ್ಯ ಶೆಟ್ಟಿ ದಂಪತಿ ಹಾಗೂ ಗುಂಡ್ಲುಪೇಟೆ ತಾಲೂಕಿನ ಕುರುಬರಹಟ್ಟಿ ಗ್ರಾಮದ ದಿ.ಪುಟ್ಟಣ್ಣ ಅವರ ಪತ್ನಿ ಮಹಾಲಿಂಗಮ್ಮ ಅವರನ್ನು ಸನ್ಮಾನಿಸಲಾಗುವುದು ಎಂದರು. ಹಾಸನ ತಾಲೂಕಿನ ಮುಕುಂದೂರು ಬೆಟ್ಟದ ಮಠದ ಮಹಾಂತ ಬಸವಲಿಂಗ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹುಣಸೂರು ತಾಲೂಕಿನ ಮಾದಹಳ್ಳಿ ಮಠದ ಶ್ರೀಶಾಂಭಶಿವ ಸ್ವಾಮೀಜಿ ಹಾಗೂ ಗಾವಡಗೆರೆ ಮಠದ ಶ್ರೀನಟರಾಜ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರೈತ ಸಂಘದ ಪ್ರಾದೇಶಿಕ ಸಂಚಾಲಕ ಸರಗೂರು ನಟರಾಜ್, ಆರ್‌ಟಿಓನ ನಿವೃತ್ತ ನೌಕರ ಶಿವಣ್ಣ ಭಾಗವಹಿಸಲಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಚನ್ನಬಸವದೇಶಿಕೇಂದ್ರ ಸ್ವಾಮೀಜಿ ಮನವಿ ಮಾಡಿದರು.

ಶ್ರೀಚಿಕ್ಕದೇವಮ್ಮ ಬೆಟ್ಟದ ಪಾರುಪತ್ತೆದಾರ್ ಆಯ್ಕೆ



ಸರಗೂರು, ಜೂ.13(ನಾಗೇಶ್)– ಶ್ರೀಚಿಕ್ಕದೇವಮ್ಮನವರ ಬೆಟ್ಟದ ನೂತನ ಪಾರುಪತ್ತೆದರ್ ಆಗಿ ಎನ್.ಮಹದೇವಸ್ವಾಮಿ ಆಯ್ಕೆಯಾದರು.

ಬಳಿಕ, ಪಟ್ಟಣದ ಶ್ರೀಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಶಿವಾರ್ಚಕ ಸಂಘದ ಮಾಸಿಕ ಸಭೆಯಲ್ಲಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಶಿವಾರ್ಚಕ ಸಂಘದ ಅಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷ ನಂಜುಂಡಸ್ವಾಮಿ, ಕಾರ್ಯದರ್ಶಿ ಜಗದೀಶ್, ಸಂಘದ ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

ಜಿಟಿಡಿ ರಾಜಕೀಯ ನಿವೃತ್ತಿ ಹೊಂದುವುದು ಬೇಡ

ಹಿರೀಕ್ಯಾತನಹಳ್ಳಿ, ಜೂ.13– ಜಿ.ಟಿ.ದೇವೇಗೌಡ ಅವರು ರಾಜಕೀಯ ನಿವೃತ್ತಿ ಹೊಂದುವುದು ಬೇಡ. ಅವರು ಸಕ್ರಿಯ ರಾಜಕಾರಣದಲ್ಲಿ ಇರಬೇಕು ಎಂದು ಅವರ ಅಭಿಮಾನಿಗಳು ಒತ್ತಾಯಿಸಿದರು.

ಈ ಸಂಬಂಧ ಪತ್ರಿಕೆಯೊಂದಿಗೆ ಗಾವಡಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಹೊನ್ನಪ್ಪ ರಾವ್, ಕಾಳಿಂಗೆ ರಾವ್ ಮಾತನಾಡಿ, ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಮತ ನೀಡಿದ ನಂತರ ಮಾಧ್ಯಮಗಳೊಂದಿಗೆ ಜಿ.ಟಿ.ದೇವೇಗೌಡ ಅವರು, ಹಿಂದಿನ ಹಾಗೂ ಇಂದಿನ ರಾಜಕೀಯಗಳ ನಡುವೆ ತುಂಬಾನೇ ವ್ಯತ್ಯಾಸವಾಗಿದೆ. ಕೆಲವು ಘಟನೆಗಳು ಮನಸ್ಸಿಗೆ ನೋವುಂಟು ಮಾಡಿದೆ. ಆದ್ದರಿಂದ ರಾಜಕೀಯದಿಂದ ದೂರವಿರಬೇಕು ಎಂಬ ಅನಿಸಿಕೆ ಜೊತೆಗೆ ಇತ್ತೀಚೆಗೆ ಹುಣಸೂರು ತಾಲೂಕಿನ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿ ಕೆಲವು ಅಭಿಮಾನಿಗಳನ್ನು ಭೇಟಿ ಮಾಡಿ ಎರಡು–ಮೂರು ತಿಂಗಳಲ್ಲಿ ರಾಜಕೀಯ ತೀರ್ಮಾನ ಮಾಡುವುದಾಗಿ ಹೇಳಿಕೆ ನೀಡಿದ್ದರು.

ಇವರ ಹೇಳಿಕೆಯಿಂದ ಅಭಿಮಾನಿಗಳಿಗೆ ನೋವಾಗಿದೆ. ಈ ಹೇಳಿಕೆಯನ್ನು ಜಿ.ಟಿ.ದೇವೇಗೌಡರು ವಾಪಸ್ ಪಡೆದು ಸಕ್ರಿಯ ರಾಜಕಾರಣದಲ್ಲಿ ಇರಬೇಕು. ಗ್ರಾಮೀಣ ಭಾಗದ ಜನರಿಗೆ ತಮ್ಮ ಅಧಿಕಾರ ಅವಧಿಯಲ್ಲಿ ಮಾಡಿರುವ ಜನಪರ ಕಾರ್ಯಕ್ರಮಗಳು ಇಂದಿಗೂ ನೆನಪಿನಲ್ಲಿವೆ. ಗ್ರಾಮೀಣ ಜನರ ಕಷ್ಟ–ಸುಖಗಳಿಗೆ ಸದಾ ಸ್ಪಂದಿಸುವಂತಹ ನಿಮ್ಮಂತ ರಾಜಕಾರಣಿಗಳು ಇರಬೇಕು. ಆದ್ದರಿಂದ ನೀವು ಯಾವುದೇ ಕಾರಣಕ್ಕೂ ರಾಜಕೀಯ ನಿವೃತ್ತಿ ಘೋಷಣೆ ಮಾಡದೆ, ಕಲುಷಿತ ರಾಜಕಾರಣವನ್ನು ಸರಿಪಡಿಸಬೇಕು ಎಂದರು.

ಆಪ್ತರ ಕುಶಲೋಪರಿ ವಿಚಾರಿಸಿದ ಜಿಟಿಡಿ



ಹುಣಸೂರು, ಜೂ.13(ಕೆಕೆ)– ಪಟ್ಟಣಕ್ಕೆ ಸೋಮವಾರ ಶಾಸಕ ಜಿ.ಟಿ.ದೇವೇಗೌಡ ಅವರು ಭೇಟಿ ನೀಡಿ, ಅವರ ನಿಕಟಪರ ಮುಖಂಡರು ಹಾಗೂ ಕಾರ್ಯಕರ್ತರ ಕುಶಲೋಪರಿ ವಿಚಾರಿಸಿದರು.

ಮೊದಲಿಗೆ 13ನೇ ವಾರ್ಡಿನ ನಿಜಾಂ ಮೊಹಲ್ಲಾದ ನಗರಸಭೆ ಮಾಜಿ ಸದಸ್ಯ ಹಜ಼ರತ್‌ಜಾನ್ ಅವರ ನಿವಾಸಕ್ಕೆ ಭೇಟಿ ನೀಡಿದರು. ನಂತರ ಇತ್ತೀಚೆಗೆ ನಿಧನರಾದ ಪುರಸಭೆ ಮಾಜಿ ಅಧ್ಯಕ್ಷ ಪರ್ವಿನ್‌ತಾಜ್ ಹಾಗೂ ಜಾಮೀಯಾ ಮಸೀದಿಯ ಕಾರ್ಯದರ್ಶಿ ರಹಮತುಲ್ಲಾಖಾನ್ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬಳಿಕ, ಅನಾರೋಗ್ಯ ಪೀಡಿತರಾದ ಪುರಸಭೆ ಮಾಜಿ ಸದಸ್ಯ ಮಹಮ್ಮದ್ ಪೀರ್ ಅವರ ನಿವಾಸಕ್ಕೆ ಭೇಟಿ ನೀಡಿ, ಅವರ ಆರೋಗ್ಯ ವಿಚಾರಿಸಿದರು. ನಂತರ ಮುದುಗ ನೂರು ಗ್ರಾಮಕ್ಕೆ ಭೇಟಿ ನೀಡಿದರು. ಈ ವೇಳೆ ಗ್ರಾಮಸ್ಥರು ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ನಿಮ್ಮ ಕುಟುಂಬದಿಂದ ಒಬ್ಬರು ಸ್ಪರ್ಧಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಜಿ.ಟಿ.ದೇವೇಗೌಡರು, ನಾನು ಯಾವುದೇ ನಿರ್ಧಾರ ಕೈ ಗೊಂಡಿಲ್ಲ. ಮುಂದಿನ ದಿನಗಳಲ್ಲಿ ತಾಲೂಕಿನ ಕಾರ್ಯಕರ್ತರ ಸಭೆ ಸೇರಿಸಿ ತೀರ್ಮಾನ ಕೈಗೊಳ್ಳುತ್ತೇನೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ರಿಜ್ವಾನ್, ಮುಖಂಡರಾದ, ಹರ್ಷದ್, ಸುಹೇಲ್, ಮುಹೀದುಲ್ಲಾ ಖಾನ್, ಮಕ್ಸೂದ್ ಅಲಿಖಾನ್, ಶಹತಾಬ್, ಸೇರಿದಂತೆ ಇತರರು ಹಾಜರಿದ್ದರು.

ಬಿಎಂ.ನಾಗರಾಜ್‌ಮೂರ್ತಿ ನಿಧನ



ಸುತ್ತೂರು, ಜೂ.13– ನಂಜನಗೂಡು ತಾಲೂಕಿನ ಬಿಳುಗಲಿ ಗ್ರಾಮದ ಸೊಸೈಟಿ ಬಿ.ಎಂ.ನಾಗರಾಜ್‌ಮೂರ್ತಿ (74) ಸೋಮವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಸಂಜೆ ಸ್ವಗ್ರಾಮ ಬಿಳುಗಲಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ರೈತರು, ಗ್ರಾಮದ ಮುಖಂಡರು ಹಾಜರಿ ದ್ದರು. ಬಿಲಿಗೆರೆ ಕೃಷಿ ಪತ್ತಿನ ಸಹಕಾರ ಸಂಘದಿಂದ ಸಂತಾಪ ಸೂಚಿಸಲಾಯಿತು.

2023-2027ರ ಐಪಿಎಲ್ ಟಿವಿ, ಡಿಜಿಟಲ್ ಹಕ್ಕು ದಾಖಲೆಯ 43,050 ಕೋಟಿ ರೂ.ಗೆ ಮಾರಾಟ

ನವದೆಹಲಿ: 2023 ರಿಂದ 2027ರವರೆಗಿನ 5 ವರ್ಷಗಳ ಐಪಿಎಲ್ ಟೂರ್ನಿಗಳ ಟಿವಿ, ಡಿಜಿಟಲ್ ಹಕ್ಕು ಮಾರಾಟದ ಹರಾಜು ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ದಾಖಲೆಯ 43,050 ಕೋಟಿ ರೂಗೆ ಹಕ್ಕು ಮಾರಾಟವಾಗಿದೆ ಎಂದು ಹೇಳಲಾಗುತ್ತಿದೆ. ಮೂಲಗಳ ಪ್ರಕಾರ ಮಾಧ್ಯಮ ಹಕ್ಕುಗಳಿಗಾಗಿ ಪ್ಯಾಕೇಜ್- A ಮತ್ತು ಪ್ಯಾಕೇಜ್- Bಯನ್ನು ಮಾರಾಟ ಮಾಡಲಾಗಿದೆ. ಭಾರತದಲ್ಲಿ ಪ್ರಸಾರವಾಗುವ ಟಿವಿ ಮತ್ತು ಡಿಜಿಟಲ್ ಮಾಧ್ಯಮದ ಹಕ್ಕುಗಳನ್ನು ಮಾರಾಟ ಮಾಡಲಾಗಿದೆ. ಐಪಿಎಲ್ 2023ರಿಂದ 2027ರವರೆಗೆ ಟಿವಿ ಹಕ್ಕುಗಳು 57.5 ಕೋಟಿ ರೂ.ಗಳಿಗೆ ಮತ್ತು ಡಿಜಿಟಲ್ ಹಕ್ಕುಗಳು 48 ಕೋಟಿ ರೂ.ಗೆ ಮಾರಾಟವಾಗಿವೆ ಎಂದು ಹೇಳಲಾಗಿದೆ. ಆದರೆ ಈ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿಲ್ಲ.




ಅಂಬಾನಿ ತೆಕ್ಕೆಗೆ ಹಕ್ಕು: ವಿಶ್ವದ ಅತಿ ಹೆಚ್ಚು ವೀಕ್ಷಿಸಿದ ಕ್ರೀಡಾಕೂಟಗಳಲ್ಲಿ ಒಂದಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಗಾಗಿ ಟಿವಿ ಮತ್ತು ಡಿಜಿಟಲ್ ಹಕ್ಕುಗಳ ಹರಾಜು ಸೋಮವಾರ ಮುಕ್ತಾಯಗೊಂಡಿದೆ. ರಿಲಯನ್ಸ್ ಡಿಜಿಟಲ್ ಸಂಸ್ಥೆಯ ಮುಖ್ಯಸ್ಥ ಮುಖೇಶ್ ಅಂಬಾನಿಯವರ ರಿಲಯನ್ಸ್ ಇಂಡಸ್ಟ್ರೀಸ್ ಲಾಭದಾಯಕ ಕ್ರಿಕೆಟ್ ಪಂದ್ಯಾವಳಿಯ ಪ್ರಸಾರ ಹಕ್ಕುಗಳನ್ನು ಗೆದ್ದುಕೊಂಡಿದೆ. ಟಿವಿ ಹಕ್ಕುಗಳ ಹರಾಜು ಪ್ರತಿ ಪಂದ್ಯಕ್ಕೆ 57 ಕೋಟಿ ರೂ.ಗೆ ಮುಕ್ತಾಯವಾಗಿದ್ದು, ಡಿಜಿಟಲ್ ಹಕ್ಕುಗಳ ಮೌಲ್ಯವು ಪ್ರತಿ ಪಂದ್ಯಕ್ಕೆ 48 ಕೋಟಿ ರೂಗೆ ಮಾರಾಟವಾಗಿದೆ ಎಂದು ಹೇಳಲಾಗಿದೆ. 2023-2027 ರ ಮಾಧ್ಯಮ ಹಕ್ಕುಗಳ ಮಾರಾಟಕ್ಕೆ ಒಟ್ಟಾರೆ ಟಿವಿ ಮತ್ತು ಡಿಜಿಟಲ್ ಹಕ್ಕುಗಳು 43,050 ಕೋಟಿ ರೂ.ಗೆ ಮುಕ್ತಾಯಗೊಂಡಿವೆ. ಇದರ ಮೂಲ ಬೆಲೆಯೇ ರೂ. 30,340 ಕೋಟಿ.

1 ಪಂದ್ಯಕ್ಕೆ 100 ಕೋಟಿ: ಮಾಧ್ಯಮ ವರದಿಗಳ ಪ್ರಕಾರ, ಪ್ಯಾಕೇಜ್ ಎ ವಿಜೇತರು ಪ್ಯಾಕೇಜ್ ಬಿ ವಿಜೇತರು 100 ಕೋಟಿ ರೂಗೆ ಖರೀದಿ ಮಾಡಿದ್ದು, ಪ್ಯಾಕೇಜ್ ಸಿಗಾಗಿ ಎರಡನೇ ಸುತ್ತಿನ ಬಿಡ್ಡಿಂಗ್ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗುತ್ತದೆ ಎಂದು ವರದಿಗಳು ತಿಳಿಸಿವೆ. ಮಾಧ್ಯಮ ಹಕ್ಕುಗಳ ಪ್ಯಾಕೇಜ್-A ಮತ್ತು ಪ್ಯಾಕೇಜ್-B ಒಟ್ಟು 43,255 ಕೋಟಿ ರೂ.ಗಳಿಗೆ ಮಾರಾಟವಾಗಿದೆ. ಅಂದರೆ, ಈ ಬೆಲೆ 1 ಪಂದ್ಯಕ್ಕೆ 105.5 ಕೋಟಿ ರೂ.ಗೆ ತಲುಪಿದೆ. ಇದರ ಅಧಿಕೃತ ಘೋಷಣೆ ಇನ್ನಷ್ಟೇ ಹೊರಬೀಳಬೇಕಿದೆ. ಈ ಹರಾಜಿನಲ್ಲಿ ಟಿವಿ ರೈಟ್ಸ್‌ನ ಮೂಲ ಬೆಲೆ 49 ಕೋಟಿ ರೂ. ಆಗಿದ್ದು, ಡಿಜಿಟಲ್ ರೈಟ್ಸ್‌ನ ಬೆಲೆ 33 ಕೋಟಿ ರೂ. ಆಗಿದೆ. ಐಪಿಎಲ್ ಮಾಧ್ಯಮ ಹಕ್ಕುಗಳನ್ನು ಯಾರು ಖರೀದಿಸಿದ್ದಾರೆ ಅನ್ನೋದು ಇನ್ನಷ್ಟೇ ತಿಳಿದುಬರಬೇಕಿದೆ.

ಜೂ.20ರಂದು 'ಬೇಸ್' ಕ್ಯಾಂಪಸ್ ಉದ್ಘಾಟಿಸಲಿರುವ ಮೋದಿ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಜೂ. 20 ರಂದು ನಗರದ ನಾಗರಬಾವಿ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ (ಬೇಸ್) ನೂತನ ಕ್ಯಾಂಪಸ್ಸನ್ನು ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಅವರು ಸೋಮವಾರ ಕ್ಯಾಂಪಸ್ಸಿಗೆ ಭೇಟಿ ನೀಡಿ, ಪೂರ್ವಸಿದ್ಧತೆ ಮತ್ತಿತರ ವ್ಯವಸ್ಥೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದರು.



ಇದರೊಂದಿಗೆ ಟಾಟಾ ಸಮೂಹ ಸಂಸ್ಥೆಯ ಸಹಾಯದೊಂದಿಗೆ ನಾಲ್ಕೂವರೆ ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದಲ್ಲಿ ಉನ್ನತೀಕರಿಸಿರುವ 150 ಸರಕಾರಿ ಐಟಿಐ ಸಂಸ್ಥೆಗಳನ್ನು ಕೂಡ ಪ್ರಧಾನಿಗಳು ಈ ಕ್ಯಾಂಪಸ್ಸಿನಿಂದಲೇ ಲೋಕಾರ್ಪಣೆ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಐಟಿಐ ಸಂಸ್ಥೆಯ ಮಾದರಿ ಪ್ರತಿಕೃತಿ ಮತ್ತು ಅತ್ಯಾಧುನಿಕ ಪ್ರಯೋಗಾಲಯದ ಮಾದರಿಗಳನ್ನು ಇಲ್ಲಿ ಸೃಷ್ಟಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರು ಮತ್ತಿತರ ಅಧಿಕಾರಗಳೊಂದಿಗೆ ಸಭೆ ನಡೆಸಿದರು. ಪ್ರಧಾನಿಯವರ ಆಗಮನದ ಹಿನ್ನೆಲೆಯಲ್ಲಿ ಎಲ್ಲ ವ್ಯವಸ್ಥೆಯೂ ಸಮರ್ಪಕವಾಗಿ ರಬೇಕು. ಇದರಲ್ಲಿ ಯಾವುದೇ ಲೋಪದೋಷಗಳಿಗೆ ಆಸ್ಪದ ಕೊಡಬಾರದು. 250 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಬೇಸ್ ಕ್ಯಾಂಪಸ್, ಎನ್‌ಇಪಿ ಅಳವಡಿಕೆ ದೃಷ್ಟಿ ಯಿಂದಲೂ ಗಮನ ಸೆಳೆಯುತ್ತಿದೆ. ಮೋದಿಯವರ ಭೇಟಿಯ ಸಂದರ್ಭದಲ್ಲಿ ಇದನ್ನು ಕೂಡ ಬಿಂಬಿಸಲು ಯೋಜಿಸಬೇಕು ಎಂದು ಅವರು ಹೇಳಿದರು. ಐಟಿಐಗಳ ಲೋಕಾರ್ಪಣೆಗೆ ಮಾಡಿಕೊಂಡಿರುವ ವ್ಯವಸ್ಥೆಗಳನ್ನು ವೀಕ್ಷಿಸಿದ ಸಚಿವರು, ಪ್ರಯೋಗಾಲಯಗಳಲ್ಲಿ ಇರುವ ಆಧುನಿಕ ಸಾಧನಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ರಾಷ್ಟ್ರಪತಿ ಚುನಾವಣೆ: ನಿಯೋಜನೆಗೊಂಡ ಅಧಿಕಾರಿಗಳಿಗೆ ಕಾರ್ಯಾಗಾರ

ಹೊಸದಿಲ್ಲಿ: ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧಿಕಾರವಧಿ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜುಲೈ 18ರಂದು ನೂತನ ಅಧ್ಯಕ್ಷರ ಆಯ್ಕೆ ನಡೆಯಲಿದೆ. ದೇಶದ ಪ್ರಥಮ ಪ್ರಜೆಯನ್ನು ಆಯ್ಕೆ ಮಾಡುವ ಸಂಬಂಧ ಚುನಾವಣಾ ಆಯೋಗ ಪೂರ್ವ ಸಿದ್ಧತೆ ಆರಂಭಿಸಿದೆ. ಇಂದು ನವದೆಹಲಿಯ ವಿಜ್ಞಾನ ಭವನದಲ್ಲಿ ಚುನಾವಣಾ ಆಯೋಗ (ಇಸಿಐ) ಮುಂಬರುವ ರಾಷ್ಟ್ರಪತಿ ಚುನಾವಣೆ ಸಂಬಂಧ ವಿಶೇಷ ಕಾರ್ಯಾಗಾರವನ್ನು ಆಯೋಜಿಸಿತ್ತು. ಈ ಕಾರ್ಯಾಗಾರದಲ್ಲಿ 2022ರ ಅಧ್ಯಕ್ಷೀಯ ಚುನಾವಣೆಗೆ ನಿಯೋಜಿಸಲಾದ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಮತ್ತು ಸಿಇಒಗಳು ಭಾಗವಹಿಸಿದ್ದರು. ಮುಖ್ಯ ಚುನಾವಣಾ ಆಯುಕ್ತ ಎಸ್ ರಾಜೀವ್ ಕುಮಾರ್ ಮತ್ತು ಇಸಿಎಸ್ ಅನುಪ್ ಚಂದ್ರ ಪಾಂಡೆ ಅವರು ಕಾರ್ಯಾಗಾರದಲ್ಲಿ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದರು.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ತಮ್ಮ ಭಾಷಣದಲ್ಲಿ, ನ್ಯಾಯಸಮ್ಮತ, ಪಾರದರ್ಶಕ ಮತ್ತು ದೋಷರಹಿತ ಚುನಾವಣೆ ನಡೆಸಲು ಎಲ್ಲಾ ಇಸಿಐ ಸೂಚನೆಗಳು ಮತ್ತು ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಗಮನಕ್ಕೆ ತೆಗೆದುಕೊಂಡು ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಣ ಅಕ್ರಮ ವರ್ಗಾವಣೆ: ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್‌ಗೆ 14 ದಿನ ನ್ಯಾಯಾಂಗ ಬಂಧನ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ನಾಯಕ ಹಾಗೂ ದೆಹಲಿಯ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ ಕೋರ್ಟ್ ಆದೇಶ ನೀಡಿದೆ, ಸತ್ಯೇಂದ್ರ ಜೈನ್ ಅವರ ಕಸ್ಟಡಿ ಅವಧಿ ಇಂದಿಗೆ ಕೊನೆಯಾದ ಹಿನ್ನಲೆಯಲ್ಲಿ ಇಲ್ಲಿನ ರಾವುಜ್ ಅವೆನ್ಯೂ ಕೋರ್ಟ್ 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸಿದೆ. ಇಂದಿನವರೆಗೂ ಅವರನ್ನು ಕೋರ್ಟ್ ಜಾರಿ ನಿರ್ದೇಶನಾಲಯದ (ಇಡಿ) ವಶಕ್ಕೆ ನೀಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಕಳೆದ ವಾರ ಜೈನ್ ಅವರ ನಿವಾಸ ಮತ್ತು ಸಂಬಂಧಿತ ಇತರ ಸ್ಥಳಗಳಲ್ಲಿ ಇ.ಡಿ ಶೋಧ ಕಾರ್ಯಾಚರಣೆ ನಡೆಸಿತ್ತು. ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ರೂ.2.85 ಕೋಟಿ ನಗದು ಮತ್ತು 133 ಚಿನ್ನದ ನಾಣ್ಯಗಳನ್ನು ವಶಕ್ಕೆ ಪಡೆಯಲಾಗಿದೆ.

ರೇವ್ ಪಾರ್ಟಿ ಮೇಲೆ ಪೊಲೀಸರ ದಾಳಿ ನಟಿ ಶ್ರದ್ಧಾ ಕಪೂರ್ ಸಹೋದರ ಸಿದ್ಧಾಂತ್ ಕಪೂರ್ ಬಂಧನ

ಬೆಂಗಳೂರು: ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಪೊಲೀಸರು ದಾಳಿ ನಡೆಸಿದ್ದು, ಈ ವೇಳೆ ಬಾಲಿವುಡ್ ನಟಿ ಶ್ರದ್ಧಾ ಕಪೂರ್ ಅವರ ಸಹೋದರ ಸಿದ್ಧಾಂತ್ ಕಪೂರ್ ಅವರನ್ನು ಬಂಧನಕ್ಕೊಳಪಡಿಸಿದ್ದಾರೆಂದು.

ನಗರದ ಹಲಸೂರಿನ ಹೋಟೆಲ್‌ವೊಂದರಲ್ಲಿ ರೇವ್ ಪಾರ್ಟಿ ನಡೆಯುತ್ತಿದ್ದ ಕುರಿತು ಖಚಿತ ಮಾಹಿತಿಗಳು ಲಭ್ಯವಾದ ಹಿನ್ನೆಲೆಯಲ್ಲಿ ಕಳೆದ ರಾತ್ರಿ ಪೊಲೀಸರು ದಾಳಿ ನಡೆಸಿದ್ದರು.

ಈ ವೇಳೆ ಡ್ರಗ್ಸ್ ಸೇವಿಸಿ ಮತ್ತಿನಲ್ಲಿದ್ದ ಶ್ರದ್ಧಾ ಕಪೂರ್ ಅವರ ಸಹೋದರ ಸಿದ್ಧಾಂತ್ ಕಪೂರ್ ಸೇರಿದಂತ 6 ಮಂದಿಯನ್ನು ಬಂಧನಕ್ಕೊಳಪಡಿಸಿದ್ದಾರೆ. ಬಂಧನದ ಬಳಿಕ 6 ಮಂದಿಯನ್ನು ಪೊಲೀಸರು ವೈದ್ಯಕೀಯ ಪರೀಕ್ಷೆಗೊಳಪಡಿಸಿದ್ದು, ವರದಿಯಲ್ಲಿ ಸಿದ್ಧಾಂತ್ ಕಪೂರ್ ಡ್ರಗ್ಸ್ ಸೇವನೆ ಮಾಡಿರುವುದು ದೃಢಪಟ್ಟಿದೆ ಎಂದು ವರದಿಗಳು ತಿಳಿಸಿವೆ.

ಮೈಸೂರಿನ ಬಾಯ್‌ಫ್ರೆಂಡ್ ಜತೆ ಪೊಲೀಸ್ ಠಾಣೆಗೆ ಹೋಗಿ ಗಳಗಳನೆ ಅತ್ತ ರಾಖಿ ಸಾವಂತ್

ಮುಂಬೈ: ತನಗಿಂತ ವಯಸ್ಸಿನಲ್ಲಿ ಚಿಕ್ಕವನಾಗಿರುವ ಮೈಸೂರಿನ ಆದಿಲ್ ಖಾನ್‌ನನ್ನು ತನ್ನ ಹೊಸ ಬಾಯ್‌ಫ್ರೆಂಡ್ ಎಂದು ಪರಿಚಯ ಮಾಡಿಸಿ, ಭಾರಿ ಸುದ್ದಿಯಾಗಿರುವ ಹಾಟ್ ನಟಿ ರಾಖಿ ಸಾವಂತ್ ಇದೀಗ ಈತನ ಜತೆ ಪೊಲೀಸ್ ಠಾಣೆಯಲ್ಲಿ ಕಾಣಿಸಿಕೊಂಡಿದ್ದು, ಒಂದೇ ಸಮನೆ ಗಳಗಳ ಅತ್ತಿದ್ದಾರೆ.



ಮೈಸೂರು ಬಾಯ್‌ಫ್ರೆಂಡ್ ಜೊತೆ ರಾಖಿ

ಮುಂಬೈನ ಓಶಿವಾರಾ ಪೊಲೀಸ್ ಠಾಣೆಗೆ ಆದಿಲ್ ಖಾನ್‌ನನ್ನು ಕರೆದುಕೊಂಡು ಹೋಗಿರುವ ರಾಖಿ, ಬಿಟ್ಟೂಬಿಡದೇ ಅತ್ತಿದ್ದಾರೆ. ಜತೆಗೆ ಮಾಜಿ ಗಂಡನ ವಿರುದ್ಧ ದೂರು ದಾಖಲಿಸಿದ್ದಾರೆ. ಆದಿಲ್ ಅದೆಷ್ಟೇ ಸಮಾಧಾನಪಡಿಸಿದರೂ ಆಕೆ ಸಮಾಧಾನ ಆಗುತ್ತಿಲ್ಲ. ಇದರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಈಗ ಭಾರಿ ವೈರಲ್ ಆಗಿದೆ. ಈಕೆಯ ಮಾಜಿ ಪತಿ ರಿತೇಶ್ ತುಂಬಾ ಹಿಂಸೆ ನೀಡುತ್ತಿದ್ದಾರಂತೆ. ಅವರ ವಿರುದ್ಧ ರಾಖಿ ಠಾಣೆಯಲ್ಲಿ ದೂರು ದಾಖಲು ಮಾಡಿ, ನಂತರ ಮಾಧ್ಯಮದವರ ಎದುರು ಕೂಡ ಕಣ್ಣೀರಿಟ್ಟಿದ್ದಾರೆ. ನಾನು ಆದಿಲ್ ಖಾನ್ ಜತೆ ಸಂತೋಷವಾಗಿ ಇದ್ದೇನೆ. ಆದರೆ ಇದನ್ನು ರಿತೇಶ್ ಸಹಿಸುತ್ತಿಲ್ಲ. ಹೇಗಾದರೂ ಮಾಡಿ ನಮ್ಮಿಬ್ಬರ ಸಂಬಂಧ ಹಾಳು ಮಾಡಲು ಯೋಚಿಸಿದ್ದಾನೆ. ನಿನ್ನ ಜೀವನ ನಾಶ ಮಾಡ್ತೀನಿ ಅಂತ ನನಗೆ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಹೇಳಿದ್ದಾರೆ.

ರಿತೇಶ್ ನನಗೆ ತುಂಬಾ ತೊಂದರೆ ನೀಡುತ್ತಿದ್ದಾನೆ. ಅವನು ನನ್ನ ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಮತ್ತು ನನ್ನ ಜಿಮೇಲ್ ಖಾತೆಯನ್ನು ಹ್ಯಾಕ್ ಮಾಡಿದ್ದಾನೆ. ನಾವು ಒಟ್ಟಿಗೆ ಇದ್ದಾಗ ಅವನು ನನ್ನ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ವಹಿಸುತ್ತಿದ್ದನು ಮತ್ತು ನಾವು ಬೇರ್ಪಟ್ಟ ನಂತರ ಅವನ ಮೇಲೆ ಭರವಸೆಯಿಂದಾಗಿ ಪಾಸ್‌ವರ್ಡ್‌ಗಳನ್ನು ಬದಲಾಯಿಸಲಿಲ್ಲ. ಅದನ್ನು ಆತ ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾನೆ. ಅವನು ನನ್ನ ಎಲ್ಲಾ ಖಾತೆಗಳಲ್ಲಿ ಅವನ ಸಂಖ್ಯೆ ಮತ್ತು ಹೆಸರನ್ನು ನಮೂದಿಸಿದ್ದಾನೆ ಎಂದು ಗೋಳೋ ಎಂದಿದ್ದಾರೆ ರಾಖಿ.

ಆತ ನನ್ನ ಫೋನ್ ಕಾಲ್ ರಿಸೀವ್ ಮಾಡುತ್ತಿಲ್ಲ. ನನ್ನ ಖಾತೆಯಲ್ಲಿ ಕೆಲವು ಟಿ.ವಿ. ಚಾನೆಲ್‌ಗಳ ಬಗ್ಗೆ ಅಸಹ್ಯವಾದ ವಿಷಯವನ್ನು ಬರೆಯುತ್ತಿದ್ದಾನೆ. ನಾನು ಅದನ್ನು ಬರೆಯುತ್ತಿದ್ದೇನೆ ಎಂದು ಜನರೆಲ್ಲ ಭಾವಿಸುತ್ತಾರೆ. ಅವರು ನನ್ನನ್ನು ಚಾನಲ್‌ನಿಂದ ನಿಷೇಧಿಸಬೇಕು ಮತ್ತು ಸಲ್ಮಾನ್ ಖಾನ್ ಭಾಯ್ ಅವರೊಂದಿಗಿನ ನನ್ನ ಸಂಬಂಧವನ್ನು ಹಾಳುಮಾಡಬೇಕೆಂಬುದು ರಿತೇಶ್ ಉದ್ದೇಶ. ಇನ್‌ಸ್ಟಾಗ್ರಾಮ್‌ನಲ್ಲಿ ಸೆಲೆಬ್ರಿಟಿಗಳು ಪೋಸ್ಟ್ ಮಾಡಿದರೆ ಅದಕ್ಕೂ ದುಡ್ಡು ಸಿಗುತ್ತದೆ, ಅದನ್ನೆಲ್ಲಾ ತಾನೇ ತೆಗೆದುಕೊಳ್ಳುತ್ತಿದ್ದಾನೆ, ಜತೆಗೆ ನನ್ನ ವರ್ಚಸ್ಸನ್ನು ಹಾಳು ಮಾಡುತ್ತಿದ್ದಾನೆ ಎಂದು ರಾಖಿ ಕಣ್ಣೀರಿಟ್ಟಿದ್ದಾರೆ.

ಆನ್‌ಲೈನ್ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಜಾಹೀರಾತಿನಿಂದ ದೂರವಿರಿ

ಮಾಧ್ಯಮಗಳಿಗೆ ಕೇಂದ್ರ ಸೂಚನೆ

ನವದೆಹಲಿ: ಆನ್‌ಲೈನ್ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಜಾಹೀರಾತುಗಳಿಂದ ದೂರವಿರುವಂತೆ ಮುದ್ರಣ, ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮಗಳಿಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಸೋಮವಾರ ಸೂಚನೆ ನೀಡಿದೆ.


ದೇಶದ "ಹೆಚ್ಚಿನ ಭಾಗಗಳಲ್ಲಿ" ಬೆಟ್ಟಿಂಗ್ ಮತ್ತು ಜೂಜಾಟವು ಕಾನೂನುಬಾಹಿರವಾಗಿದೆ. ಆನ್‌ಲೈನ್ ಬೆಟ್ಟಿಂಗ್ ಗಮನಾರ್ಹ ಆರ್ಥಿಕ ಮತ್ತು ಸಾಮಾಜಿಕ-ಆರ್ಥಿಕ ಅಪಾಯವನ್ನುಂಟುಮಾಡುತ್ತದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಸಾರ್ವಜನಿಕ ಹಿತಾಸಕ್ತಿಯಿಂದ ಈ ಸಲಹೆಯನ್ನು ನೀಡಲಾಗಿದೆ. ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್‌ಗಳು/ಪ್ಲಾಟ್‌ಫಾರ್ಮ್‌ಗಳ ಹಲವಾರು ಜಾಹೀರಾತುಗಳು ಮುದ್ರಣ, ಎಲೆಕ್ಟ್ರಾನಿಕ್, ಸಾಮಾಜಿಕ ಮತ್ತು ಆನ್‌ಲೈನ್ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಬೆಳಕಿಗೆ ಬರುತ್ತಿದ್ದು, ಇದರಿಂದ ದೂರವಿರುವಂತೆ ಎಂದು ಸಚಿವಾಲಯ ಹೇಳಿದೆ.

ಆನ್‌ಲೈನ್ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಜಾಹೀರಾತು ಪ್ರಕಟಿಸುವುದನ್ನು ತಡೆಯಲು ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಕೇಂದ್ರ ಸೂಚನೆ ನೀಡಿದೆ.

ಪ್ರಧಾನಿ ಮೋದಿ, ಅದಾನಿ ವಿರುದ್ಧ ವಿವಾದಾತ್ಮಕ ಆರೋಪ: ಲಂಕಾದ ಉನ್ನತ ಅಧಿಕಾರಿ ರಾಜೀನಾಮೆ

ಕೋಲಂಬೋ: ಪವನ ವಿದ್ಯುತ್ ಯೋಜನೆಯನ್ನು ಅದಾನಿ ಗ್ರೂಪ್‌ಗೆ ಮಂಜೂರು ಮಾಡುವಂತೆ ಭಾರತದ ಪ್ರಧಾನಿ ನರೇಂದ್ರ ಮೋದಿ ಶ್ರೀಲಂಕಾ ಸರ್ಕಾರದ ಮೇಲೆ ಒತ್ತಡ ಹೇರಿದ್ದಾರೆ ಎಂದು ಆರೋಪಿಸಿದ ಕೆಲವೇ ದಿನಗಳಲ್ಲಿ, ಸಿಲೋನ್ ಎಲೆಕ್ಟ್ರಿಸಿಟಿ ಬೋರ್ಡ್(ಸಿಇಬಿ) ಅಧ್ಯಕ್ಷ ಎಂಎಂಸಿ ಫರ್ಡಿನಾಂಡೋ ರಾಜೀನಾಮೆ ನೀಡಿದ್ದಾರೆ. ಎಂಎಂಸಿ ಫರ್ಡಿನಾಂಡೋ ಅವರ ಈ ಆರೋಪ ರಾಜಕೀಯ ವಿವಾದವನ್ನು ಹುಟ್ಟುಹಾಕಿತು. ಅಲ್ಲದೆ ಆ ಹೇಳಿಕೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಗಳು ಕೇಳಿಬಂದಿದ್ದು ಇದೀಗ ಅಂತಿಮವಾಗಿ ಅವರು ರಾಜೀನಾಮೆ ನೀಡಿ ಹೊರನಡೆದಿದ್ದಾರೆ.



ಶ್ರೀಲಂಕಾದ ವಿದ್ಯುತ್ ಮತ್ತು ಇಂಧನ ಸಚಿವ ಕಾಂಚನಾ ವಿಜೆಸೆಕೆರಾ ಅವರು ಟ್ವೀಟ್ ಮಾಡಿದ್ದಾರೆ. ಸಿಇಬಿ ಅಧ್ಯಕ್ಷ ಎಂಎಂಸಿ ಫರ್ಡಿನಾಂಡೋ ಅವರು ನನಗೆ ಸಲ್ಲಿಸಿದ ರಾಜೀನಾಮೆ ಪತ್ರವನ್ನು ಅಂಗೀಕರಿಸಿದ್ದೇನೆ. ಸಿಇಬಿಯ ನೂತನ ಅಧ್ಯಕ್ಷರಾಗಿ ಉಪಾಧ್ಯಕ್ಷರಾದ ನಳಿಂದ ಇಳಂಗೋಕೋನ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ ಎಂದು ಟ್ವೀಟಿಸಿದ್ದಾರೆ.

ನರೇಂದ್ರ ಮೋದಿ ಒತ್ತಡದಿಂದಾಗಿ ಶ್ರೀಲಂಕಾದ ಅಧ್ಯಕ್ಷ ಗೋತಬಯ ರಾಜಪಕ್ಸೆ ಅವರು ಅದಾನಿ ಗ್ರೂಪ್‌ಗೆ 500 ಮೆಗಾವ್ಯಾಟ್ ನವೀಕರಿಸಬಹುದಾದ ಇಂಧನ ಯೋಜನೆಯನ್ನು ನೀಡುವಂತೆ ಕೇಳಿಕೊಂಡರು ಎಂದು ಫರ್ಡಿನಾಂಡೋ ಸಾರ್ವಜನಿಕ ಉದ್ಯಮಗಳ ಸಂಸತ್ತಿನ ಕಾವಲು ಸಮಿತಿ ಅಧಿವೇಶನದಲ್ಲಿ ಹೇಳಿದ್ದರು. ನಂತರ, ಫರ್ಡಿನಾಂಡೋ ತಾನು ಹೇಳಿದ್ದು ಸರಿಯಲ್ಲ ಎಂದು ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡಿದ್ದರು.

ಎಂಎಂಸಿ ಫರ್ಡಿನಾಂಡೋ ಅವರ ಹೇಳಿಕೆಯನ್ನು ರಾಜಪಕ್ಸೆ ಟ್ವೀಟ್ ಮೂಲಕ ತಿರಸ್ಕರಿಸಿದ್ದರು. ಯಾವುದೇ ನಿರ್ದಿಷ್ಟ ವ್ಯಕ್ತಿ ಅಥವಾ ಘಟಕಕ್ಕೆ ಈ ಯೋಜನೆಯನ್ನು ನೀಡುವ ಅಧಿಕಾರವನ್ನು ನಾನು ಸ್ಪಷ್ಟವಾಗಿ ನಿರಾಕರಿಸುತ್ತೇನೆ. ಈ ನಿಟ್ಟಿನಲ್ಲಿ ಜವಾಬ್ದಾರಿಯುತ ಸಂವಹನವು ಅನುಸರಿಸುತ್ತದೆ ಎಂದು ನಾನು ನಂಬುತ್ತೇನೆ ಎಂದು ಟ್ವೀಟಿಸಿದ್ದರು.

ನೀರಾವರಿ ಯೋಜನೆ ಅನುಷ್ಠಾನದಲ್ಲಿ ವಿಳಂಬ

ಗುತ್ತಿಗೆದಾರರಿಗೆ ಶೇ.1ರಿಂದ 7ರಷ್ಟು ದಂಡ

ಕಲಬುರಗಿ: ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ತ್ವರಿತಗೊಳಿಸಲು, ವೆಚ್ಚದ ಹೆಚ್ಚಳ ತಪ್ಪಿಸಲು ಮತ್ತು ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಲ್ಲಿ ಶಿಸ್ತು ತರಲು ಯೋಜನೆಗಳನ್ನು ವಿಳಂಬಗೊಳಿಸುವ ಗುತ್ತಿಗೆದಾರರಿಗೆ ದಂಡ ವಿಧಿಸಲು ಸರ್ಕಾರ ನಿರ್ಧರಿಸಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.



ಅಂತಹ ಗುತ್ತಿಗೆದಾರರಿಂದ ಯೋಜನೆಯ ಉಳಿದ ವೆಚ್ಚದ ಶೇ. 1-7ರಷ್ಟು ದಂಡ ವಿಧಿಸಲು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು. ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲಾ ಯೋಜನೆಗಳಿಗೆ ದಂಡದ ಷರತ್ತು ಅನ್ವಯಿಸುತ್ತದೆ ಎಂದು ಅವರು ಹೇಳಿದರು. ಗುತ್ತಿಗೆದಾರರು ವಿಳಂಬಕ್ಕೆ ನಿಜವಾದ ಕಾರಣ ನೀಡಿದರೆ ದಂಡದಿಂದ ವಿನಾಯಿತಿ ನೀಡಲಾಗುವುದು ವಿಳಂಬವು ಯೋಜನೆಗಳ ವೆಚ್ಚವನ್ನು ಹೆಚ್ಚಿಸುತ್ತಿದೆ, ಇದು ಬೊಕ್ಕಸದ ಮೇಲೆ ಪರಿಣಾಮ ಬೀರುತ್ತಿದೆ. ಹೀಗಾಗಿ ಗುತ್ತಿಗೆದಾರರಿಗೆ ದಂಡ ವಿಧಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು. ನೀರಾವರಿ ಇಲಾಖೆಯು ಈಗಾಗಲೇ ಅಂತಹ ಗುತ್ತಿಗೆದಾರರಿಗೆ ದಂಡ ವಿಧಿಸಲು ಪ್ರಾರಂಭಿಸಿದ್ದು, ಕಲಬುರಗಿ ವ್ಯಾಪ್ತಿಯ ಐದು ಗುತ್ತಿಗೆದಾರರನ್ನು ದಂಡ ವಿಧಿಸಿ ಕಪ್ಪು ಪಟ್ಟಿಗೆ ಸೇರಿಸಲು ಕೃಷ್ಣಾ ನೀರಾವರಿ ನಿಗಮ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಗಿದೆ ಎಂದು ಹೇಳಿದರು.

ಪ್ರತಿಭಟಿಸಿದ್ದ ವಲಸಿಗರ ಕುವೈತ್ ಗಡಿಪಾರು

ಕುವೈತ್: ಭಾರತದ ರಾಜಕಾರಣಿ ನೂಪುರ್ ಶರ್ಮಾ ಪ್ರವಾದಿ ಮೊಹಮದ್ ಕುರಿತು ನೀಡಿದ್ದ ಹೇಳಿಕೆಯನ್ನು ಪ್ರತಿಭಟಿಸಿದ್ದ ರಾಷ್ಟ್ರಗಳ ಪೈಕಿ ಕುವೈತ್ ಕೂಡ ಒಂದಾಗಿತ್ತು. ಈಗ ಅದೇ ಕುವೈತ್ ತನ್ನ ದೇಶದಲ್ಲಿ ಹೇಳಿಕೆಯನ್ನು ಖಂಡಿಸಿ ಪ್ರತಿಭಟಿಸಿದ್ದ ವಲಸಿಗರನ್ನು ಗಡಿಪಾರು ಮಾಡಲು ಮುಂದಾಗಿದೆ. ಗಲ್ಫ್ ರಾಷ್ಟ್ರಗಳಲ್ಲಿ ಇಂತಹ ಪ್ರತಿಭಟನೆಗಳಿಗೆ ಅವಕಾಶವಿಲ್ಲದ ಹಿನ್ನೆಲೆಯಲ್ಲಿ ಕುವೈತ್ ಈ ನಿರ್ಧಾರ ಕೈಗೊಂಡಿದೆ. ಶುಕ್ರವಾರದ ಪ್ರಾರ್ಥನೆಯ ಬಳಿಕ ಪ್ರವಾದಿ ಮೊಹಮ್ಮದ್ ಪರ ಪ್ರತಿಭಟನೆ ನಡೆಸಿದ ವಲಸಿಗರನ್ನು ಬಂಧಿಸಿ ಗಡಿಪಾರು ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಅವರ ದೇಶಗಳಿಗೆ ಗಡಿಪಾರು ಮಾಡಲಾಗುತ್ತದೆ.

ಸೌದಿ ಅರೇಬಿಯಾ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಪ್ರಕಾರ ಗಲ್ಫ್ ರಾಷ್ಟ್ರಗಳಲ್ಲಿ ವಲಸಿಗರಿಗೆ ಪ್ರತಿಭಟನೆ ನಡೆಸುವ ಅವಕಾಶವಿಲ್ಲ. ಈ ರೀತಿ ಪ್ರತಿಭಟನೆ ಮಾಡಿದವರನ್ನು ಗಡಿಪಾರು ಮಾಡಲಾಗುತ್ತದೆ ಹಾಗೂ ಮತ್ತೆ ಕುವೈತ್‌ಗೆ ಬರುವುದಕ್ಕೆ ಅವಕಾಶವಿರುವುದಿಲ್ಲ.

ಪ್ರತಿಭಟನೆಯಲ್ಲಿ ಯಾವೆಲ್ಲಾ ರಾಷ್ಟ್ರದ ಮಂದಿ ಭಾಗಿಯಾಗಿದ್ದರು ಎಂಬ ಬಗ್ಗೆ ಮಾಹಿತಿ ಇಲ್ಲ. ಕುವೈತ್‌ನಲ್ಲಿ ವಲಸೆ ಹೋಗಿರುವ ಭಾರತೀಯರ ಸಂಖ್ಯೆ 2019 ರಲ್ಲೇ 10 ಲಕ್ಷ ದಾಟಿತ್ತು. ಈ ದೇಶದಲ್ಲಿ ಭಾರತೀಯರ ಸಂಖ್ಯೆ ವಾರ್ಷಿಕ ಶೇ.5-6 ರಷ್ಟು ಏರಿಕೆಯಾಗುತ್ತಿದೆ.

ನೂಪುರ್ ಶರ್ಮಾಗೆ ಗೌತಮ್ ಗಂಭೀರ್ ಬೆಂಬಲ

ನವದೆಹಲಿ: ಪ್ರವಾದಿ ಮೊಹಮ್ಮದ್ ಪೈಗಂಬರ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿ, ದೇಶ- ವಿದೇಶಗಳಲ್ಲಿ ವಿವಾದಕ್ಕೆ ಕಾರಣವಾಗಿರುವ ಅಮಾನತುಗೊಂಡಿರುವ ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಅವರಿಗೆ ಮಾಜಿ ಕ್ರಿಕೆಟಿಗ, ರಾಜಕಾರಣಿ ಗೌತಮ್ ಗಂಭೀರ್ ಬೆಂಬಲ ನೀಡಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಗಂಭೀರ್, ಕ್ಷಮೆಯಾಚಿಸಿದ ಮಹಿಳೆಯ ವಿರುದ್ಧ ದೇಶಾದ್ಯಂತ ದ್ವೇಷ ಮತ್ತು ಕೊಲೆ ಬೆದರಿಕೆ ಮುಂದುವರೆದಿದ್ದರೂ ಜಾತ್ಯತೀತ ಉದಾರವಾದಿಗಳು ಎಂದು ಕರೆಯಲ್ಪಡುವವರು ಮೌನವಾಗಿರುತ್ತಾರೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಸದೆ ಸಾಧ್ವಿ ಪ್ರಜ್ಞಾ ಠಾಕೂರ್ ಕೂಡಾ ಸತ್ಯ ಹೇಳುವುದು ಬಂಡಾಯವಾದರೆ, ನಾನು ಕೂಡಾ ಬಂಡಾಯವೇ ಎಂದು ಟ್ವೀಟ್ ಮಾಡುವ ಮೂಲಕ ನೂಪುರ್ ಶರ್ಮಾ ಅವರಿಗೆ ಬೆಂಬಲ ನೀಡಿದ್ದಾರೆ.

ಭ್ರಷ್ಟಾಚಾರವನ್ನು ಬೆಂಬಲಿಸಿ ಕಾಂಗ್ರೆಸ್ ಪ್ರತಿಭಟನೆ: ಬಿಜೆಪಿ ನಾಯಕರ ತಿರುಗೇಟು

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿಗೆ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದೆಹಲಿ ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಿದ್ದು, ಇದನ್ನು ಖಂಡಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.

ಈ ಕುರಿತು ಮಾತನಾಡಿದ ಬಿಜೆಪಿ ನಾಯಕಿ ಹಾಗೂ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು, ಕಾಂಗ್ರೆಸ್ ಇಂದು ಪ್ರತಿಭಟನೆ ನಡೆಸುವ ಮೂಲಕ ಭ್ರಷ್ಟಾಚಾರದ ಬೆಂಬಲಕ್ಕೆ ನಿಂತಿದೆ. ಜೈಲಿನಿಂದ ಜಾಮೀನಿನ ಮೇಲೆ ಬಂದವರು ದೆಹಲಿ ಸುತ್ತುವರೆಯಲು ಬನ್ನಿ ಎಂದು ಘೋಷಿಸಿದ್ದಾರೆ. ತನಿಖಾ ಸಂಸ್ಥೆಯ ಮೇಲೆ ಒತ್ತಡ ಹೇರಲು ಕಾಂಗ್ರೆಸ್ ಆಡಳಿತದ ಸಚಿವರನ್ನು ಆಹ್ವಾನಿಸಲಾಗಿದೆ. ಏಜೆನ್ಸಿಯ ಮೇಲೆ ಈ ರೀತಿ ಒತ್ತಡಕ್ಕೆ ನೀವು ಯಾವ ಹೆಸರನ್ನು ನೀಡುತ್ತೀರಿ ಎಂದು ಪ್ರಶ್ನಿಸಿದ್ದಾರೆ. ಯಾರೂ ಸಹ ಕಾನೂನಿಗಿಂತ ದೊಡ್ಡವರಲ್ಲ ರಾಹುಲ್ ಗಾಂಧಿ ಕೂಡ ಎಂದು ಕೇಂದ್ರ ಸಚಿವೆ ಹೇಳಿದ್ದಾರೆ.



ಇನ್ನು ನ್ಯಾಷನಲ್ ಹೆರಾಲ್ಡ್ ಪ್ರಕರಣದ ಕುರಿತು ಮಾತನಾಡಿದ ಬಿಜೆಪಿ ನಾಯಕ ಸಂಬಿತ್ ಪಾತ್ರ ಅವರು, ಕಾಂಗ್ರೆಸ್ ಇಂದು ಮಾಡುತ್ತಿರುವುದು 'ಜಶ್ನ್-ಎ-ಭ್ರಷ್ಟಾಚಾರ್' ಭ್ರಷ್ಟಾಚಾರವನ್ನು ಸಂಭ್ರಮಿಸುತ್ತಿದೆ. ಭ್ರಷ್ಟಾಚಾರದ ಮೆಟ್ಟಿಲೇರಿರುವ ರಾಹುಲ್ ಗಾಂಧಿ ಮಾಡೆಲ್ ಅನ್ನು ಪ್ರಾರಂಭಿಸಲು ಕಾಂಗ್ರೆಸ್ ಮತ್ತೆ ಪ್ರಯತ್ನಿಸಿದೆ. ಆದರೆ ಇದರಲ್ಲಿ ಅವರು ಮತ್ತೆ ವಿಫಲರಾಗುತ್ತಾರೆ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಭ್ರಷ್ಟಾಚಾರದ ಪರವಾಗಿ ಸತ್ಯಾಗ್ರಹ ಮಾಡುತ್ತಿರುವುದನ್ನು ಜಗತ್ತು ಗಮನಿಸುತ್ತಿದೆ. ಮಹಾತ್ಮಾ ಗಾಂಧಿ ಜಗತ್ತಿಗೆ ಸತ್ಯಕ್ಕಾಗಿ ಹೋರಾಡಲು ಕಲಿಸಿದರೆ, ಕಾಂಗ್ರೆಸ್ ಜಗತ್ತಿಗೆ ಭ್ರಷ್ಟಾಚಾರವನ್ನು ಆಚರಿಸಲು ಮತ್ತು ಅದಕ್ಕಾಗಿ ಹೋರಾಡಲು ಕಲಿಸಿದೆ. ಗಾಂಧಿ ಕುಟುಂಬ ಜಾಮೀನಿನ ಮೇಲೆ ಹೊರಗಿದೆ. ಇದು ರಾಜಕೀಯ ವಿಷಯವಲ್ಲ ಎಂದರು.